ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ




ಕೊರೋನೋತ್ತರ 'ನ್ಯೂ-ನಾರ್ಮಲ್'?

ಸಂಪುಟ 14 | ಸಂಚಿಕೆ 30 | ಜುಲೈ 20–26, 2020 | ಪುಟ 16 | ರೂ. 10

Web : www.janashakthi.co.in e-mail : js weekly@yahoo.com



ಕೇರಳದಲ್ಲಿ ಅನೀತಿಯುತ ರಾಜಕೀಯ



ವಿದ್ಯುತ್ ಕಾಯ್ದೆ ತಿದ್ದುಪಡಿ ಏಕೆ ಬೇಡ?



ರೈಲ್ವೆ ಖಾಸಗೀಕರಣದ ರಾಜಕೀಯ

ನ್ಯಾಯಸಮ್ಮತ ಸಮಾಜಕ್ಕೆ ಬೇಕು ಭೂ ಸುಧಾರಣೆಗಳು



'ಧನ್ವಂತರಿ ಚಿಕಿತ್ಸೆ'ಗೆ ಮೊರೆ ಇಡುತ್ತಿರುವ ಗ್ರಾಮೀಣ ನರಳಾಟ

ಎಲ್ಲ ರಾಜಕೀಯ ಬಂಧಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು –ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ


ಸರಕಾರ ಜೈಲಿನಲ್ಲಿಟ್ಟಿರುವ ಹಲವು ರಾಜಕೀಯ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರ ಆರೋಗ್ಯ ಪರಿಸ್ಥಿತಿ ಹದಗೆಡುತ್ತಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ಅವರಲ್ಲಿ ಕೆಲವರಿಗೆ ಜೈಲಿನಲ್ಲಿ ಕೊವಿಡ್–19 ಸೋಂಕು ತಗಲಿದೆ ಎಂದು ವರದಿಯಾಗಿದೆ. ವಿಪರೀತ ಕಿಕ್ಕಿರಿದಿರುವ ಜೈಲುಗಳ ಪರಿಸ್ಥಿತಿಗಳು ಶೋಚನೀಯವಾಗಿವೆ, ಅಲ್ಲಿ ಮೂಲಭೂತ ಸೌಕರ್ಯಗಳೂ ಇಲ್ಲ. ಅವು ಅವರುಗಳ ಆರೋಗ್ಯ ಹದಗೆಡಲು ಬಹಳಷ್ಟು ಕಾರಣ. ಅಲ್ಲದೆ ಅವರಿಗೆ ಬೇರೆ ಕಾಯಿಲೆಗಳೂ ಇದ್ದು, ಬಹಳ ಸಮಯದಿಂದ ಔಷಧೋಪಚಾರಗಳಿಗೆ ಒಳಗಾಗಿದ್ದಾರೆ..

ಅಖಿಲ್ ಗೊಗೊಯ್‌ರವರಿಗೆ ಕೊವಿಡ್–19 ಸೋಂಕು ತಗಲಿರುವುದು ದೃಢಪಟ್ಟಿದೆ ಎಂದು ವರದಿಯಾಗಿದೆ. ವರವರ ರಾವ್ ಅವರ ಆರೋಗ್ಯವೂ ಆತಂಕಕಾರಿಯಾಗಿದೆ ಎಂದು ವರದಿಯಾಗಿದೆ. ಜೈಲುಗಳ ಕಿಕ್ಕಿರಿದ ಮತ್ತು ಅನಾರೋಗ್ಯಕರ ಪರಿಸ್ಥಿತಿಗಳಿಂದಾಗಿ ಗೌತಮ್ ನವ್ಲಖ, ಆನಂದ ತೇಲ್ತುಂಬ್ಡೆ, ಸುಧಾ ಭಾರದ್ವಾಜ್, ಶೋಮಾ ಸೆನ್ ಮುಂತಾದ ಕಲ್ಪಿತ ಆಪಾದನೆಗಳ ಮೇಲೆ ಜೈಲಿನಲ್ಲಿರುವ ಪ್ರಮುಖ ಮಾನವ ಹಕ್ಕು ಕಾರ್ಯಕರ್ತರು ಸೋಂಕಿಗೊಳಗಾಗುವ ಎಲ್ಲ ಅಪಾಯಗಳಿವೆ. ಬೇರೆ ರಾಜಕೀಯ ಕೈದಿಗಳಲ್ಲಿ ಪ್ರೊ. ಸಾಯಿಬಾಬಾ ಅವರ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. 90ಶೇಕಡಾ ವಿಕಲಾಂಗತೆ ಇರುವ ಇವರಿಗೆ 19 ವೈದ್ಯಕೀಯ ಸಮಸ್ಯೆಗಳಿವೆ, ಇವುಗಳಲ್ಲಿ ಹಲವು ಜೀವ ಬೆದರಿಕೆ ಇರುವಂತವು. ವಿಶ್ವಸಂಸ್ಥೆ ನೇಮಿಸಿರುವ ಮಾನವ ಹಕ್ಕುಗಳ ವಿಶೇಷ ವರದಿಗಾರರು ಕೂಡ ಕಳೆದ ವರ್ಷ ಇವರ ಆರೋಗ್ಯ ಪರಿಸ್ಥಿತಿಯಿಂದಾಗಿ ಇವರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದರು.

ಆದ್ದರಿಂದ ಎಲ್ಲ ರಾಜಕೀಯ ಬಂಧಿಗಳನ್ನು ತಕ್ಷಣವೇ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಮತ್ತು ಸಾಕಷ್ಟು ವೈದ್ಯಕೀಯ ಆರೈಕೆಯನ್ನು ಒದಗಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ಈ ನಡುವೆ 81 ವರ್ಷದ ವರವರ ರಾವ್‌ರವರಿಗೆ ಕೂಡ ಕೊವಿಡ್ ವೈರಸ್ ಸೋಂಕು ತಗುಲಿದೆ ಎಂದು ವರದಿಯಾಗಿದೆ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ಕೇಳಿದಾಗ ಎನ್‌ಐಎ ಅಂತಹ ಅಪಾಯವೇನೂ ಇಲ್ಲ ಎನ್ನುತ್ತ ಅವರೂ ಸೇರಿದಂತೆ ಎಲ್ಲ ರಾಜಕೀಯ ಬಂಧಿಗಳೂ ಜೈಲಿನಲ್ಲಿರಬೇಕು ಎಂದು ಒತ್ತಾಯ ಹಾಕಿತು. ಈಗ ಅವರಿಗೆ ಸೋಂಕು ತಗುಲಿದೆ, ಇತರರೂ ಆ ಅಪಾಯವನ್ನು ಎದುರಿಸುತ್ತಿದ್ದಾರೆ. ಇದು ಪೋಲೀಸ್ ಕಸ್ಟಡಿಯಲ್ಲಿನ ಚಿತ್ರಹಿಂಸೆಯಲ್ಲದೆ ಬೇರೇನೂ ಅಲ್ಲ ಎಂದು ಮಾನವ ಹಕ್ಕುಗಳ ಹೋರಾಟಗಾರರು ಹೇಳಿದ್ದಾರೆ.



ಆನ್‌ಲೈನ್ ಪರೀಕ್ಷೆಗಳು ಬೇಡ–ಶಿಕ್ಷಣದಲ್ಲಿ ಡಿಜಿಟಲ್ ವಿಭಜನೆ ಬರಬಾರದು

ಮಹಾಮಾರಿ ಮತ್ತು ಲಾಕ್‌ಡೌನಿನ ಪರಿಸ್ಥಿತಿಗಳಲ್ಲಿ ಭೌತಿಕ ವಿಧಾನದಲ್ಲಿ ಪರೀಕ್ಷೆಗಳನ್ನು ನಡೆಸುವುದು ಸಾಧ್ಯವಿರದಿರುವಲ್ಲಿ ಆನ್‌ಲೈನ್/ತೆರೆದ ಪುಸ್ತಕದ ಪರೀಕ್ಷೆಗಳ ಒಂದು ಏಕಪ್ರಕಾರದ ರಾಷ್ಟ್ರೀಯ ವಿಧಾನವನ್ನು ಹೇರುವ ಸುತ್ತೋಲೆಯನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ(ಯು.ಜಿ.ಸಿ.) ಜುಲೈ 6 ರಂದು ಹೊರಡಿಸಿದೆ. ಈ ಏಕಪಕ್ಷೀಯ ಪ್ರಸ್ತಾವನೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ತಿರಸ್ಕರಿಸಿದೆ.

ಈಗಲೂ ದೇಶದಲ್ಲಿ ಅಂತರ್ಜಾಲ ಸಂಪರ್ಕ ಸುಮಾರು 30ಶೇ. ಮಾತ್ರ. ನಮ್ಮ ಬಹುಪಾಲು ವಿದ್ಯಾರ್ಥಿಗಳಿಗೆ, ಅದರಲ್ಲೂ ಅಂಚಿನಲ್ಲಿರುವ, ನಮ್ಮ ದೇಶದ ದೂರ–ದೂರದ ಡಿಜಿಟಲ್ ಸಂಪರ್ಕ ಹೊಂದಿರದ ಭಾಗಗಳಲ್ಲಿ ವಾಸಿಸುತ್ತಿರುವವರಿಗೆ ಆನ್‌ಲೈನ್ ತರಗತಿಗಳ ಅಥವ ಪರೀಕ್ಷೆಗಳ ಸಾಧ್ಯತೆಗಳು ಲಭ್ಯವಿಲ್ಲ. ಈ ಯು.ಜಿ.ಸಿ. ನಿರ್ದೇಶನ ಅತ್ಯಂತ ತಾರತಮ್ಯದಿಂದ ಕೂಡಿರುವುದರಿಂದಾಗಿ ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಹೇಳಿದೆ.

ಶಿಕ್ಷಣ ನಮ್ಮ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿದೆ. ರಾಜ್ಯ ಸರಕಾರಗಳೊಂದಿಗೆ, ಬೋಧನೆ ಮತ್ತು ಪರೀಕ್ಷೆಗಳಿಗೆ ವಿಭಿನ್ನ ವ್ಯವಸ್ಥೆಗಳನ್ನು/ರಚನೆಗಳನ್ನು ಹೊಂದಿರುವ ರಾಜ್ಯ ವಿಶ್ವವಿದ್ಯಾಲಯಗಳು/ ಕಾಲೇಜುಗಳೊಂದಿಗೆ ಸಮಾಲೋಚನೆಗಳನ್ನು ನಡೆಸದೆ ಇಂತಹ ಏಕಪ್ರಕಾರದ ನಿರ್ದೇಶನವನ್ನು ಕೊಡಲು ಸಾಧ್ಯವಿಲ್ಲ. ಅಧ್ಯಾಪಕರ, ನಿರ್ದಿಷ್ಟವಾಗಿ ವಿದ್ಯಾರ್ಥಿಗಳ ಪ್ರತಿನಿಧಿಗಳೊಂದಿಗೆ ಕೂಡ ಸಮಾಲೋಚನೆ ನಡೆಸುವುದು ಮಹತ್ವದ್ದಾಗುತ್ತದೆ. ಏಕೆಂದರೆ ಇಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಿದೆ.

ಹಲವು ವಿಶ್ವವಿದ್ಯಾಲಯಗಳು ವಿಶಾಲ ಪ್ರದೇಶಗಳಲ್ಲಿ ವ್ಯಾಪಿಸಿರುವ ಸಂಯೋಜಿತ ಕಾಲೇಜುಗಳನ್ನು ಹೊಂದಿವೆ. ಏರುತ್ತಿರುವ ಸೋಂಕು ಮತ್ತು ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಹಲವಾರು ವಿದ್ಯಾರ್ಥಿಗಳಿಗೆ ಇಂಟರ್ನೆಟ್ ಲಭ್ಯತೆ ಇರುವುದಿಲ್ಲ ಮತ್ತು ಅವರು ಆನ್‌ಲೈನ್ ಶಿಕ್ಷಣ/ ಪರೀಕ್ಷೆಗಳಲ್ಲಿ ಭಾಗವಹಿಸುವುದು ಸಾಧ್ಯವಾಗುವುದಿಲ್ಲ.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಡಿಜಿಟಲ್ ವಿಭಜನೆಯನ್ನು ಒಪ್ಪಲು ಸಾಧ್ಯವಿಲ್ಲ. ಆದರೆ ಅಂತಿಮ ವರ್ಷದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಮುಂದಿನ ದಾರಿಯನ್ನು ಆರಿಸಿಕೊಳ್ಳಲು ಅನುವು ಮಾಡಿಕೊಡಲು ಪರೀಕ್ಷೆ ನಡೆಸಿ ಅವರಿಗೆ ಪದವಿಗಳನ್ನು ಪ್ರದಾನ ಮಾಡಬೇಕಾಗಿದೆ. ಆದ್ದರಿಂದ ಅದಕ್ಕೆ, ಹಿಂದಿನ ಸೆಮಿಸ್ಟರುಗಳಲ್ಲಿ ಅವರು ಪಡೆದಿರುವ ಅವರ ಮೌಲ್ಯಮಾಪನಗಳು ಅವರಿಗೆ ಪದವಿ ಪ್ರದಾನ ಮಾಡುವ ಮೌಲ್ಯಮಾಪನಗಳ ಆಧಾರವಾಗಬೇಕಾಗುತ್ತದೆ.

ವಿದ್ಯಾರ್ಥಿಗಳು ಈಗ ಅನಿಶ್ಚಿತತೆಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸಂವೇದನಾ ಶೂನ್ಯತೆಯಿಂದಾಗಿ ತೀವ್ರ ಮಾನಸಿಕ ವೇದನೆಗಳ ಮೂಲಕ ಹಾದು ಹೋಗುತ್ತಿದ್ದಾರೆ. ಆನ್‌ಲೈನ್ ಪರೀಕ್ಷೆಗಳ ಪ್ರಸ್ತಾವನೆ ಅವರನ್ನು ಇನ್ನಷ್ಟು ವೇದನೆಗಳಿಗೆ ಒಳಪಡಿಸುತ್ತದೆ. ಈಗಾಗಲೇ ಆನ್‌ಲೈನ್ ತರಗತಿಗಳನ್ನು ಲಭ್ಯಗೊಳಿಸಿಕೊಳ್ಳುವುದು ಸಾಧ್ಯವಾಗದ್ದರಿಂದ ವಿದ್ಯಾರ್ಥಿಗಳು ತಮ್ಮ ಬದುಕನ್ನೇ ಅಂತ್ಯಗೊಳಿಸಿ ಕೊಂಡಿರುವ ದುರಂತಮಯ ಉದಾಹರಣೆಗಳು ಕಂಡು ಬಂದಿವೆ.

ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳಿಗೆ ಈಗಾಗಲೇ ಹಿಂದಿನ ಸೆಮಿಸ್ಟರುಗಳಲ್ಲಿ ಅವರು ಪಡೆದಿರುವ ಮೌಲ್ಯಮಾಪನಗಳ ಆಧಾರದಲ್ಲಿ ಪದವಿಗಳನ್ನು ಪ್ರದಾನ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪಠ್ಯಕ್ರಮ ಕುರಿತ ತರ್ಕಹೀನ ಸಿ.ಬಿ.ಎಸ್.ಇ. ನಿರ್ಧಾರವನ್ನು ರದ್ದು ಪಡಿಸಬೇಕು

ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ(ಸಿ.ಬಿ.ಎಸ್.ಇ..) ತರಗತಿ 10ರಿಂದ 12 ರವರೆಗಿನ ಪಠ್ಯದಲ್ಲಿ ಪೌರತ್ವ, ರಾಷ್ಟ್ರೀಯವಾದ, ಜಾತ್ಯತೀತತೆ, ಒಕ್ಕೂಟತತ್ವ ಮತ್ತಿತರ ನಮ್ಮ ಸಂವಿಧಾನಿಕ ವ್ಯವಸ್ಥೆಯ ಮೂಲಾಧಾರವಾಗಿರುವಂತವುಗಳನ್ನು ತೆಗೆದು ಹಾಕಿರುವುದಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. ಪ್ರಸಕ್ತ ಮಹಾಮಾರಿ ಮತ್ತು ಲಾಕ್‌ಡೌನ್ ನಿರ್ಬಂಧಗಳನ್ನು ನೆಪ ಮಾಡಿಕೊಂಡು, ವಿದ್ಯಾರ್ಥಿಗಳಿಗೆ ಪಠ್ಯಕ್ರಮವನ್ನು ಹಗುರಗೊಳಿಸುವ ಹೆಸರಲ್ಲಿ, ಸಿ.ಬಿ.ಎಸ್.ಇ ಏಕಪಕ್ಷೀಯವಾಗಿ ಈ ಕ್ರಮವನ್ನು ಕೈಗೊಂಡಿದೆ.

ಈ ರೀತಿಯಲ್ಲಿ ತಮಗೆ ಬೇಕಾದ ಅಂಶಗಳನ್ನು ತೆಗೆದು ಹಾಕುವ ಮೂಲಕ ಸಂವಿಧಾನಿಕ ಮೌಲ್ಯಗಳನ್ನು ಶಿಥಿಲಗೊಳಿಸುವುದನ್ನು, ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತದ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದನ್ನು ಬಲವಾಗಿ ತಿರಸ್ಕರಿಸಿರುವ ಪೊಲಿಟ್‌ಬ್ಯುರೊ, **ಈ ಅಧ್ಯಾಯಗಳನ್ನು ಹೊರತುಪಡಿಸುವುದಕ್ಕೆ ಯಾವುದೇ ತರ್ಕವನ್ನು ಕೊಡಲು ಸಿ.ಬಿ.ಎಸ್.ಇ.ಗೆ ಸಾಧ್ಯವಾಗಿಲ್ಲ, ಇದು ಅನುಮಾನಾಸ್ಪದ ವಾಗಿದೆ** ಎಂದಿದೆ.


ಸಿ.ಬಿ.ಎಸ್.ಇ.ಯ ಈ ನಿರ್ಧಾರವನ್ನು ರದ್ದು ಮಾಡಬೇಕು, ನಮ್ಮ ಸಂವಿಧಾನದ ಮೂಲಭೂತ ನೀತಿಗಳನ್ನು ಶಿಥಿಲಗೊಳಿಸುವ ಯಾವುದೇ ಪ್ರಯತ್ನ ಜನತೆಗೆ ಒಪ್ಪಿಗೆಯಿಲ್ಲ ಎಂದು ಹೇಳಿದೆ.

ಬಿಹಾರ ವಿಧಾನಸಭಾ ಚುನಾವಣೆಗಳು

ಚುನಾವಣಾ ಆಯೋಗದೊಂದಿಗೆ ಪ್ರತಿಪಕ್ಷಗಳ ಭೇಟಿ

ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಆರ್‌ಜೆಡಿ, ಕಾಂಗ್ರೆಸ್ ಮತ್ತಿತರ ಒಟ್ಟು 9 ಪ್ರತಿಪಕ್ಷಗಳು ಜುಲೈ 17ರಂದು ಚುನಾವಣಾ ಆಯೋಗದೊಂದಿಗೆ ಬಿಹಾರ ವಿಧಾನಸಭಾ ಚುನಾವಣೆಗಳನ್ನು ಕುರಿತಂತೆ ಅಂತರ್ಜಾಲದಲ್ಲಿ ಸಭೆ ನಡೆಸಿ ಈ 5 ಅಂಶಗಳನ್ನು ಖಾತ್ರಿಪಡಿಸಬೇಕು ಎಂದು ಆಗ್ರಹಿಸಿದರು:

1. ಎಂದಿನ ಪ್ರಚಾರ ಕಾರ್ಯಕ್ಕೆ ಮತ್ತು ಗರಿಷ್ಠ ಪ್ರಮಾಣದಲ್ಲಿ ಮತದಾರರು ಭಾಗವಹಿಸುವಂತೆ ಪರಿಸ್ಥಿತಿಗಳನ್ನು ನಿರ್ಮಿಸಬೇಕು.
2. ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು.
3. ಎಲ್ಲ ಸ್ಪರ್ಧಿಗಳಿಗೆ ಸಮಾನ ಸೌಲಭ್ಯಗಳು, ಸಮಾನ ವರ್ತನೆಗಳು
4. ಡಿಜಿಟಲ್ ಪ್ರಚಾರದ ಖರ್ಚುಗಳ ಮೇಲೆ ಮಿತಿ ನಿರ್ಧರಿಸುವುದು
5. ಕೋಮುವಾದಿ/ಸಾಮಾಜಿಕ ಧ್ರುವೀಕರಣ ಪ್ರಯತ್ನಿಸುವವರಿಗೆ ಶಿಕ್ಷಾಕ್ರಮಗಳು.



ಸುಳ್ಳುಗಳು, ಹಸಿಸುಳ್ಳುಗಳು ಮತ್ತು ಸಂಘಿಗಳು

ಸಂಘಿ ಟ್ರಾಲ್‌ಗಳು ಮತ್ತೆ ತಮ್ಮ ಹೊಲಸು ಆಟದಲ್ಲಿ ತೊಡಗಿದ್ದಾರೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರು ಮತ್ತು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಬಗ್ಗೆ ಒಂದು ಕೀಳು ಮಟ್ಟದ ಅನಾಮಧೇಯ ವಾಟ್ಸ್‌ಆಪ್ ಸಂದೇಶ ವಿವಿಧ ಭಾಷೆಗಳಲ್ಲಿ ಹರಿದಾಡುತ್ತಿದೆ. ಅದರಲ್ಲಿ ಸಂಘಿ ಛಾಯೆ ಮೇಲಿಂದ ಕೆಳಗಿನ ವರೆಗೂ ದಟ್ಟವಾಗಿದೆ. ಅದನ್ನು ನೋಡಿದೆಡೆಯಲ್ಲೆಲ್ಲ ಜನಗಳು ಕ್ರೋಧದಿಂದ ಪ್ರತಿಕ್ರಿಯಿಸುತ್ತಿದ್ದಾರೆ, ಸೈಬರ್‌ಸೆಲ್‌ಗಳಲ್ಲಿ ಹಲವಾರು ದೂರುಗಳು ದಾಖಲಾಗುತ್ತಿವೆ.

ಅತ್ಯಂತ ಹೊಲಸು ಕೋಮುವಾದಿ ಭಾಷೆಯಲ್ಲಿ ಇರುವ ಇದು 1971ರ ತೆಲ್ಲಿಚೇರಿ ಗಲಭೆಗಳಲ್ಲಿ ಪಿಣರಾಯಿ ವಿಜಯನ್ ಪಾತ್ರ ಇತ್ತು ಎಂದು ಸುಳ್ಳು ಹೇಳುತ್ತದೆ. ಈ ಸುಳ್ಳಿನೊಂದಿಗೆ ಅದನ್ನು ಪಸರಿಸುತ್ತಿರುವವರ ಅಜ್ಞಾನದ ಪ್ರದರ್ಶನವೂ ಆಗುತ್ತಿದೆ. ಪಿಣರಾಯಿ ವಿಜಯನ್ ಆಗ ಚುನಾಯಿತ ಶಾಸಕರಾಗಿದ್ದರು ಎಂಬ ಸಂಗತಿಯೂ ಅವರಿಗೆ ಗೊತ್ತಿದ್ದಂತಿಲ್ಲ.

ಆರೆಸ್ಸೆಸ್ ಈ ಗಲಭೆಯನ್ನು ಸೃಷ್ಟಿಸಿತ್ತು ಮತ್ತು ವಿಜಯನ್ ಇದನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದು ಇದರ ತನಿಖೆ ನಡೆಸಲು ನೇಮಿಸಿದ್ದ ನ್ಯಾಯಮೂರ್ತಿ ವಿಥಾಯಿಲ್ ಯೋಗದ ವರದಿ ಓದಿದವರಿಗೆ ಸ್ಪಷ್ಟವಾಗಿ ತಿಳಿಯುತ್ತದೆ. "ಆರೆಸ್ಸೆಸ್ ಮತ್ತು ಜನಸಂಘ ತಮ್ಮ ಘಟಕಗಳನ್ನು ಅಲ್ಲಿ ರಚಿಸಿದ ಮೇಲೆಯೆ ಪರಿಸ್ಥಿತಿ ಬದಲಾಯಿತು" ಎಂದು ಗಮನಿಸಿರುವ ಆಯೋಗದ ವರದಿ ಆರೆಸ್ಸೆಸ್‌ನ ಅತ್ಯಂತ ಕೋಮುವಾದಗ್ರಸ್ತ ಪ್ರಚಾರವನ್ನು ವರ್ಣಿಸುತ್ತದೆ. "ಮಾರ್ಕ್ಸ್‌ವಾದಿ ಪಕ್ಷದ ಯಾವ ಮುಖಂಡರೂ ಈ ಗಲಭೆಗಳಲ್ಲಿ ಇರಲಿಲ್ಲ ಎಂಬುದು ವಿವಾದಾತೀತ ಸಂಗತಿ" ಎಂದಿರುವ ಈ ವರದಿ, ತದ್ವಿರುದ್ಧವಾಗಿ, ಅವರು ಗಲಭೆಗಳು ಹರಡದಂತೆ ತಡೆದರು ಎಂದೂ ಗಮನಿಸಿದೆ. ಒಬ್ಬ ಪ್ರಮುಖ ಸಂಗಾತಿ ಕುಂಜಿರಾಮನ್ ಒಂದು ಮಸೀದಿಯ ಮೇಲೆ ಆರೆಸ್ಸೆಸ್ ಮಂದಿ ದಾಳಿ ಮಾಡುತ್ತಿದ್ದಾಗ ಅದರ ರಕ್ಷಣೆಗೆ ನಿಂತಿದ್ದರು, ಆರೆಸ್ಸೆಸ್ ಮಂದಿ ಆತನನ್ನು ಅಮಾನುಷವಾಗಿ ಕೊಂದರು.

ಈ ಸಂಘಿಗಳು ಇದರಲ್ಲಿ ಆಗ ಕೇರಳದಲ್ಲಿ ಒಬ್ಬ ಐಪಿಎಸ್??? ಅಧಿಕಾರಿಯಾಗಿ ನೇಮಕವಾಗಿದ್ದ ಅಜಿತ್ ದೋವಲ್ ಹೆಸರನ್ನೂ ಎಳೆದು ತಂದಿದ್ದಾರೆ. ಅವರು ಪಿಣರಾಯಿ ವಿಜಯನ್‌ರವರನ್ನು ಬಂಧಿಸಿದರು ಎಂಬ ಹಸಿ ಸುಳ್ಳನ್ನು ಹರಡಿದ್ದಾರೆ.

ಬಿಜೆಪಿ–ಆರೆಸ್ಸೆಸ್‌ನವರು ಹತಾಶರಾಗಿದ್ದಾರೆ ಎಂಬುದು ಎದ್ದು ಕಾಣುತ್ತಿದೆ. ಕೊವಿಡ್ ಸಾಂಕ್ರಾಮಿಕವನ್ನು ಎದುರಿಸುವಲ್ಲಿ ಅವರ ಸಂಪೂರ್ಣ ವಿಫಲತೆ ಜನಗಳಿಗೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇನ್ನೊಂದೆಡೆಯಲ್ಲಿ ದೇಶಾದ್ಯಂತ ಸರಕಾರಗಳನ್ನು ಉರುಳಿಸುವವರು ಎಂದೇ ಅವರು ಗುರುತಿಸಲ್ಪಡುತ್ತಿದ್ದಾರೆ.

ಭಾರತದಿಂದ ಕೇವಲ ಒಂದೇ ಸರಕಾರ ಅಂತರ್ರಾಷ್ಟ್ರೀಯ ಮನ್ನಣೆ ಗಳಿಸಿದೆ. ಅದು ಮೋದಿ ಸರಕಾರವಲ್ಲ, ಅಥವ ಯಾವುದೇ ಬಿಜೆಪಿ ರಾಜ್ಯ ಸರಕಾರವಲ್ಲ, ಅದು ಕೇರಳದ ಎಲ್‌ಡಿಎಫ್ ಸರಕಾರ ಮಾತ್ರ. ಜಗತ್ತಿನಾದ್ಯಂತ ಪ್ರಶಂಸೆ ಗಳಿಸುತ್ತಿರುವ ಜನಪರ ರಾಜ್ಯ ಸರಕಾರಕ್ಕೆ ನೇತೃತ್ವ ನೀಡುತ್ತಿರುವ ಒಬ್ಬ ಮುಖ್ಯಮಂತ್ರಿಯ ಮೇಲೆ, ಬಿಜೆಪಿ–ಆರೆಸ್ಸೆಸ್‌ನ ಜನ–ವಿರೋಧಿ ಧೋರಣೆಗಳ ವಿರುದ್ಧ ಹೋರಾಟಕ್ಕೆ ಬದ್ಧವಾಗಿರುವ ಒಂದು ಪಕ್ಷದ ವಿರುದ್ಧ ಈ ಸಂಘಿಗಳು ತಮ್ಮ ಸ್ವಭಾವಕ್ಕೆ ಸಹಜವಾಗಿಯೇ ಕೆಂಡ ಕಾರುತ್ತಿದ್ದಾರೆ.

ಸಂಪಾದಕೀಯ

ನ್ಯಾಯಸಮ್ಮತ ಸಮಾಜಕ್ಕೆ ಬೇಕು ಭೂಸುಧಾರಣೆಗಳು

ಕರ್ನಾಟಕ ಭೂಸುಧಾರಣಾ ಕಾಯ್ದೆ 1961ರ 79 ಎ ಮತ್ತು 79 ಬಿ ತಿದ್ದುಪಡಿ ಕಾಯ್ದೆ ಕುರಿತಾದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತಿದ್ದುಪಡಿಗೆ ಒಪ್ಪಿಗೆ ನೀಡಲಾಗಿತ್ತು. ನಂತರ ಸರ್ಕಾರ ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಿತ್ತು. ಸರ್ಕಾರ ಸುಗ್ರೀವಾಜ್ಞೆಗೆ ಸಮ್ಮತಿ ಪಡೆಯಲು ರಾಜಭವನಕ್ಕೆ ರವಾನಿಸಿತ್ತು. ರಾಜ್ಯಪಾಲ ವಜುಭಾಯಿ ವಾಲಾ ಅವರು ಭೂಸುಧಾರಣಾ ತಿದ್ದುಪಡಿ ಕಾಯ್ದೆ ಕುರಿತು ಸುಗ್ರೀವಾಜ್ಞೆಗೆ ತಮ್ಮ ಅಂಕಿತ ಹಾಕಿದ್ದಾರೆ. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ನಂತರ ಅದು ಕಾನೂನಾಗಿ ರೂಪಿತವಾಗಲಿದೆ.

ರಾಜ್ಯ ಸರ್ಕಾರದ ಈ ಕ್ರಮದಿಂದ ರಾಜ್ಯದ ಹಿಂದುಳಿದ ವರ್ಗಗಳ ನಾಯಕ ದೇವರಾಜ ಅರಸ್ ಅವರ ಕನಸು ಮಣ್ಣುಗೂಡುವಂತಾಯಿತು. ಭೂಸುಧಾರಣೆಗಳು ಒಂದು ಹಿಂದುಳಿದ ದೇಶಕ್ಕೆ ಭಾಗ್ಯದ ಬಾಗಿಲು ಇದ್ದಂತೆ. ಭೂಸುಧಾರಣೆಗಳು ಜಮೀನ್ದಾರರ ಭೂಮಿಗೆ ಮಿತಿಹಾಕುತ್ತದೆ. ಹೆಚ್ಚುವರಿ ಭೂಮಿಯನ್ನು ಯಾವುದೇ ಪರಿಹಾರ ನೀಡದೆ ಅಥವಾ ಕನಿಷ್ಠ ಪರಿಹಾರ ನೀಡಿ ವಶಪಡಿಸಿಕೊಂಡು ಆ ಭೂಮಿಯನ್ನು ಭೂರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿತರಣೆ ಮಾಡುತ್ತದೆ. ಹೀಗೆ ಉಳುವವನೇ ಭೂಮಿಯ ಒಡೆಯ ಆಗುತ್ತಾನೆ. ಭೂಮಿಯ ಹಸಿವುವುಳ್ಳವನಿಗೆ ಭೂಮಿ ಸಿಕ್ಕಾಗ ಅವನು ತನ್ನ ಬೆವರು ಸುರಿಸಿ ತನ್ನ ಭೂಮಿಯಲ್ಲಿ ಬಂಗಾರದ ಬೆಳೆ ಬೆಳೆಯುತ್ತಾನೆ. ಆತನ ಆದಾಯ ಹೆಚ್ಚುತ್ತದೆ. ಆತನ ಕೊಳ್ಳುವ ಶಕ್ತಿ ಬೆಳೆಯುತ್ತದೆ. ಆಂತರಿಕ ಮಾರುಕಟ್ಟೆ ವೃದ್ಧಿಯಾಗುತ್ತದೆ. ಕೈಗಾರಿಕಾ ಸರಕುಗಳ ಬೇಡಿಕೆ ವಿಸ್ತರಿಸುತ್ತದೆ. ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆಯುತ್ತದೆ. ಕೃಷಿ ಅಭಿವೃದ್ಧಿಯ ಜೊತೆ ಜೊತೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಸಾಧ್ಯವಾಗುತ್ತದೆ. ಹೀಗೆ ದೇಶದ ಭಾಗ್ಯದ ಬಾಗಿಲು ತೆರೆದು ದೇಶ ಸಮೃದ್ಧಿಯ ಬೀಡಾಗುತ್ತದೆ.

ಕರ್ನಾಟಕದಲ್ಲಿ ಭೂಸುಧಾರಣಾ ಕಾಯ್ದೆಗೆ 1974ರಲ್ಲಿ ದೇವರಾಜ ಅರಸರ ನೇತೃತ್ವದಲ್ಲಿ ಕೆಲವು ಪ್ರಗತಿಪರ ಹಾಗೂ ಸಾಮಾಜಿಕ ನ್ಯಾಯದ ಪರವಾದ ಮತ್ತು ಗೇಣಿದಾರರಾಗಿ ಉಳುಮೆ ಮಾಡುತ್ತಿದ್ದವರಿಗೆ ನ್ಯಾಯ ಒದಗಿಸುವ ತಿದ್ದುಪಡಿಗಳನ್ನು ತರಲಾಗಿತ್ತು. ಈ ತಿದ್ದುಪಡಿಗಳಿಗಾಗಿ ರಾಜ್ಯದಲ್ಲಿ ಕಮ್ಯೂನಿಸ್ಟರು, ಸಮಾಜವಾದಿಗಳು ಮತ್ತು ಗೇಣಿದಾರರು ತ್ಯಾಗ–ಬಲಿದಾನಗಳ ಹೋರಾಟವನ್ನು ಮಾಡಿದ್ದರು. ಇದರ ಪರಿಣಾಮವಾಗಿ ಜಾರಿಗೆ ಬಂದ 1974ರ ಕಾಯ್ದೆಯಿಂದಾಗಿ ಉದ್ಯಮಿಗಳು, ಬಂಡವಾಳಗಾರರು ಮತ್ತು ಶ್ರೀಮಂತರು ಕೃಷಿ ಭೂಮಿಯನ್ನು ಖರೀದಿ ಮಾಡುವಂತಿರಲಿಲ್ಲ. ಆದರೆ ಈಗ ಬಿಜೆಪಿ ಸರ್ಕಾರ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದಿರುವ ಕರ್ನಾಟಕ ಭೂಸುಧಾರಣಾ ತಿದ್ದುಪಡಿ ಕಾಯ್ದೆ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ನೀಡಿದೆ.

ಹಿಂದಿನ ಕಾಯ್ದೆ ಬಂಡವಾಳ ಹೂಡಿಕೆಗೆ ಅಡ್ಡಿಯಾಗಿತ್ತು ಎಂದು ಸರಕಾರದ ವಕ್ತಾರರು ಹೇಳುತ್ತಾರೆ. ಇದು ನಿಜವಲ್ಲ. ಬಂಡವಾಳ ಹೂಡುವವರಿಗೆ ಅಮೂಲ್ಯವಾದ ಕೃಷಿ ಭೂಮಿಯೇ ಏಕೆ ಬೇಕು. ರಾಜ್ಯದಲ್ಲಿ ಕೃಷಿಗೆ ಯೋಗ್ಯವಲ್ಲದ ಎಷ್ಟೊಂದು ಭೂಮಿ ಇರುವಾಗ ಅದನ್ನು ಏಕೆ ಅಭಿವೃದ್ಧಿಪಡಿಸಿ ಕೈಗಾರಿಕೆಗಳಿಗೆ ಬಳಸಲಾಗದು? ಕೃಷಿಯನ್ನು ನಾಶಮಾಡಿ ಕೈಗಾರಿಕೆಯನ್ನು ಬೆಳೆಸಲು ಸಾಧ್ಯವೇ? ದೊಡ್ಡ ಬಂಡವಾಳದಾರರಿಗೆ ಕಾರ್ಪೊರೇಟ್ ಕಂಪನಿಗಳಿಗೆ ಕೃಷಿಭೂಮಿಯನ್ನು ಬೇಕಾದಷ್ಟು ಪ್ರಮಾಣದಲ್ಲಿ ಖರೀದಿ ಮಾಡಲು ಅವಕಾಶ ನೀಡಿದರೆ ರೈತ ಪ್ರಧಾನವಾದ ಕೃಷಿ ಪದ್ಧತಿಗೆ ಏನಾಗುವುದು? ಕೃಷಿಯ ಕಾರ್ಪೊರೇಟಿಕರಣದಿಂದ ಯಾರಿಗೆ ಲಾಭ.

ಚಿಕ್ಕ ಚಿಕ್ಕ ಹಿಡುವಳಿಗಳಿಗೆ ಎಲ್ಲಾ ಕೃಷಿ ಮಾಡುವುದು ಲಾಭದಾಯಕವಲ್ಲ ಎಂಬ ವಾದವನ್ನು ಭೂಸುಧಾರಣೆಗಳ ವಿರುದ್ಧವಾಗಿ ತರ್ಕ ಮಾಡಲಾಗುತ್ತದೆ. ಸಣ್ಣ ಹಿಡುವಳಿಗಳು ಕೃಷಿಯನ್ನು ಕೈಬಿಟ್ಟು ಸಾಮೂಹಿಕ ಬೇಸಾಯವನ್ನು ಸರ್ಕಾರದ ಪೂರ್ಣ ಸಹಕಾರದಿಂದ ಮಾಡಲು ಸಾಧ್ಯವಿದೆ. ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಕೃಷಿಯನ್ನು ಉಳಿಸಿ ಕೈಗಾರಿಕೆಗಳನ್ನು ಬೆಳೆಸುವುದು ಅನಿವಾರ್ಯವಾಗಿದೆ. ಕೃಷಿ ಸಂಪನ್ಮೂಲಗಳನ್ನು ಕಾರ್ಪೊರೇಟ್ ಕಂಪನಿಗಳ ಲೂಟಿಗೆ ಒಪ್ಪಿಸಲು ಹೊರಡುವುದು ಮೂರ್ಖತನದ ಪರಮಾವಧಿ.

ಗುತ್ತಿಗೆ ಆಧಾರದಲ್ಲಿ ನೀಡಲಾದ ಜಮೀನುಗಳನ್ನು ಅವರಿಗೆ ಮಾರಾಟ ಮಾಡಲು ಉದ್ದೇಶಿಸಿರುವ ಸುತ್ತೋಲೆಯನ್ನು ಹಿಂಪಡೆಯಲು ಒತ್ತಾಯಿಸಿ ಮನವಿ:

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಕರ್ನಾಟಕ ಭೂ ಮಂಜೂರಾತಿ ನಿಯಮಗಳು–1969 ರ ಆಧಾರದಲ್ಲಿ 30 ವರ್ಷಗಳ ಕಾಲ ಸರಕಾರಿ ಜಮೀನುಗಳನ್ನು ವಿವಿಧ ಸಂಘ, ಸಂಸ್ಥೆಗಳು, ಕೈಗಾರಿಕೆ ಮತ್ತಿತರೇ ಕ್ರಮಗಳಿಗೆ ಗುತ್ತಿಗೆ ಆಧಾರದಲ್ಲಿ ರಾಜ್ಯದಾದ್ಯಂತ ನೀಡಲಾಗಿರುವ ದಶ ಲಕ್ಷಾಂತರ ಎಕರೆ ಜಮೀನುಗಳನ್ನು ಅವರಿಗೆ ಮಾರಾಟ ಮಾಡಲು ರಾಜ್ಯ ಸರಕಾರ ಏಕ ಪಕ್ಷೀಯವಾಗಿ ನಿರ್ಧರಿಸಿ ಸುತ್ತೋಲೆ ಹೊರಡಿಸಿರುವುದನ್ನು ಭಾರತ ಕಮ್ಯುನಿಷ್ಠ್ ಪಕ್ಷ (ಮಾರ್ಕ್ಸ್‌ವಾದಿ) ದ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ವಿರೋಧಿಸುತ್ತದೆ. ಇದೊಂದು ವಿವೇಚನಾ ರಹಿತ ಕ್ರಮವಾಗಿದ್ದು, ಕೂಡಲೇ ಸದರಿ ನಿರ್ಣಯವನ್ನು ಹಾಗೂ ಅದರ ಆದೇಶದ ಸುತ್ತೋಲೆಯನ್ನು ವಾಪಾಸು ಪಡೆಯಲು ಬಲವಾಗಿ ಒತ್ತಾಯಿಸುತ್ತದೆ.

ಈ ಆದೇಶದಿಂದ ರಾಜ್ಯದಾದ್ಯಂತ ಇರುವ ದಶ ಲಕ್ಷಾಂತರ ಎಕರೆ ಫಲವತ್ತಾದ ಮತ್ತು ಭಾರೀ ಖನಿಜ ಸಂಪನ್ಮೂಲಗಳಿರುವ ಜಮೀನುಗಳು ಬಂಡವಾಳದಾರರ ಪಾಲಾಗಲಿವೆ. ಅದೇ ರೀತಿ, ಇದರಿಂದ ಅವುಗಳು ಸರಕಾರದ ಬೊಕ್ಕಸಕ್ಕೆ ಪ್ರತಿವರ್ಷ ತರುವ ಕೋಟ್ಯಾಂತರ ರೂಗಳ ಆದಾಯವು ಇಲ್ಲವಾಗಲಿದೆ.

ಅಲ್ಲದೇ, ಅವುಗಳಲ್ಲಿ ರೈತರಿಂದ ಬಲವಂತವಾಗಿ ಸ್ವಾಧೀನ ಪಡಿಸಿಕೊಂಡ ಹಲವು ದಶ ಸಾವಿರ ಎಕರೆಗಳ ಜಮೀನುಗಳು ಸೇರಿವೆ. ಗುತ್ತಿಗೆಗೆ ಪಡೆದ ಸಾವಿರಾರು ಎಕರೆ ಜಮೀನುಗಳಲ್ಲಿ ದಶಕಗಳು ಕಳೆದರೂ ಗುತ್ತಿಗೆ ನಿಯಮಗಳಂತೆ ಅಲ್ಲಿ ಅಭಿವೃದ್ಧಿಯನ್ನು ಮಾಡಿಲ್ಲ ಮಾತ್ರವಲ್ಲಾ, ಭೂ ಸಂತ್ರಸ್ಥ ಕುಟುಂಬಗಳಿಗೆ ಉದ್ಯೋಗಗಳನ್ನು, ಇಲ್ಲವೇ ಉದ್ಯೋಗ ಪರಿಹಾರಗಳನ್ನು ನೀಡಲಾಗಿಲ್ಲ.

ಉದಾಹರಣೆಗೆ, ತಲಾ ಎಕರೆಗೆ, 10,000 ರೂಗಳ ಆಧಾರದಲ್ಲಿ ಸುಮಾರು 2,660 ಎಕರೆಗಳ ಜಮೀನುಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಗುತ್ತಿಗೆಗೆ ಪಡೆದು ಹತ್ತು ವರ್ಷಗಳಾದರೂ, ಮಿತ್ತಲ್ ಕಂಪನಿ ಇದುವರೆಗೆ ಕೈಗಾರಿಕೆಗಳನ್ನು ಸ್ಥಾಪಿಸಿಲ್ಲ. ಇಂತಹ ಜಮೀನುಗಳು ರಾಜ್ಯದಲ್ಲಿ ಅದೆಷ್ಟು?

ಅದೇ ಬಳ್ಳಾರಿ ಜಿಲ್ಲೆಯಲ್ಲಿ ಜಿಂದಾಲ್ ಕಂಪನಿ ಸುಮಾರು 13,000 ಕ್ಕೂ ಹೆಚ್ಚು ಎಕರೆ ಜಮೀನುಗಳನ್ನು ಗುತ್ತಿಗೆಗೆ ಪಡೆದಿದೆ. ಕೈಗಾರಿಕೆಗಳ ನಿರ್ಮಾಣವಾಗಿದೆ. ಇಂತಹ ಅಭಿವೃದ್ದಿ ಹೊಂದಿದ ಜಮೀನುಗಳು ರಾಜ್ಯದಲ್ಲಿ ಅದೆಷ್ಟು?

ಅದು ಮಾತ್ರವೇ ಅಲ್ಲಾ, ಗಣಿ ಸಂಪನ್ಮೂಲಗಳ ತೆಗೆಯಲು (ಕಬ್ಬಿಣದ ಅದಿರು) ಹಲವು ಕಂಪನಿಗಳು ಬಳ್ಳಾರಿ ಜಿಲ್ಲೆಯಲ್ಲಿ ದಶ ಸಾವಿರ ಎಕರೆ ಪ್ರದೇಶಗಳಷ್ಟು ಜಮೀನುಗಳನ್ನು ಗುತ್ತಿಗೆಗೆ ಪಡೆದು ಮತ್ತಷ್ಟು ಗಣಿ ಜಮೀನುಗಳನ್ನು ಒತ್ತುವರಿ ಮಾಡಿರುವುದನ್ನು ನೋಡಿದ್ದೇವೆ. ಇತರೆ ಗಣಿಗಾರಿಕೆ ಪ್ರದೇಶಗಳು ರಾಜ್ಯದಲ್ಲಿ ಹಲವೆಡೆ ಇವೆ.

ಇವು ಮತ್ತು ಈ ರೀತಿ ಲಾಭ ತರುವ ಗುತ್ತಿಗೆಗಳ ಜಮೀನುಗಳ ಗುತ್ತಿಗೆ ಮೊತ್ತವನ್ನು ವೈಜ್ಞಾನಿಕವಾಗಿ ಪುನರ್ ನಿಗದಿಸಿದಲ್ಲಿ ಪ್ರತಿವರ್ಷವೂ ರಾಜ್ಯದ ಬೊಕ್ಕಸಕ್ಕೆ ಈಗಿನದಕ್ಕೂ ಅಧಿಕ ಉತ್ತಮ ಮೊತ್ತದ ಆದಾಯವನ್ನೇ ತರಲಿವೆ.

ಸುತ್ತೋಲೆಯು ಸರಕಾರದ ಮಾರ್ಗ ಸೂಚಿಬೆಲೆಯ ಎರಡು ಪಟ್ಟು ಹಣ ನೀಡಿ ಖರೀದಿಸುವ ಕಂಪನಿಗಳು ಮೂಲ ಉದ್ದೇಶವನ್ನು ಕೈಬಿಟ್ಟು ಯಾವ ವಯ್ಯಕ್ತಿಕ ಹಿತಾಸಕ್ತಿಗೆ ಬೇಕಾದರೂ ಬಳಸಲು ಅವಕಾಶ ನೀಡುತ್ತದೆ. ಇದು ಮೂಲ ಉದ್ದೇಶಕ್ಕೆ ಜಮೀನು ನೀಡಿ ಉದ್ಯೋಗ ದೊರೆಯುವುದೆಂಬ ಆಶಯವನ್ನು ಮಣ್ಣುಪಾಲು ಮಾಡಲಿದೆ. ಜಮೀನು ನೀಡಿದ ರೈತರು ಹಾಗೂ ಅವರ ಕುಟುಂಬಗಳ ಸದಸ್ಯರನ್ನು ವಂಚಿಸಲಿದೆ.

ಆದ್ದರಿಂದ, ಸರಕಾರದ ಏಕ ಪಕ್ಷೀಯ ಕ್ರಮಗಳಿಂದ ಸರಕಾರಕ್ಕೆ, ಅದರ ವಶದಲ್ಲಿದ್ದು ಒಳ್ಳೆಯ ಆದಾಯ ತರಲಿರುವ ಮತ್ತು ಸದರಿ ಗುತ್ತಿಗೆಯ ಉದ್ದೇಶವನ್ನು ನೆರವೇರಿಸಲು ಪ್ರೇರಕವಾಗಿರುವ ಮತ್ತು ರೈತ ಕುಟುಂಬಗಳ ಹಿತವನ್ನು ಕಾಯುವ ಉದ್ದೇಶ ಹೊಂದಿರುವ ಮತ್ತು ರಾಜ್ಯದ ನಿರುದ್ಯೋಗ ನಿವಾರಣೆಗೆ ಸಹಾಯಕ ವಾಗಿರುವ, ಒಟ್ಟಾರೆ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿರುವ ಈ ದಶ ಲಕ್ಷಾಂತರ ಎಕರೆ ಜಮೀನುಗಳನ್ನು ಮಾರಾಟ ಮಾಡುವುದನ್ನು ತಡೆಯುವುದು ಅತ್ಯಂತ ತೀವ್ರ ಗತಿಯ ಅಗತ್ಯವಿದೆ.

ಆದ್ದರಿಂದ ಸರಕಾರಿ ಜಮೀನುಗಳನ್ನು ಕಬಳಿಸುವ ಬಂಡವಾಳದಾರರ ಆಮಿಷಕ್ಕೆ ತಾವು ಒಳಗಾಗದೇ, ಸದರಿ ಮಾರಾಟವನ್ನು ತಡೆಯುವಂತೆ ಸಿಪಿಐಎಂ ಈ ಮೂಲಕ ಒತ್ತಾಯಿಸುತ್ತದೆ.

ಅದೇ ರೀತಿ, ರಾಜ್ಯ ಸರಕಾರ ಈ ಕೂಡಲೇ ಲೀಜ್/ಗುತ್ತಿಗೆಗಾಗಿ ರಾಜ್ಯದಾದ್ಯಂತ ನೀಡಲಾದ ಜಮೀನುಗಳ ಜಿಲ್ಲಾವಾರು ವಿವರ ಮತ್ತು ಅವುಗಳಿಂದ ಸರಕಾರಕ್ಕೆ ವಿವಿಧ ಇಲಾಖೆಗಳಿಗೆ ಬರುವ ಆದಾಯದ ಮಾಹಿತಿ ಒಳಗೊಂಡ ವಿವರ ನೀಡುವ ಶ್ವೇತ ಪತ್ರವನ್ನು ಹೊರಡಿಸಲು ಸಿಪಿಐಎಂ ಮನವಿ ಮಾಡುತ್ತದೆ.

ಯು. ಬಸವರಾಜ
ಕಾರ್ಯದರ್ಶಿ (16–07–2020)

ಕರೋನ ವೈರಸ್ ಬಾಧಿತ ಇಎಸ್ಐ ಇಲ್ಲದ ಕಾರ್ಮಿಕರಿಗೂ ವೇತನ ಸಹಿತ ರಜೆ ವಿಸ್ತರಣೆಗೆ: ಸಿಪಿಐ(ಎಂ) ಒತ್ತಾಯ

ಕರೋನ ವೈರಸ್ ಬಾಧಿತರಾಗಿರುವ ಇಎಸ್ಐ ವ್ಯಾಪ್ತಿಗೆ ಬರುವ ಕಾರ್ಮಿಕರಿಗೆ 28 ದಿನಗಳ ವೇತನ ಸಹಿತ ರಜೆ ನೀಡಬೇಕೆಂದು 5.3.2020 ರಂದೇ ರಾಜ್ಯ ಸರ್ಕಾರವು ಸುತ್ತೋಲೆ ಹೊರಡಿಸಿದೆ. ಅಂತಹ ಸೌಲಭ್ಯವನ್ನು ಇ.ಎಸ್.ಐ ವ್ಯಾಪ್ತಿಗೆ ಒಳಪಡದ ಕಾರ್ಮಿಕರಿಗೂ ವಿಸ್ತರಿಸಿ ಜಾರಿಗೊಳಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಸದ್ಯ ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯ ಕೈಗಾರಿಕಾ ಪ್ರದೇಶದ ಸುಮಾರು 350 ಕ್ಕೂ ಹೆಚ್ಚು ಕಾರ್ಮಿಕರು ಕೊರೋನ ಸೋಂಕಿತರಾಗಿದ್ದಾರೆ. ಈಗಾಗಲೆ ಇಬ್ಬರು ಕಾರ್ಮಿಕರು ಮೃತ ಪಟ್ಟಿದ್ದಾರೆ.

ಹಲವು ಕಾರ್ಖಾನೆಗಳಲ್ಲಿ ಒಂದಿಬ್ಬರಿಗೆ ಸೋಂಕು ದೃಢಪಟ್ಟ ಕೂಡಲೆ ಇತರ ಕಾರ್ಮಿಕರಿಗೂ ಕೋವಿಡ್ ಪರೀಕ್ಷೆ ನಡೆಸದೆ ಕಾರ್ಖಾನೆಯನ್ನು ಕೇವಲ ಸ್ಯಾನಿಟೈಸ್ ಮಾಡಿ ಮತ್ತೆ ಒಂದೆರಡು ದಿನಗಳಲ್ಲೇ ಕಾರ್ಖಾನೆಯಲ್ಲಿ ಉತ್ಪಾದನೆ ಮಾಡಿಸಲಾಗುತ್ತಿದೆ. ಅಂತಹ ಕಾರ್ಖಾನೆಗಳ ಎಲ್ಲಾ ಕಾರ್ಮಿಕರಿಗೂ ಕೋವಿಡ್ ಪರೀಕ್ಷೆಯನ್ನು ಮಾಲೀಕರು ಮಾಡಿಸಿ ನಂತರವೇ ಕಾರ್ಖಾನೆಯಲ್ಲಿ ಉತ್ಪಾದನೆ ಪ್ರಾರಂಭಿಸುವಂತಾಗಲು ಸರ್ಕಾರ ಸೂಕ್ತ ಆದೇಶ ಹೊರಡಿಸಿ ಜಾರಿಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಇ.ಎಸ್.ಐ ವ್ಯಾಪ್ತಿಗೆ ಒಳಪಡದ ಕೊರೋನ ವೈರಸ್ ಬಾಧಿತ ಕಾರ್ಮಿಕರಿಗೆ ಒಂದೆಡೆ ಚಿಕಿತ್ಸಾ ವೆಚ್ಚವು ಇಲ್ಲದೆ ಮತ್ತೊಂದೆಡೆ ವೇತನವು ಇಲ್ಲದೆ ಪರಿತಪಿಸುವಂತಾಗಿದೆ. ಖಾಸಗಿ ಆಸ್ಪತ್ರೆಗಳ ದುಬಾರಿ ಶುಲ್ಕ ಅವರನ್ನು ಕಂಗಾಲಾಗಿಸಿದೆ ಎಂಬುದನ್ನು ಸಿಪಿಐ(ಎಂ) ಗಮನಿಸಿದೆ.

ಈ ಹಿನ್ನೆಲೆಯಲ್ಲಿ ಇ.ಎಸ್.ಐ ವ್ಯಾಪ್ತಿಗೆ ಒಳಪಡದ ಸಂಘಟಿತ ವಲಯದ ಕಾರ್ಮಿಕರಿಗೂ ವೇತನ ಸಹಿತ ರಜೆ ನೀಡಬೇಕೆಂದು ಆದೇಶಿಸಿ ಜಾರಿಗೊಳಿಸಬೇಕು. ಅಂತಹ ಎಲ್ಲಾ ಕಾರ್ಮಿಕರಿಗೂ ಕೊರೋನ ಕವಚ ಆರೋಗ್ಯ ವಿಮೆಯನ್ನು ಮಾಲೀಕರು ಕಡ್ಡಾಯವಾಗಿ ಮಾಡಿಸಬೇಕೆಂದು ಆದೇಶಿಸಲು ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಎನ್. ಪ್ರತಾಪ್ ಸಿಂಹ, ಕಾರ್ಯದರ್ಶಿ – ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿ
ಕೆ.ಎನ್. ಉಮೇಶ್, ಕಾರ್ಯದರ್ಶಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ (13.7.2020)

ಲಾಕ್ ಡೌನ್ ಸಂಧರ್ಭದಲ್ಲಿ ಜನತೆಗೆ ಆಹಾರ ಸಾಮಾಗ್ರಿಗಳನ್ನು ಒದಗಿಸಲು ಒತ್ತಾಯಿಸಿ ಪ್ರತಿಭಟನೆ



ಲಾಕ್ ಡೌನ್ ಸಂಧರ್ಭದಲ್ಲಿ ಜನತೆಗೆ ಆಹಾರ ಸಾಮಾಗ್ರಿಗಳನ್ನು, ಕೋರೋನಾ ಸೋಂಕಿತರಿಗೆ ಉಚಿತ ಚಿಕಿತ್ಸೆಯನ್ನು ಒದಗಿಸಬೇಕು ಹಾಗೂ ಸೀಲ್ ಡೌನ್ ಪ್ರದೇಶಗಳ ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಸಿಪಿಐ(ಎಂ) ನೇತ್ರತ್ವದಲ್ಲಿ ಮಂಗಳೂರು ನಗರದ ಹ್ರದಯ ಭಾಗದಲ್ಲಿ ಬಿತ್ತಿಚಿತ್ರ ಪ್ರದರ್ಶಿಸುವ ಮೂಲಕ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳರವರು, ಈ ಹಿಂದಿನ ಲಾಕ್ ಡೌನ್ ನಿಂದಾಗಿ ದುಡಿಯುವ ವರ್ಗದ ಜನತೆ ತೀರಾ ಸಂಕಷ್ಟಗಳಿಗೆ ಒಳಗಾಗಿದ್ದು, ಈಗ ಮತ್ತೆ ವಿಧಿಸಿರುವ ಲಾಕ್ ಡೌನ್ ನಿಂದ ಕಂಗಾಲಾಗಿದ್ದಾರೆ. ಉದ್ಯೋಗವಿಲ್ಲದೆ, ಕಾಸಿಲ್ಲದೆ, ಆಹಾರವಿಲ್ಲದೆ ಪರದಾಡುವ ತೀರಾ ಬಡ ಕಾರ್ಮಿಕರಿಗೆ ಅಹಾರ ಸಾಮಾಗ್ರಿಗಳನ್ನು ಜಿಲ್ಲಾಡಳಿತ ಒದಗಿಸಬೇಕಾಗಿದೆ. ಕೊರೋನಾ ನೆಪದಲ್ಲಿ ಜನರನ್ನು ಲೂಟಿ ಮಾಡುವ ಖಾಸಗೀ ಆಸ್ಪತ್ರೆಗಳಿಗೆ ಮೂಗುದಾರ ತೊಡಿಸಲು ಸರಕಾರ ಮುಂದಾಗಬೇಕು. ಕೋರೋನಾ ಸೋಂಕಿತರಿಗೆ ತಾರತಮ್ಯವಿಲ್ಲದೆ ಉಚಿತ ಚಿಕಿತ್ಸೆಯನ್ನು ಒದಗಿಸಬೇಕು ಹಾಗೂ ಖಾಸಗೀ ಆಸ್ಪತ್ರೆಗಳು ಕೋರೋನಾ ಸೇರಿದಂತೆ ಇತರ ಯಾವುದೇ ರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಕಡ್ಡಾಯಗೊಳಿಸಬೇಕಾಗಿದೆ. ಎಂದು ಹೇಳಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, ಕೊರೊನಾ ವೈರಸ್ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಹರಡುತ್ತಿದ್ದು, ಈಗಾಗಲೇ ಘೋಷಿಸಿರುವ ಸೀಲ್ ಡೌನ್ ಪ್ರದೇಶಗಳ ಜನರ ಸಂಕಷ್ಟಗಳು ಹೇಳ ತೀರಾದಾಗಿದೆ. ಅವರಿಗೆ ಬೇಕಾಗುವ ಆಹಾರ, ಔಷಧಿ ಸಾಮಾಗ್ರಿಗಳನ್ನು ಇಲ್ಲಿಯವರೆಗೂ ತಲುಪಿಸುವ ವ್ಯವಸ್ಥೆ ಇಲ್ಲ. ಅಧಿಕಾರಿಗಳು ಅತ್ತ ಗಮನವನ್ನೂ ಹರಿಸುತ್ತಿಲ್ಲ ಎಂದು ದೂರಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, ಕೋರೋನಾ ನಿಗ್ರಹಿಸಲು ವೈಜ್ಞಾನಿಕ ನೆಲೆಯಲ್ಲಿ ಕಾರ್ಯ ನಿರ್ವಹಿಸುವ ಬದಲು ಲಾಕ್ ಡೌನ್ ಮಾತ್ರವೇ ಪರಿಹಾರವೆಂದು ಬಿಂಬಿಸಿ, ತನ್ನೆಲ್ಲಾ ವೈಫಲ್ಯವನ್ನು ಮರೆಮಾಚಲು ಲಾಕ್ ಡೌನ್ ಘೋಷಿಸಿ ಮತ್ತೊಮ್ಮೆ ಜನರನ್ನು ಸಂಕಷ್ಟಕ್ಕೆ ದೂಡಿದ ರಾಜ್ಯ ಸರಕಾರದ ನಡೆ ತೀರಾ ಖಂಡನೀಯ. ತಜ್ಞ ವೈದ್ಯರ ಕೊರತೆಯಿಂದ ಬಳಲುತ್ತಿರುವ ಸರಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಆರೋಗ್ಯ ಸಿಬ್ಬಂದಿಗಳಿಗೆ ಸುರಕ್ಷತಾ ಆರೋಗ್ಯ ಕಿಟ್ ಗಳನ್ನು ಒದಗಿಸಲು ಜಿಲ್ಲಾಡಳಿತ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ಜಯಂತಿ ಬಿ.ಶೆಟ್ಟಿ, ಸುರೇಶ್ ಬಜಾಲ್, ಸಿಐಟಿಯು ನಾಯಕರಾದ ಜಯಲಕ್ಷ್ಮಿ, ಮುಸ್ತಫಾ, ಹರೀಶ್ ಪೂಜಾರಿ, ಸಂತೋಷ್ ಆರ್. ಎಸ್, ಅನ್ವರ್ ಶೇಕ್, ನಾಗೇಶ್ ಕೋಟ್ಯಾನ್, ದಲಿತ ಹಕ್ಕುಗಳ ಸಮಿತಿಯ ನಾಯಕರಾದ ತಿಮ್ಮಯ್ಯ ಕೊಂಚಾಡಿ, ಡಿವೈಎಫ್ಐ ನಾಯಕರಾದ ಪ್ರಶಾಂತ್ ಉರ್ವಾಸ್ಟೋರ್, ನಾಗೇಂದ್ರ ಮುಂತಾದವರು ಹಾಜರಿದ್ದರು.

ಸುನಿಲ್ ಕುಮಾರ್ ಬಜಾಲ್

ಕುಂದಾಪುರದಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ ಮನವಿ

ಬೇಡಿಕೆ ಈಡೇರದಿದ್ದರೆ ಆಗಸ್ಟ್ ನಿಂದ ಅಸಹಕಾರ ಚಳವಳಿ



ಕರ್ನಾಟಕ ರಾಜ್ಯ ಅಂನವಾಡಿ ನೌಕರರ ಸಂಘ (ಸಿಐಟಿಯು)ವು ರಾಜ್ಯದಾದ್ಯಂತ ಪ್ರತಿಭಟನೆಯ ಅಂಗವಾಗಿ ಕುಂದಾಪುರದ ಸಿಡಿಪಿಓ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿ ಸಿಡಿಪಿಓ ಅಧಿಕಾರಿ ಮುಖಾಂತರ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ಸಂಘದ ತಾಲೂಕು ಅಧ್ಯಕ್ಷರಾದ ಬಿ. ಆಶಾಲತಾ ಶೆಟ್ಟಿ, ಕಾರ್ಯದರ್ಶಿ ಭಾಗ್ಯವತಿ, ಮುಖಂಡರಾದ ಅಶ್ವಿನಿ, ಸರಸ್ವತಿ, ಜಯಲಕ್ಷ್ಮೀ ಇದ್ದರು. ಸಿಐಟಿಯು ತಾಲೂಕು ಸಂಚಾಲಕ ಎಚ್ ನರಸಿಂಹ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಇದ್ದರು.

ದೇವದುರ್ಗ: ಅಂಗನವಾಡಿ ನೌಕರರ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ ತಹಶಿಲ್ದಾರರ ಕಛೇರಿ ಮುಂದೆ ಹೋರಾಟ ಮಾಡಲಾಯಿತು.

ಕೊರೊನ ಸಂದರ್ಭದಲ್ಲಿ ದಿನ ನಿತ್ಯ ಕೆಲಸ ಮಾಡುತ್ತಿರುವ ಅಂಗನವಾಡಿ ನೌಕರರ ಸಮಸ್ಯೆಗಳನ್ನು ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ಮಾಡುತ್ತಿರುವುದನ್ನು ಖಂಡಿಸಿ ಹೋರಾಟ ಮಾಡಲಾಯಿತು ಈ ಸಂದರ್ಭದಲ್ಲಿ ಅಂಗನವಾಡಿ ನೌಕರ ಸಂಘದ ತಾಲೂಕ ಅಧ್ಯಕ್ಷರಾದ ರಂಗಮ್ಮ ಅನ್ವರ ಕಾರ್ಯದರ್ಶಿ ರಮಾದೇವಿ ಮುಖಂಡರಾದ ಶೇಖಮ್ಮ, ಗಿರಿಯಪ್ಪ, ಶಬ್ಬೀರ ಜಾಲಹಳ್ಳಿ, ಸುನಂದಾ, ಮಹಾಲಿಂಗ ದೊಡ್ಡಮನಿ ಮುಂತಾದವರು ಇದ್ದರು. ●



ಪಂಚಾಯತ ನೌಕರರ ಪ್ರತಿಭಟನೆ



ರಾಮದುರ್ಗ: ಸರಕಾರದ ಆದೇಶದಂತೆ ಕನಿಷ್ಠ ವೇತನದ ಜಾರಿಗಾಗಿ, ವಸೂಲಿಯ ಶೇ.40 ರಷ್ಟು ಮೊತ್ತವನ್ನು ಸಿಬ್ಬಂದಿ ಖಾತೆಗೆ ಜಮಾ ಮಾಡಲು, 14 ನೇ ಹಣಕಾಸಿನಲ್ಲಿ ಶೇ. 10 ರಷ್ಟು ವೇತನಕ್ಕೆ, ಪಂಚತಂತ್ರದಲ್ಲಿ ಅಳವಡಿಸದೆ ಬಾಕಿ ಉಳಿದುಕೊಂಡ ಸಿಬ್ಬಂದಿಗಳ ದಾಖಲೆಗಳನ್ನು ಪಂಚತಂತ್ರದಲ್ಲಿ ಅಳವಡಿಸಬೇಕೆಂದು ಈ ಐದು ಪ್ರಮುಖ ಬೇಡಿಕೆಗಳನ್ನು ಸರಕಾರದ ಆದೇಶದಂತೆ ಜಾರಿ ಆಗಬೇಕೆಂದು ಒಂದು ತಿಂಗಳ ಹಿಂದೆ ಒತ್ತಾಯಿಸಲಾಗಿತ್ತು. ಸ್ಥಳೀಯ ಅಧಿಕಾರಿಗಳ ಭರವಸೆ ಮೇರೆಗೆ ಹೋರಾಟ ವಾಪಸ್ಸ್ ಪಡೆಯಲಾಗಿತ್ತು. ಒಂದು ತಿಂಗಳು ಕಳೆದರೂ ಸಮಸ್ಯೆಗಳು ಇತ್ಯರ್ಥವಾಗದೆ ಇರುವಾಗ ತಾಲೂಕ ಪಂಚಾಯತ ಕಚೇರಿ ಮುಂದೆ ಧರಣಿ ಪ್ರಾರಂಭಿಸಲಾಯಿತು. ಧರಣಿ ಸ್ಥಳಕ್ಕೆ ಬಂದ ಕಾರ್ಯನಿರ್ವಾಹಕ ಅಧಿಕಾರಿ ಮುರಳಿಧರ ದೇಶಪಾಂಡೆ ಕೂಡಲೇ ಎಲ್ಲ ಪಂಚಾಯತಿಗಳ ಪಿಡಿಓಗಳ ಸಭೆ ಕರೆದು ಸಂಘದ ಮುಖಂಡರಿಗೂ ಸಭೆಗೆ ಆವ್ಹಾನಿಸಿ ಐದು ಬೇಡಿಕೆಗಳನ್ನು ಒಂದು ವಾರದಲ್ಲಿ ಇತ್ಯರ್ಥವಾಗದೆ ಇದ್ದರೆ ಪಿಡಿಓಗಳ ಮೇಲೆ ಕ್ರಮವಹಿಸುವದಾಗಿ ಹೇಳಿ ಒಂದು ವಾರದಲ್ಲಿ ಸಮಸ್ಯೆ ಬಗೆ ಹರಿಸುವದಾಗಿ ಹೇಳಿದ ಮೇಲೆ ಧರಣಿಯನ್ನು ವಾಪಸ್ಸ್ ಪಡೆಯಲಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಜಿ.ಎಂ. ಜೈನೆಖಾನ್, ತಾಲೂಕಾಧ್ಯಕ್ಷ ವೀರಭದ್ರ ಕಂಪ್ಲಿ, ಮಲ್ಲಪ್ಪ ಆಲೂರ, ತಿಪ್ಪಣ್ಣ ಪೈಲಿ, ದಿಲೀಪ್ ಭೋವಿ ಮತ್ತು ಕೇಶವ ದಾಸರ ಇದ್ದರು.

ಅಂಗನವಾಡಿ ನೌಕರರ ಎರಡನೇ ದಿನದ ಪ್ರತಿಭಟನೆ:

ಎಲ್.ಐ.ಸಿ. ಆಧಾರಿತ ಪಿಂಚಣಿ, ಕೆಲಸದ ಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಅಂಗನವಾಡಿ ನೌಕರರು ಎರಡನೇ ದಿನವು ಪ್ರತಿಭಟನೆ ನಡೆಸಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಿಗೆ ಮನವಿ ಅರ್ಪಿಸಿ ಕೂಡಲೇ ಬೇಡಿಕೆಗಳಿಗೆ ಸ್ಪಂದಿಸಬೇಕೆಂದು ಆಗ್ರಹಿಸಿದರು.

ಎರಡನೇ ದಿನದ ಪ್ರತಿಭಟನೆಯಲ್ಲಿ ತಾಲೂಕಾಧ್ಯಕ್ಷ ಸರಸ್ವತಿ ಮಾಳಶೆಟ್ಟಿ, ತಾಹೀರಾ ಮಕಾಂದಾರ, ರುಕ್ಮಾಯಿ ಬಿಂಗೆ, ಶಕೀಲಾ ಮುಜಾವರ ಸೇರಿದಂತೆ ಮುಂತಾದವರು ಇದ್ದರು. ●

ಉದ್ಯೋಗ ನೇಮಕಾತಿಗೆ ತಡೆ: ಸುತ್ತೋಲೆ ವಾಪಾಸ್‌ಗೆ– ಎಸ್‌ಎಫ್‌ಐ ಆಗ್ರಹ

ಕೊರೊನಾ ನೆಪವೊಡ್ಡಿ ಕರ್ನಾಟಕ ಸರ್ಕಾರ ಕಲ್ಯಾಣ ಕರ್ನಾಟಕ ಭಾಗ ಸೇರಿ ರಾಜ್ಯದಲ್ಲಿ ಖಾಲಿ ಇರುವ ಹುದ್ದೆ ಗಳ 2020–21 ಸಾಲಿನ ಭರ್ತಿಗೆ ತಡೆ ಹಿಡಿದಿರುವುದು ಇದು ಸಂವಿಧಾನ ದ್ರೋಹಿ ಕೆಲಸ ಈ ಆದೇಶವನ್ನು ಕೂಡಲೇ ಸರ್ಕಾರ ವಾಪಸು ಪಡೆಯಬೇಕು ಎಂದು ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಅಮರೇಶ ಕಡಗದ ಜಾಲಹಳ್ಳಿಯ ಶ್ರಮಿಕರ ಭವನದಲ್ಲಿ ಎಸ್‌ಎಫ್‌ಐ ವಲಯ ಸಮಿತಿ ವತಿಯಿಂದ ಕರೆದ ಸುದ್ದಿ ಘೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ ನಿರುದ್ಯೋಗ ತಾಂಡವಾಡುತ್ತಿದೆ, ವಿವಿಧ ಇಲಾಖೆಗಳಲ್ಲಿ ಸುಮಾರು ಎರಡು ಲಕ್ಷದ 59 ಸಾವಿರಕ್ಕೂ ಅಧಿಕ ಉದ್ಯೋಗಗಳು ಖಾಲಿ ಇವೆ. ಮತ್ತೊಂದು ಕಡೆ ವಿದ್ಯಾವಂತ ನಿರುದ್ಯೋಗ ಸಮೂಹ ದೊಡ್ಡದಿದೆ ಈಗ ಮುಂದುವರಿದು ಸರ್ಕಾರ ಕೊರೋನಾ ವಿಚಾರ ವನ್ನು ಮುಂದಿಟ್ಟುಕೊಂಡು ಆರ್ಥಿಕ ನೆಪವೊಡ್ಡಿ ನೇಮಕಾತಿಗೆ ತಡೆ ಹಾಕಿ ಆದೇಶ ಹೊರಡಿರುಸುವುದು ಗಾಯದ ಮೇಲೆ ಬರೆ ಎಳದಂತೆ ಆಗಿದೆ. ಹಿತ ಕಾಯಬೇಕಾದ ಸರ್ಕಾರ ಇವತ್ತು ನಿರುದ್ಯೋಗದ ಬಲವರ್ಧನೆಗೆ ಹೆಜ್ಜೆ ಹಾಕುತ್ತಿದೆ. ಅಲ್ಲದೆ ಅನೇಕ ವರ್ಷಗಳ ಹೋರಾಟದ ಪ್ರತಿಫಲವಾಗಿ ಈ ಭಾಗಕ್ಕೆ 371(ಜೆ)ಯ ಅಡಿಯಲ್ಲಿ ಸಂವಿಧಾನ ತಿದ್ದುಪಡಿಯ ಮೂಲಕ ಉದ್ಯೋಗ ಮತ್ತು ಸ್ಥಳೀಯರಿಗೆ ಮೀಸಲಾತಿ ಸಿಕ್ಕಿದೆ. ಈ ಮೀಸಲಾತಿಯನ್ನು ಆರಂಭದಿಂದಲೂ ಸರ್ಕಾರ ನಿಗದಿತ ಪ್ರಮಾಣದಲ್ಲಿ ಜಾರಿ ಮಾಡಲು ಯಾವ ಆಸಕ್ತಿಯನ್ನು ತೋರುತ್ತಿಲ್ಲ, ಕೂಡಲೇ ಆ ಆದೇಶ ವಾಪಸ್ ಪಡೆದು, ಕಲ್ಯಾಣ ಕರ್ನಾಟಕ ಪ್ರದೇಶದ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಹಿಡಿತದಿಂದ ಹೊರಗಿಡಬೇಕು ಹಾಗೂ ನೇಮಕಾತಿ ಪ್ರಕ್ರಿಯೆಗೆ ಮುಂದಾಗಬೇಕು ನಿರ್ಲಕ್ಷ್ಯ ವಹಿಸಿದರೆ ಕಲ್ಯಾಣ ಕರ್ನಾಟಕ ಭಾಗದಿಂದಲೇ ಇಡೀ ರಾಜ್ಯವ್ಯಾಪಿ ಶಾಸಕರ, ಸಚಿವರು ಸೇರಿ ಎಲ್ಲ ಜನಪ್ರತಿನಿಧಿಗಳ ಮನೆ, ಕಾರ್ಯಾಲಯದ ಮುಂಭಾಗದಲ್ಲಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆಂದು ಹೇಳಿದರು. ಕೊರೊನಾ ಹರಡುವಿಕೆ ಈ ಘಳಿಗೆಯಲ್ಲಿ ಸರ್ಕಾರ ರಾಜ್ಯದ ವಿದ್ಯಾರ್ಥಿಗಳ ಹಿತ ಕಾಪಾಡಬೇಕು, ಶುಲ್ಕ, ಆನ್ಲೈನ್ ತರಗತಿ ವಿಚಾರದಲ್ಲಿ ಸರ್ಕಾರ ಯಾವ ಸ್ಪಷ್ಟವಾದ ನಿರ್ಧರಕ್ಕೂ ಮುಂದಾಗದೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಭಿಗೆ ಹಾಗೂ ದಲಿತ, ಹಿಂದಳಿದ, ಅಲ್ಪಸಂಖ್ಯಾತ ಮತ್ತು ಬಡ, ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ವಂಚಿಸುವ ಹುನ್ನಾರ ನಡೆದಿದೆ ಈ ವಿದ್ಯಾರ್ಥಿ ವಿರೋಧಿ ನೀತಿಯನ್ನು ಕೈ ಬಿಡಬೇಕು. ಮತ್ತು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಮತ್ತು ವಿದ್ಯಾರ್ಥಿಗಳಿಗೆ ವಿಶೇಷ ಪರಿಹಾರ ನಿಧಿಯನ್ನು ನೀಡಬೇಕೆಂದು ಆಗ್ರಹಿಸಿದರು.

ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಶಿವಕುಮಾರ ಮ್ಯಾಗಳಮನಿ, ರಾಜ್ಯ ಸಹ ಕಾರ್ಯದರ್ಶಿ ಭೀಮನಗೌಡ ಸುಂಕೇಶ್ವರಹಾಳ ಮಾತನಾಡಿದರು. ಈ ಸಂಧರ್ಭದಲ್ಲಿ ಜಿಲ್ಲಾಧ್ಯಕ್ಷರಾದ ರಮೇಶ ವೀರಾಪೂರು, ಕಾರ್ಯದರ್ಶಿ ಲಿಂಗರಾಜ ಕಂದಗಲ್, ತಾಲೂಕು ಕಾರ್ಯದರ್ಶಿ ಮಹಾಲಿಂಗ ದೊಡ್ಡಮನಿ, ವಲಯ ಅಧ್ಯಕ್ಷರಾದ ಅಮರೇಶ ನಾಯಕ ಮುಂತಾದವರಿದ್ದರು. ●



'ಧನ್ವಂತರಿ ಚಿಕಿತ್ಸೆ'ಗೆ ಮೊರೆ ಇಡುತ್ತಿರುವ ಗ್ರಾಮೀಣ ನರಳಾಟ

ಟಿ. ಯಶವಂತ

ಉಳುವವನಿಗೆ ಭೂಮಿ ಖಾತರಿಪಡಿಸುವ ಒಂದು ಅಮೂಲಾಗ್ರ ಭೂ ಸುಧಾರಣೆ, ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯ ಗಣನೀಯ ಹೆಚ್ಚಳ, ಕೃಷಿ ಸೇರಿದಂತೆ ಗ್ರಾಮೀಣ ಜನ ಜೀವನದ ಪ್ರತಿಯೊಂದು ಕ್ಷೇತ್ರಗಳಲ್ಲಿ ಸಹಕಾರಿ ರಂಗಗಳನ್ನು ನಿರ್ಮಿಸಿ ಬಲಿಷ್ಠಗೊಳಿಸುವ ಧೋರಣೆಗಳುಳ್ಳ ಒಂದು ಪರ್ಯಾಯ ಕೃಷಿ ನೀತಿಯಿಂದ ಮಾತ್ರ ವಲಸೆ ಹಾಗೂ ಆತ್ಮಹತ್ಯೆಯಂತಹ ಭೀಕರ ಗುಣಲಕ್ಷಣಗಳ ಕೃಷಿ ಬಿಕ್ಕಟ್ಟನ್ನು ನಿವಾರಿಸಿ ಕೃಷಿ ಕ್ಷೇತ್ರದ ದುಡಿಮೆ ನಂಬಿರುವ ಕೋಟ್ಯಾಂತರ ರೈತಾಪಿ ಸಮುದಾಯವನ್ನು ನಿರುದ್ಯೋಗ-ಹಸಿವಿನಿಂದ ಮುಕ್ತಗೊಳಿಸಬಹುದು. ಕೋವಿಡ್ 19 ರ ಹಿಂದೆಂದೂ ಕಂಡರಿಯದ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ವ್ಯಾಪಕವಾಗಿ ಹಳ್ಳಿಗಳಿಗೆ ಬರುತ್ತಿರುವ ದುಡಿಮೆಗಾರರು, ಗ್ರಾಮೀಣ ಶ್ರಮಶಕ್ತಿ ಮೇಲೆ, ಕೃಷಿ ಭೂಮಿ ಮೇಲೆ ಉಂಟು ಮಾಡುವ ಒತ್ತಡಗಳನ್ನು ಅರ್ಥ ಮಾಡಿಕೊಂಡು, ವ್ಯಾಪಕವಾದ ಕ್ರಮಗಳನ್ನು ತುರ್ತಾಗಿ ಮಾಡಬೇಕಿದೆ.

ರಾಷ್ಟ್ರಕವಿ ಕುವೆಂಪು ವಿರಚಿತ 'ಧನ್ವಂತರಿ ಚಿಕಿತ್ಸೆ' ಕಥೆಯ ರೈತನ ನರಳಾಟ ಹಾಗೂ ಗೋಳಿನ ಚಿತ್ರಣ ಎಂತಹವರ ಮನಸ್ಸನ್ನು ಕರಗಿಸುವಂತಹದ್ದು. ಇದು 1940 ರ ಕಥಾ ಸಂಕಲನದ ಕಥೆ. ಆನಂತರ ಭಾರತದ ಕೃಷಿ ಹಲವು ಘಟ್ಟಗಳನ್ನು ಹಾದು ಬಂದಿದೆ. ಆದರೆ ಗೋಳಿನ ಚಿತ್ರಣ ಬದಲಾಗಲಿಲ್ಲ. ಜಾಗತೀಕರಣ ಧೋರಣೆಗಳ ನಂತರವಂತೂ ಈ ಗೋಳು ಪಡೆದುಕೊಂಡ ಆಯಾಮ ಹಲವು ಸ್ತರಗಳದ್ದು.

ಗ್ರಾಮೀಣ ಭಾರತವನ್ನು ಕಡೆಗಣಿಸಿ ಭಾರತದ ಅಭಿವೃದ್ಧಿ ಸಾಧಿಸುತ್ತೇವೆ ಎಂಬ ಜಾಗತೀಕರಣ ಧೋರಣೆಗಳ ಹುಂಬತನವು ಉಂಟು ಮಾಡಿರುವ ಅಸಮಾನತೆ ಇಡೀ ಭಾರತವನ್ನೇ ವಲಸೆ-ಮರುವಲಸೆ ಹಾಗೂ ಹತಾಶ ವಲಸೆಗಳ ಸುಳಿಗೆ ಸಿಲುಕಿಸಿದೆ. ಎಲ್ಲೆಲ್ಲೂ ಅನಾರೋಗ್ಯ-ಆತ್ಮಹತ್ಯೆಗಳ ರುದ್ರ ತಾಂಡವವೇ ನಡೆಯುತ್ತಿದೆ.

ತೆಲುಗಿನ ಮಹಾಕವಿ ವೆಂಕಟ ಅಪ್ಪರಾವ್ ಗುರಜಾಡ್ ರವರ ಸುಪ್ರಸಿದ್ಧ ಮಾತಾದ "ದೇಶವೆಂದರೆ ಕೇವಲ ಮಣ್ಣಲ್ಲ; ದೇಶವೆಂದರೆ ಅಲ್ಲಿನ ಜನ" ಎಂಬಂತೆ ಹಳ್ಳಿಗಳೆಂದರೆ ಕೇವಲ ಸಿನಿಮಾ ದೃಶ್ಯಗಳಾಗಬಲ್ಲ ಪರಿಸರ ಮಾತ್ರವೇ ಅಲ್ಲ: ಹಳ್ಳಿಗಳೆಂದರೆ ಅಲ್ಲಿನ ರೈತ -ಕೂಲಿಕಾರ ಹಾಗೂ ದೈಹಿಕ ದುಡಿಮೆಗಾರರು. ಹೌದು; 2011 ರ ಜನಗಣತಿ ಪ್ರಕಾರವೇ ಗ್ರಾಮೀಣ ಭಾರತದ ಎರಡು ಹೆಕ್ಟೇರ್ ಗಿಂತ ಕಡಿಮೆ ಹಿಡುವಳಿ ಭೂಮಿ ಇರುವ ಹಾಗೂ ಭೂಮಿ ಇಲ್ಲದಿರುವ ಕುಟುಂಬಗಳ ಪ್ರಮಾಣ ಶೇಕಡಾ 84.98. ಈ ಗುಂಪಿನಲ್ಲಿ ಭೂ ರಹಿತರು, ಕೃಷಿ ಕೂಲಿಕಾರರು, ದೈಹಿಕ ದುಡಿಮೆಗಾರರು ಹಾಗೂ ಸಣ್ಣ ಮತ್ತು ಅತಿ ಸಣ್ಣ ರೈತರು ಬರುತ್ತಾರೆ.

ಒಟ್ಟಾರೆ ಈ ಗುಂಪಿನ ಒಡೆತನದಲ್ಲಿ ಇರುವ ಭೂಮಿ ಪ್ರಮಾಣ ಶೇಕಡಾ 44.32 ಮಾತ್ರ. 1960-61 ರಲ್ಲಿ ಈ ಗುಂಪಿನ ಕುಟುಂಬಗಳ ಪ್ರಮಾಣ ಶೇಕಡಾ 57.2 ಇದ್ದರೆ, ಒಡೆತನದಲ್ಲಿ ಇದ್ದ ಹಿಡುವಳಿ ವಿಸ್ತೀರ್ಣ ಶೇಕಡಾ 9.3 ಆಗಿತ್ತು. 1971-72 ರಲ್ಲಿ ಈ ಗುಂಪಿನ ಕುಟುಂಬಗಳ ಪ್ರಮಾಣ ಶೇಕಡಾ 66 ಇದ್ದರೆ, ಒಡೆತನದಲ್ಲಿ ಇದ್ದ ಹಿಡುವಳಿ ವಿಸ್ತೀರ್ಣದ ಪ್ರಮಾಣ ಶೇಕಡಾ15.8 ಆಗಿತ್ತು. (ಕೋಹ್ಲಿ 1988). 2003-04 ರ ಅಂಕಿ ಅಂಶ ನೋಡುವುದಾದರೆ ಗ್ರಾಮೀಣ ಕರ್ನಾಟಕದ ಈ ಗುಂಪಿನ ಕುಟುಂಬಗಳ ಪ್ರಮಾಣ ಶೇಕಡಾ 85.2 ಇದ್ದರೆ, ಇವರ ಒಡೆತನದ ಹಿಡುವಳಿ ವಿಸ್ತೀರ್ಣದ ಪ್ರಮಾಣ ಶೇಕಡಾ 35.4 ಮಾತ್ರ (ರಾವಲ್ 2008). ಗ್ರಾಮೀಣ ಮಂಡ್ಯದ ಚಿತ್ರಣ ಸ್ವಲ್ಪ ಭಿನ್ನವಿದ್ದು ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕೂಲಿಕಾರರು, ದೈಹಿಕ ದುಡಿಮೆಗಾರರು ಒಟ್ಟಾರೆ ಈ ವರ್ಗಕ್ಕೆ ಸೇರಿದ ಕುಟುಂಬಗಳು ಶೇಕಡಾ 80 - ಶೇಕಡಾ 90 ರಷ್ಟಿದ್ದು, ಈ ಗುಂಪ್ರುವರ್ಗದ ಒಡೆತನದಲ್ಲಿ ಹಿಡುವಳಿ ವಿಸ್ತೀರ್ಣದ ಶೇಕಡಾ 49 ರಿಂದ ಶೇಕಡಾ 60 ರಷ್ಟಿದೆ.

ಅಂದರೆ ಗ್ರಾಮದ ಬಹುತೇಕ ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕೂಲಿಕಾರರು ಹಾಗೂ ದೈಹಿಕ ದುಡಿಮೆಗಾರರಾಗಿದ್ದಾರೆ. ಮಹಾತ್ಮ ಗಾಂಧಿರವರು ಹೇಳಿದ ದೇಶದ ಉದ್ಧಾರವೆಂದರೆ ಹಳ್ಳಿಗಳ ಉದ್ಧಾರ ಎಂಬುದನ್ನು ವಿಸ್ತರಿಸಿದರೆ ಹಳ್ಳಿಗಳ ಉದ್ಧಾರವೆಂಬುದು ಸಣ್ಣ ಮತ್ತು ಅತಿ ಸಣ್ಣ ರೈತರ, ಕೃಷಿ ಕೂಲಿಕಾರರ ಹಾಗೂ ದೈಹಿಕ ದುಡಿಮೆಗಾರರ ಉದ್ಧಾರವೇ ಆಗಿದೆ. ಆದರೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಕೃಷಿ ನೀತಿಯಲ್ಲಿ ಈ ಬಹುಸಂಖ್ಯಾತರು ಪ್ರಧಾನ ಸ್ಥಾನ ಪಡೆದಿಲ್ಲ. ಇವರ ಕೃಷಿ ಭೂಮಿ ರಕ್ಷಣೆ ಆಗುವಂತೆ, ಇವರ ಸುಸ್ಥಿರ ಬದುಕಿಗೆ ಆಧಾರವಾಗಿ ಕೃಷಿಯನ್ನು ಲಾಭದಾಯಕಗೊಳಿಸುವಂತಹ ಯಾವುದೇ ಧೋರಣೆಗಳು ಕೃಷಿ ನೀತಿಯಲ್ಲಿ ಇಲ್ಲ. ಬದಲಾಗಿ ಇವರನ್ನು ಕೃಷಿ ಭೂಮಿಯಿಂದ ಹೊರ ತಳ್ಳಲು ಹಾಗೂ ಗ್ರಾಮೀಣ ಜೀವನದಿಂದಲೇ ಹೊರ ಹಾಕಲು ನೀತಿಗಳನ್ನೇ ಅನುಸರಿಸುತ್ತಿವೆ.

ಕೃಷಿ ಬೇಕು, ಆದರೆ ಕೃಷಿಕ ಬೇಡ ಎನ್ನುವ ಧೋರಣೆಯ ಕೃಷಿ ನೀತಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿಸುತ್ತಿವೆ. ಕೃಷಿಗೆ ನೀಡುತ್ತಿರುವ ಸಬ್ಸಿಡಿಗಳ ಸಿಂಹಪಾಲು ಅತಿ ಹೆಚ್ಚು ಬಂಡವಾಳ ಬಯಸುವ ರಫ್ತು ಉದ್ದೇಶದ ಹೂವು - ಹಣ್ಣು ಮುಂತಾದ ಬೇಸಾಯಗಳಿಗೆ ಹೋಗುತ್ತಿದೆ. ಕೃಷಿಸಲಕರಣೆಗಳ ಖಾಸಗಿ ಒಡೆತನ ಪ್ರೋತ್ಸಾಹಿಸುವ ಕೃಷಿ ನೀತಿಗಳಿಂದಾಗಿ ಬಹುತೇಕ ಕೃಷಿಕರು ಉತ್ಪಾದನಾ ಸಾಧನಗಳಿಗೆ ದುಬಾರಿ ಬಾಡಿಗೆ ತೆರುವಂತಾಗಿದೆ. ಕೃಷಿ ಉತ್ಪನ್ನಗಳ ಮಾರಾಟದ ಸಂದರ್ಭಗಳಲ್ಲಿ ಸುಲಭವಾಗಿ ದಲ್ಲಾಳಿಗಳ ಕಪಿಮುಷ್ಟಿಗೆ ಸಿಲುಕುತ್ತಾರೆ.

ಈ ಶೋಷಣಾ ಮಾರಾಟ ವ್ಯವಸ್ಥೆಯಿಂದ ರಕ್ಷಿಸಲು ಸರ್ಕಾರದ ಖರೀದಿ ಕೇಂದ್ರಗಳ ನೆರವು ಇಲ್ಲದ್ದರಿಂದ ಒಂದು ಕಡೆ ಸರಾಸರಿಗಿಂತ ಹೆಚ್ಚಿನ ವೆಚ್ಚದ ಕೃಷಿ ಲಾಗುವಾಡುಗಳ ಹೊರೆ, ಇನ್ನೊಂದು ಕಡೆ ಅತ್ಯಂತ ಅಗ್ಗದ ದರಕ್ಕೆ ಹತಾಶ ಮಾರಾಟದ ಒತ್ತಡ, ಹೀಗೆ ಎರಡು ಕಡೆಯಿಂದಲೂ ದಯನೀಯವಾಗಿ ಸಣ್ಣ ಹಿಡುಳಿದಾರ ರೈತ ಶೋಷಿಸಲ್ಪಡುತ್ತಿದ್ದಾನೆ. ಇದಲ್ಲದೇ ಕೃಷಿಗೆ ಬೇಕಾದ ಅಗತ್ಯ ಬಂಡವಾಳಕ್ಕೆ ಮತ್ತು ಆರೋಗ್ಯ, ಶಿಕ್ಷಣ ಮುಂತಾದ ಸಾಮಾಜಿಕ ಕಲ್ಯಾಣ ಸುರಕ್ಷೆಗಳು ಇಲ್ಲದ್ದರಿಂದಾಗಿ ಏರಿರುವ ಜೀವನ ವೆಚ್ಚ, ಇವೆಲ್ಲದಕ್ಕೂ ವಾರ್ಷಿಕ ಶೇಕಡಾ 60 ರವರೆಗಿನ ದುಬಾರಿ ಬಡ್ಡಿಯ ಖಾಸಗಿ, ಮೈಕ್ರೋ ಫೈನಾನ್ಸ್ ಗಳಂತಹವುಗಳನ್ನು ಅವಲಂಬಿಸಬೇಕಾಗಿದೆ.

ಜಮೀನು ಅಳತೆ, ಋಣಭಾರರಾಹಿತ್ಯ ಪ್ರಮಾಣ ಪತ್ರ, ಖಾತೆ ಬದಲಾವಣೆ ಮುಂತಾದ ಹಲವು ಕಂದಾಯ ಮತ್ತಿತರೆ ಸೇವೆಗಳಿಗೆ ದುಬಾರಿ ಶುಲ್ಕಗಳನ್ನು ತೆರಬೇಕಾಗಿದೆ. ಈ ಯಾವುದೇ ಶುಲ್ಕಗಳು ಸರ್ವೆ ನಂಬರ್ ಗಳನ್ನು ಆಧರಿಸಿವೆಯೇ ಹೊರತು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿ ಆಧಾರವಾಗಿಲ್ಲ. ಹತ್ತು ಗುಂಟೆ ಜಮೀನು ದಾಖಲಾತಿಗಳನ್ನು ಸಮರ್ಪಕಗೊಳಿಸಲು ಆಗುವ ವೆಚ್ಚಕ್ಕೆ ಹೆದರಿ ಜಮೀನು ಮಾರಾಟ ಮಾಡಬೇಕಾದ ಪರಿಸ್ಥಿತಿಯೇ ಬಂದು ಬಿಡುತ್ತದೆ. ಏಕೆಂದರೆ ಖರೀದಿ ಮಾಡುವವನು ಆ ವೆಚ್ಚವನ್ನು ಮಿತವ್ಯಯಿಯಾಗಿ ನಿಭಾಯಿಸಲು ಸಾಧ್ಯ.

ಮಂಡ್ಯದ ಹಳ್ಳಿಗಳಲ್ಲಿ ಪ್ರಸ್ತುತ ಕೃಷಿ ಕೂಲಿಯ ದರ ಪುರುಷರಿಗೆ ಸರಾಸರಿ 300 ರೂ, ಮಹಿಳೆಯರಿಗೆ ಸರಾಸರಿ 150 ರೂ ಇದೆ. ಒಂದು ಕೃಷಿ ಕೂಲಿ ಕುಟುಂಬದಲ್ಲಿ ದುಡಿಯುವ ಸಾಮರ್ಥ್ಯ ಇರುವವರು ಇಬ್ಬರು ಎಂದು ಭಾವಿಸಿದರೆ ಅವರ ಪ್ರತಿದಿನದ ಕೂಲಿ ಪಡೆಯಬಹುದಾದ ಮೊತ್ತ 450 ರೂ. ಕೃಷಿ ಕೂಲಿಯಲ್ಲಿ ಇರುವ ನಿರುದ್ಯೋಗವನ್ನು ಮರೆತು ತಿಂಗಳಲ್ಲಿ 25 ದಿನ ಪೂರ್ತಿ ಕೆಲಸ ಮಾಡಿದರೂ 11250 ರೂ ದೊರಕಬಹುದು.

2016 ರ 7 ನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸಿನ ಪ್ರಕಾರ ಕೊನೆ ಶ್ರೇಣಿಯ ಕನಿಷ್ಠ ವೇತನ 18000 ರೂಗಳು. 2020 ರ ವರೆಗಿನ ಬೆಲೆ ಏರಿಕೆ ಲೆಕ್ಕ ಹಾಕಿಕೊಂಡರೆ ಇದು 21000 ರೂಗಳಾಗಬಹುದು. ಅಂದರೆ ಒಂದು ಕುಟುಂಬದ ಇಬ್ಬರು ದುಡಿದರೂ ಸುಮಾರು ಶೇಕಡಾ 50 ರಷ್ಟು ಕಡಿಮೆ. ವರ್ಷಪೂರ್ತಿ ಈ ಕೂಲಿ ದರಗಳಲ್ಲಿ ದುಡಿದರೂ ಬಡತನ ರೇಖೆಗಿಂತ ಕೆಳಗೆ ಇರಬೇಕಾದ ದಾರುಣ ಸ್ಥಿತಿ ಇದೆ ಎಂಬುದನ್ನು ಯಾರೂ ನಿರಾಕರಿಸಲಾಗದ ಕಣ್ಣಿಗೆ ರಾಚುವ ಕಟು ಸತ್ಯ.

ಇಂತಹ ಒಂದು ಗ್ರಾಮೀಣ ಸನ್ನಿವೇಶಕ್ಕೆ ಬೆಂಬಲ ಬೆಲೆಗೆ ಒತ್ತಾಯಿಸಬಹುದಾದ ಕೃಷಿ ಉತ್ಪನ್ನಗಳ ಮಾರುಕಟ್ಟೆಗಳನ್ನು ಮುಚ್ಚಲು ಅವಕಾಶ ನೀಡುವ ಎಪಿಎಂಸಿ ತಿದ್ದುಪಡಿ ಕಾಯ್ದೆ 2020, ಕೃಷಿ ಭೂಮಿಯನ್ನು ಮನಸೋ ಇಚ್ಛೆ ಖರೀದಿಸಲು ಕಾರ್ಪೊರೇಟ್ ಕಂಪನಿಗಳಿಗೆ ಅವಕಾಶ ನೀಡುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ 2020, ವಿದ್ಯುತ್ ಅನ್ನು ಕೃಷಿಗೆ, ಗ್ರಾಮೀಣ ಕುಟುಂಬಗಳ ಗೃಹ ಬಳಕೆಗೆ ಎಟುಕದಂತೆ ಮಾಡುವ ವಿದ್ಯುತ್ ಖಾಸಗೀಕರಣದ ವಿದ್ಯುತ್ ಕಾಯ್ದೆ 2020, ಆಹಾರ ಭದ್ರತೆಯನ್ನು ನಾಶ ಮಾಡುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ 2020 ಅನ್ನು ಸುಗ್ರಿವಾಜ್ಞೆ ಗಳ ಮೂಲಕ ಜಾರಿಗೆ ತರಲಾಗುತ್ತಿದೆ.


ಈ ಸುಗ್ರಿವಾಜ್ಞೆ ಗಳು ಸುಲಲಿತವಾಗಿ ಕಾಯಿದೆಯಾಗಿ ಬರಲು ಅಗತ್ಯವಾದ ರಾಜ್ಯಸಭೆಯ ಭರ್ಜರಿ ಬಹುಮತಕ್ಕಾಗಿ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳ ವಿರೋಧ ಪಕ್ಷಗಳ ಸರ್ಕಾರಗಳನ್ನೇ ಉರುಳಿಸಿ 'ಅಸಹ್ಯ ಆಪರೇಷನ್ ಕಮಲ'ಕ್ಕೆ ಒಳಪಡಿಸಲಾಗುತ್ತಿದೆ. ಕೃಷಿ ಬಿಕ್ಕಟ್ಟಿನ ಇವತ್ತಿನ ಸ್ವರೂಪವನ್ನು ಮರೆ ಮಾಚಲು, ನೈಜ ಪರಿಹಾರಗಳನ್ನು ಹುಡುಕಲು ನಿರಾಕರಿಸುವ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ರೈತ ಸಂಘಟನೆಗಳು, ಸಣ್ಣ ಸಣ್ಣ ಹಿಡುವಳಿ ಕೃಷಿಯನ್ನು ವೈಭವೀಕರಿಸುತ್ತಿವೆ. ಇನ್ನೊಂದು ಕಡೆ ಸಣ್ಣ ಮತ್ತು ಅತಿ ಸಣ್ಣ ಹಾಗೂ ಮಧ್ಯಮ ಹಿಡುವಳಿದಾರರನ್ನು ಕೃಷಿಯಿಂದ ಮುಕ್ತಗೊಳಿಸಿ ಭೂಮಿಯನ್ನು ಕ್ರೂಢೀಕರಿಸಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಸಿ ಉತ್ಪಾದಕತೆ ಹೆಚ್ಚಿಸುವ ಕೃಷಿ ಪದ್ಧತಿ ಬೇಕು ಎಂದು ಪ್ರತಿಪಾದಿಸಲಾಗುತ್ತಿದೆ. ಈ ಎರಡೂ ವಿಧಾನಗಳು ಇವತ್ತಿನ ಗ್ರಾಮೀಣ ಭಾರತದ ಕೃಷಿಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಕಾರಿ ಆಗುವುದಿಲ್ಲ.

ಉಳುವವನಿಗೆ ಭೂಮಿ ಖಾತರಿಪಡಿಸುವ ಒಂದು ಅಮೂಲಾಗ್ರ ಭೂ ಸುಧಾರಣೆ, ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯ ಗಣನೀಯ ಹೆಚ್ಚಳ, ಕೃಷಿ ಸೇರಿದಂತೆ ಗ್ರಾಮೀಣ ಜನ ಜೀವನದ ಪ್ರತಿಯೊಂದು ಕ್ಷೇತ್ರಗಳಲ್ಲಿ ಸಹಕಾರಿ ರಂಗಗಳನ್ನು ನಿರ್ಮಿಸಿ ಬಲಿಷ್ಠಗೊಳಿಸುವ ಧೋರಣೆಗಳುಳ್ಳ ಒಂದು ಪರ್ಯಾಯ ಕೃಷಿ ನೀತಿಯಿಂದ ಮಾತ್ರ ವಲಸೆ ಹಾಗೂ ಆತ್ಮಹತ್ಯೆಯಂತಹ ಭೀಕರ ಗುಣಲಕ್ಷಣಗಳ ಕೃಷಿ ಬಿಕ್ಕಟ್ಟನ್ನು ನಿವಾರಿಸಿ ಕೃಷಿ ಕ್ಷೇತ್ರದ ದುಡಿಮೆ ನಂಬಿರುವ ಕೋಟ್ಯಾಂತರ ರೈತಾಪಿ ಸಮುದಾಯವನ್ನು ನಿರುದ್ಯೋಗ-ಹಸಿವಿನಿಂದ ಮುಕ್ತಗೊಳಿಸಬಹುದು.

ಕೋವಿಡ್ 19 ರ ಹಿಂದೆಂದೂ ಕಂಡರಿಯದ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ವ್ಯಾಪಕವಾಗಿ ಹಳ್ಳಿಗಳಿಗೆ ಬರುತ್ತಿರುವ ದುಡಿಮೆಗಾರರು, ಗ್ರಾಮೀಣ ಶ್ರಮಶಕ್ತಿ ಮೇಲೆ, ಕೃಷಿ ಭೂಮಿ ಮೇಲೆ ಉಂಟು ಮಾಡುವ ಒತ್ತಡಗಳನ್ನು ಅರ್ಥ ಮಾಡಿಕೊಂಡು, ವ್ಯಾಪಕವಾದ ಕ್ರಮಗಳನ್ನು ತುರ್ತಾಗಿ ಮಾಡಬೇಕಿದೆ. ಈಗಾಗಲೇ ಕೋವಿಡ್ 19 ಸೋಂಕು ನಿಯಂತ್ರಣದಲ್ಲಿ ಮಾದರಿಯಾಗಿರುವ ಕೇರಳ, ಮುಂಬರುವ ಆಹಾರ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಸಹಕಾರಿ ಬೇಸಾಯವನ್ನು ಉತ್ತೇಜಿಸಲು ಅಗತ್ಯ ಶಾಸನವನ್ನು ಅಂಗೀಕರಿಸಿ ಕಾರ್ಯನ್ಮೋಖವಾಗಿದೆ.

ಮೋದಿರವರು ಕರೆ ನೀಡಿರುವ ಆತ್ಮನಿರ್ಭರ್ ಭಾರತ್ ಸಾಧಿಸಬೇಕಾದರೆ ಗ್ರಾಮೀಣ ಜನತೆಯ ಸ್ವಾಭಿಮಾನ-ಜೀವನ ಭದ್ರತೆಯ ರಕ್ಷಣೆ ತುಂಬಾ ಮುಖ್ಯ. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನ ವಿರೋಧಿ ಸುಗ್ರಿವಾಜ್ಞೆಗಳನ್ನು ಕೈ ಬಿಟ್ಟು ಅಗತ್ಯ ಕಾನೂನು-ಧೋರಣೆಗಳನ್ನು ರೂಪಿಸಲು ಮುಂದಾಗುವಂತೆ ಆಗ್ರಹಿಸೋಣವೇ! ●

ಕೊರೋನೋತ್ತರ 'ನ್ಯೂ-ನಾರ್ಮಲ್' ಏನಿದೆ? ಏನಾಗಬೇಕು?



ಕೊರೋನಾದಿಂದ ಪಾರಾದರೆ ಸಾಲದು. ಬಂಡವಾಳಶಾಹಿಯಿಂದ ಪಾರಾಗಬೇಕು. ಜನಸಾಮಾನ್ಯರ ಪಾಲಿಗೆ ಬಂಡವಾಳಶಾಹಿಯೇ ಅತ್ಯಂತ ಅಪಾಯಕಾರಿಯಾದ ಕೊರೋನಾ. ಕೊರೋನಾ ಮರೆಯಾದ ಮೇಲೂ ಜನಸಾಮಾನ್ಯರ ಪಾಲಿಗೆ ಸಿಗಬಹುದಾದ ಜೀವನ ಕೊರೋನೋತ್ತರ 'ನ್ಯೂ ನಾರ್ಮಲ್' ಅಲ್ಲ. 'ಹಳೆಯ ನಾರ್ಮಲ್' ಅಂದರೆ ಬಡತನ, ನಿರುದ್ಯೋಗ, ಹಣದುಬ್ಬರ, ಮುಂತಾದ ಬಂಡವಾಳಶಾಹೀ ಮೂಲದ ಕಷ್ಟಗಳ ಜೊತೆಗೆ, ಆಹಾರದ ಅಭಾವ, ತೀವ್ರ ಪೌಷ್ಟಿಕಾಂಶದ ಕೊರತೆ, ಹೊಸ-ಮರುಕಳಿಸುವ ಕಾಯಿಲೆಗಳಿಗೆ ಸುಲಭವಾಗಿ ಪಕ್ಕಾಗುವ ನಿರ್ಬಲತೆ, ಅಲ್ಪಾಯಸ್ಸು ಮುಂತಾದ ಗಂಭೀರ ತೊಂದರೆಗಳು ಸೇರಿಕೊಳ್ಳುತ್ತವೆ. ನಿಜವಾದ ನ್ಯೂ ನಾರ್ಮಲ್, ಅಂದರೆ ಹಳೆಯ ನಾರ್ಮಲ್‌ನಿಂದ ಪಾರಾದ, ಮತ್ತು ಬಂಡವಾಳಶಾಹಿಯಿಂದ ಬಿಡಿಸಿಕೊಂಡು ಸಂಘಟಿಸಿಕೊಳ್ಳಬೇಕಾದ ಸಮಾಜವಾದ.



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಕೊರೋನಾ ಜಾಡ್ಯವು ದಿನೇ ದಿನೇ ಹರಡುತ್ತಿರುವ ಈ ಹೊತ್ತಿನಲ್ಲೇ, ಈ ಸಾಂಕ್ರಾಮಿಕವು ಶಮನವಾದ ಮೇಲೆ ಬರುವ ಮಾಮೂಲಿ ಸ್ಥಿತಿ ಹೇಗಿರುತ್ತದೆ ಎಂಬುದರ ಬಗ್ಗೆ ಚರ್ಚೆ-ಊಹಾಪೋಹಗಳೂ ಪ್ರಾರಂಭವಾಗಿವೆ. ಕೆಲವರು ಅದಕ್ಕೆ 'ಹೊಸಮಾಮೂಲಿ', 'ನ್ಯೂ ನಾರ್ಮಲ್' ಎಂಬ ಹೆಸರು ಕೊಟ್ಟಿದ್ದಾರೆ. ಮಾಮೂಲಿ ಸ್ಥಿತಿ ಎಂದರೆ, ಬಿಕ್ಕಟ್ಟು ಅಥವಾ ಸಂಕಷ್ಟಗಳು ಕಳೆದು ಮತ್ತೆ ಮೊದಲಿನಂತೆ ಜೀವಿಸುವುದು ಎಂಥರ್ಥ. 'ಹೊಸ ಮಾಮೂಲಿ' ಎಂದರೆ ಬದಲಾದ ಸ್ಥಿತಿಯನ್ನು ನಿರ್ವಾಹವಿಲ್ಲದೆ ಒಪ್ಪಿಕೊಂಡು ಅದನ್ನೇ 'ಮಾಮೂಲಿ ಸ್ಥಿತಿ' ಎಂದು ಕರೆದುಕೊಳ್ಳುವುದು. 'ನಗರದಲ್ಲಿ ಗಲಭೆಯಾಗಿ ಗೋಲಿಬಾರ್‌ನಿಂದಾಗಿ ಐವರು ಸತ್ತದ್ದನ್ನು ಬಿಟ್ಟರೆ ಇಡೀ ನಗರ ಶಾಂತವಾಗಿದೆ' ಎಂದು ಹೇಳಿದಷ್ಟೇ ಅಸಂಬದ್ಧವಾದ ಹೇಳಿಕೆ ಇದು. ಸರಳವಾಗಿ ಹೇಳುವುದಾದರೆ, 'ನ್ಯೂ ನಾರ್ಮಲ್' ಅಂದರೆ ಹಿಂದಿದ್ದ ಸ್ಥಿತಿಯನ್ನು ಬಿಟ್ಟು ಬದಲಾದ ಸ್ಥಿತಿಯನ್ನು ಒಪ್ಪಿಕೊಳ್ಳಿ ಎಂದು ಜನರಿಗೆ ಹೇಳುವುದು, ಅಷ್ಟೆ.

'ಹಳೆ ಮಾಮೂಲಿ' ಅಂದರೆ, ಕೋವಿಡ್ 19 ಬರುವುದಕ್ಕಿಂತ ಮುಂಚಿನ ಭಾರತದ ಸಾಮಾನ್ಯ ಸ್ಥಿತಿ ಹೇಗಿತ್ತು? ಕಿತ್ತುತಿನ್ನುವ ಬಡತನ ಇತ್ತು, ಯುವಜನರಲ್ಲಿ ನಿರುದ್ಯೋಗ ಇತ್ತು. ಹಣದುಬ್ಬರ ಇತ್ತು. ಬ್ಯಾಂಕುಗಳ ವಸೂಲಿಯಾಗದ ಸಾಲಗಳು ಏರುತ್ತಿದ್ದ ಸ್ಥಿತಿ ಇತ್ತು. ಬೆಲೆಯೇರಿಕೆ ಇತ್ತು. ಬೆಳೆಗೆ ತಕ್ಕ ಬೆಲೆಯಿಲ್ಲದೆ, ಬರಗಾಲ-ಸಾಲಗಳಿಂದ ದಿಕ್ಕೆಟ್ಟ ರೈತರ ಆತ್ಮಹತ್ಯೆಗಳು ಇದ್ದವು. ಸವರ್ಣೀಯರು ಮತ್ತು ಬಲಿಷ್ಠ ಕೋಮಿನವರಿಂದಾದ ದಲಿತರ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಗುಂಪುದಾಳಿ, ಕೊಲೆಗಳು ಇದ್ದವು. ಅಧಿಕಾರಸ್ಥರು, ಪೋಲೀಸರು ಮತ್ತು ನ್ಯಾಯಾಧೀಶರ ಕೈಗೆ ಸಿಕ್ಕಿ 'ಆರೋಪವೇ ಅಪರಾಧ' ಎಂಬ ಧೋರಣೆಯಿಂದಾಗಿ ಜೈಲಿನಲ್ಲಿ ಕೊಳೆಯುವ ಬುದ್ಧಿಜೀವಿಗಳಿದ್ದರು. ಇವೆಲ್ಲಕ್ಕೂ ಆಧಾರವಾದ ಫ್ಯಾಸೀವಾದ, ಹಣಕಾಸು ಬಂಡವಾಳ ಮತ್ತು ಕಾರ್ಪೋರೇಟ್ ಸಖ್ಯದ ಪ್ರಭುತ್ವ ಇತ್ತು. ಜೊತೆಗೆ, ಎಲ್ಲ ಸಾಂವಿಧಾನಿಕ ಸಂಸ್ಥೆಗಳ ನಿರ್ಬಲೀಕರಣ, ವಿಕೇಂದ್ರೀಕೃತ ಪ್ರಜಾತಾಂತ್ರಿಕ ವ್ಯವಸ್ಥೆಯ ಕೇಂದ್ರೀಕರಣ, ಬಂಡವಳಿಗರು ನಾಲ್ಕನೆಯ ಔದ್ಯೋಗಿಕ ಕ್ರಾಂತಿ ಎಂದು ಕರೆಯುವ ಡಿಜಿಟಲೀಕರಣ ಮತ್ತು ಇವೆಲ್ಲದರಲ್ಲೂ ಹಾಸುಹೊಕ್ಕಾಗಿರುವ ಕೇಸರೀಕರಣಗಳು ಇದ್ದವು. ಇವುಗಳೆಲ್ಲದರ ಮೇಲೊಂದು ಬಟ್ಟೆ ಹೊದಿಸಿದಂತೆ ಕೊರೋನಾ ಜಾಡ್ಯ ಆವರಿಸಿತು. ದೇಶದ ಎಲ್ಲ ರಾಜಕೀಯ ಸಮಸ್ಯೆಗಳೂ, ಸರ್ಕಾರದ ಎಲ್ಲ ಜನಘಾತಕ ನೀತಿಗಳೂ, ಜನರ ಎಲ್ಲ ಆರ್ಥಿಕ ಸಂಕಟಗಳೂ, ಎಲ್ಲ ದೀನ-ದಲಿತರ ಮೇಲಿನ ಎಲ್ಲ ದೌರ್ಜನ್ಯಗಳೂ ಕೊರೋನಾ ಬಟ್ಟೆಯ ಹಿಂದೆ ಮರೆಯಾಗಿ, ಕಷ್ಟಗಳ ದಿನನಿತ್ಯದ ದಾರುಣ ಕಷ್ಟಗಳು ಕೊರೋನಾ ಹೆಸರನ್ನು ಪಡೆದುಕೊಂಡವು.

ಈಗಲೂ ಆ ಕಷ್ಟಗಳು ಇದ್ದೇ ಇವೆ. ಮಾತ್ರವಲ್ಲ, ದಿನೇ ದಿನೇ 'ಅಭಿವೃದ್ಧಿ'ಯಾಗುತ್ತಿವೆ

ಮಾಂತ್ರಿಕನೊಬ್ಬ ಮುಸುಕಿನ ಹಿಂದೆ ನಿಂತು ತಾನೇ ಮಾಯವಾದರೆ, ಅಥವಾ ಮುಸುಕಿನೊಳಕ್ಕೆ ಕೈಹಾಕಿ ಇರುವುದನ್ನು ಮಾಯಮಾಡಿದರೆ, ಇಲ್ಲದ್ದನ್ನು ಸೃಷ್ಟಿಸಿದಂತೆ ತೋರಿಸಿದರೆ ಮ್ಯಾಜಿಕ್ ಎಂದು ಮಕ್ಕಳು ಆನಂದಿಸಬಹುದು. ಅದೇ ಚಳಕಕ್ಕೆ ಧರ್ಮದ ಲೇಪವಿದ್ದರೆ ಅಮಾಯಕರು, ಮೂಢರು ಅದನ್ನೇ ಪವಾಡ ಎಂದೂ ನಂಬಬಹುದು. ಆದರೆ, ಜನಸಾಮಾನ್ಯರು ಕೊರೋನಾ ಸಾಂಕ್ರಾಮಿಕದ ಭಯದಲ್ಲಿರುವಾಗ, ಅದು ತಂದೊಡ್ಡಿರುವ ಕಷ್ಟಗಳಿಗೆ ಸಿಕ್ಕಿ ನರಳುತ್ತಿರುವಾಗ ಜಾಡ್ಯದ ಮುಸುಕಿನ ಹಿಂದೆ ಅಡಗಿ, ಕಾರ್ಮಿಕಪರವಾದ ಕಾನೂನುಗಳನ್ನು ಕಾರ್ಮಿಕವಿರೋಧೀ ಕಾನೂನುಗಳಾಗಿ ಬದಲಿಸಿದಾಗ, ಭೂಸುಧಾರಣಾ ಕಾನೂನುಗಳನ್ನು ರೈತವಿರೋಧೀ ಕಾನೂನುಗಳನ್ನಾಗಿ ಬದಲಿಸಿದಾಗ, ಡಿಜಿಟಲೀಕರಣದ ಹೆಸರಿನಲ್ಲಿ ಯುವಜನರ ಉದ್ಯೋಗಾವಕಾಶಗಳನ್ನೇ ರದ್ದುಮಾಡಿದಾಗ, ಆರೋಗ್ಯ, ಶಿಕ್ಷಣ, ಸಾರಿಗೆ ಸಂಚಾರ ಮುಂತಾದ ಅಗತ್ಯ ನಾಗರಿಕ ಸೌಲಭ್ಯಗಳೆಲ್ಲವನ್ನೂ ಖಾಸಗೀಕರಣಗೊಳಿಸಿ ವ್ಯಾಪಾರದ ಸರಕುಗಳನ್ನಾಗಿ ಬದಲಿಸಿದಾಗ, ಅದನ್ನು ಏನೆನ್ನಬಹುದು? ಅದಕ್ಕೆ 'ಅಭಿವೃದ್ಧಿ' ಎಂಬ ಹೆಸರು ಕೊಟ್ಟರೂ ಅದು ಜನವಿರೋಧೀ ಘಾತಕತನವಲ್ಲದೆ ಮತ್ತೇನೂ ಅಲ್ಲ.

ಕೊರೋನಾ ಕಾಣಿಸಿಕೊಂಡಾಗ, ಜಾಗಟೆ ಬಡಿದಾಯಿತು. ಹವನ ಹೋಮಗಳೂ ನಡೆದವು. ಜ್ಯೋತಿಷಿಗಳು ಹೇಳಲೇನೂ ತೋಚದೆ ತೆಪ್ಪಗಾದರು. ಧರ್ಮಗುರುಗಳು ಮೌನದ ಮೊರೆಹೊಕ್ಕರು. ಎಲ್ಲದಕ್ಕೂ ಜೈ ಶ್ರೀರಾಮ್ ಎಂದು ಕೂಗುತ್ತಿದ್ದ ರಾಮಸೇನೆ ಎಲ್ಲಿ ಮಾಯವಾಯಿತೋ ಯಾರಿಗೂ ತಿಳಿಯದು. 'ಕಷ್ಟಗಳನ್ನು ನಾವು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುತ್ತೇವೆ' ವ್ಯಾಪಾರೀ ಧೋರಣೆಯಂತೆ, ಟಿವಿ ವಾಹಿನಿಗಳು ಭಯರಂಜನೆಯನ್ನು ಮನರಂಜನೆಯೆಂದು ಮನೆಗಳಲ್ಲಿ ಕುಳಿತ ಜನರಿಗೆ ಕೊಟ್ಟವು. 80ರ ದಶಕದ ರಾಮಾಯಣ, ಮಹಾಭಾರತ, ಭಾಗವತಗಳ ಮರುಪ್ರಸಾರ ಶುರುವಾಯಿತು. ಜಾತಿ, ವರ್ಗ, ಅಧಿಕಾರ, ಅಂತಸ್ತು, ವಯಸ್ಸು, ಲಿಂಗ, ಹೀಗೆ ಯಾವ ಬೇಧವೂ ಇಲ್ಲದೆ ಆವರಿಸುವ ಕೊರೋನಾ ಜಾಡ್ಯ ಯಾವಾಗ, ಹೇಗೆ ಕೊನೆಗೊಳ್ಳುತ್ತದೆ, ಯಾರಿಗೂ ತಿಳಿಯದು.

ಆದರೆ, ಕಟ್ಟಾ ಅಸ್ತಿತ್ವವಾದಿಗಳಾದ ಬಂಡವಾಳಶಾಹಿಗಳ ದೃಷ್ಟಿಕೋನವೇ ಬೇರೆ. ಕತ್ತಲೆ ಆವರಿಸಿದಾಗ ಕಳ್ಳತನಗಳು ನಡೆಯುವಂತೆ, ಅಥವಾ ಹೆಚ್ಚಾಗುವಂತೆ ಸಾಂಕ್ರಾಮಿಕ ಜಾಡ್ಯಗಳು ಹರಡಿದಾಗ ಕಷ್ಟಗಳು ಉಂಟಾಗುತ್ತವೆ, ಇರುವ ಕಷ್ಟಗಳು ಹೆಚ್ಚುತ್ತವೆ. ಕತ್ತಲೆಯೇ ಹೇಗೆ ಕಳ್ಳನಲ್ಲವೋ, ಸಾಮಾಜಿಕ-ರಾಜಕೀಯ ಬಿಕ್ಕಟ್ಟುಗಳು ಹೇಗೆ ಕಳ್ಳತನಕ್ಕೆ ಕಾರಣವೋ, ಕೊರೋನಾ ಸಹ ಜನರ ಕಷ್ಟಗಳಿಗೆ ಕಾರಣ ಅಲ್ಲ. ಬಂಡವಾಳಶಾಹಿ ಆರ್ಥಿಕತೆಯು ಹುಟ್ಟಿಸುವ ಬಿಕ್ಕಟ್ಟುಗಳು ಫಲವಾದ ಜನಸಾಮಾನ್ಯರ ಕಷ್ಟಗಳು ಸಾಂಕ್ರಾಮಿಕ ಜಾಡ್ಯಗಳು ಹರಡಿದಾಗ, ಅವುಗಳಿಂದಲೇ ಬಂದಂತೆ ತೋರುತ್ತವೆ. ಆದ್ದರಿಂದಲೇ 'ಕೊರೋನಾ ಒಂದು ವೈರಸ್ಸು, ಬಂಡವಾಳಶಾಹಿ ಒಂದು ಜಾಡ್ಯ' ಎಂದು ಈ ಹಿಂದೆ ಕರೆದದ್ದು. ಇದರ ಅರಿವು ಬಂಡವಾಳಶಾಹಿಗಳಿಗೂ ಸಂಪೂರ್ಣವಾಗಿ ಇದೆ. 'ಬಲವಿದ್ದವನಿಗೆ ಮಾತ್ರ ಬದುಕುವ ಹಕ್ಕು' ಎಂಬ ಡಾರ್ವಿನ್ ಸಿದ್ಧಾಂತವನ್ನು ತಮ್ಮ ಬದುಕಿನ ಅಡಿಗಲ್ಲಾಗಿಸಿಕೊಂಡಿರುವವರು. ಹೀಗಾಗಿ ಬಿಕ್ಕಟ್ಟುಗಳ ತಾಯಿಯಾದ ಬಂಡವಾಳಶಾಹಿಗೆ ತನ್ನ ಅಸ್ತಿತ್ವದ ಮುಂದುವರಿಕೆಗಾಗಿ ಜನಸಮಾನ್ಯರನ್ನು ಹಿಂಡುವಾಗಲೂ, ಜನಘಾತಕ ಕ್ರಮಗಳನ್ನು ಕೈಗೊಳ್ಳುವಾಗಲೂ, ಜನರ ಅಮಾಯಕತನ, ಮೌಢ್ಯಗಳ ನಿರ್ದಯ ಬಳಕೆ ಹೊಸದೇನೂ ಅಲ್ಲ. ಅತ್ಯುತ್ಪಾದನೆಯ ಭಾರ ಹೆಚ್ಚಾದಾಗ, ತನ್ನ ವ್ಯಾಪಾರಕ್ಕಾಗಿ 'ಕ್ರಿಸ್‌ಮಸ್ ಕೊಡುಗೆ', 'ಯುಗಾದಿ ಬಂಪರ್ ಕೊಡುಗೆ', ಮುಂತಾಗಿ ಹಬ್ಬಗಳನ್ನು ಬಳಸಿಕೊಳ್ಳುವಂತೆ, ಜನರ ಕೊಳ್ಳುವ ಶಕ್ತಿಯು ಕಡಿಮೆಯಾಗಿ ಬೇಡಿಕೆ ಕುಸಿದಾಗ, '60% ರಿಯಾಯತಿ ಮಾರಾಟ','ಫ್ರೀ ಆಫರ್' ಗಳ ವರ್ಷಧಾರೆಯನ್ನೇ ಸುರಿಸುವಂತೆ, ಜನರಿಗೆ ಕಷ್ಟಬಂದಾಗಲೂ, ಕಷ್ಟದ ಹೆಸರಿನಲ್ಲೇ, ಈಗಿರುವಂತೆ ಕೊರೋನಾ ಹೆಸರಿನಲ್ಲೇ 'ದಾನ', 'ಧರ್ಮ ಸಹಾಯ', 'ಸಾಮಾಜಿಕ ಸೇವೆ,' ಮುಂತಾದ ಹೆಸರಿನೊಂದಿಗೆ ವ್ಯಾಪಾರವನ್ನು ಜೋಡಿಸಿ ಲಾಭಮಾಡಿಕೊಳ್ಳುವ ಕಲೆ ವರ್ತಕ ಬಂಡವಳಿಗರಿಗೆ ಚೆನ್ನಾಗಿ ಸಿದ್ಧಿಸಿದೆ. 'ಒಬ್ಬ ಬಂಡವಳಿಗನನ್ನು ನೇಣಿಗೇರಿಸಲು ಮತ್ತೊಬ್ಬ ಬಂಡವಳಿಗ ಹಗ್ಗವನ್ನು ಮಾರುತ್ತಾನೆ' ಎಂದು ಮಾರ್ಕ್ಸ್ ಹೇಳಿದ್ದು ಕೇವಲ ವಿನೋದಕ್ಕಾಗಿ ಅಲ್ಲ.

ಕೊರೋನಾ ಪ್ರಯುಕ್ತ ಆನ್‌ಲೈನ್ ವ್ಯಾಪಾರ! ಕೊರೋನಾ ಪ್ರಯುಕ್ತ ಆನ್‌ಲೈನ್ ಶಿಕ್ಷಣ! ಮನೆಯಲ್ಲೇ ಮಕ್ಕಳ ಶಿಕ್ಷಣಕ್ಕಾಗಿ ಡಿಜಿಟಲ್ ಆನ್‌ಲೈನ್ ಪಾಠಗಳು! ಕೊರೋನಾದಿಂದ ರಕ್ಷಣೆ ಪಡೆಯಲು, ರೋಗನಿರೋಧಕ್ಕಾಗಿ ಈ ಔಷಧ ಬಳಸಿ! ನಿಮ್ಮ ಮನೆಜನರ ಯೋಗಕ್ಷೇಮಕ್ಕಾಗಿ ಕೊರೋನಾ ವಿಮೆ ಮಾಡಿಸಿ! ಎಂಬಂಥ ಜಾಹಿರಾತುಗಳು ಈಗ ಎಲ್ಲೆಲ್ಲೂ.

ಜನಸಾಮಾನ್ಯರಲ್ಲದೆ, ವೈದ್ಯಸಿಬ್ಬಂದಿ ಮತ್ತು ಸಫಾಯಿ ಕರ್ಮಚಾರಿಗಳ ಕೊರೋನಾ ಸಂಬಂಧಿತ ಸೋಂಕು, ಕಷ್ಟನಷ್ಟಗಳು, ಪರಿತಾಪಗಳು, ಆತ್ಮಹತ್ಯೆಗಳು, ರೋಗಿಗಳ ಮರಣ ಸಂಖ್ಯೆ, ಇತ್ಯಾದಿ ಅಂಕಿಅಂಶಗಳ ಪಕ್ಕದಲ್ಲೇ 'ದೈತ್ಯ' ಬಂಡವಳಿಗರ ಹೊಸ ಯೋಜನೆಗಳು, ಬಂಡವಾಳ ಹೂಡಿಕೆ, ತ್ರೈಮಾಸಿಕ ಲಾಭಗಳು, 4ಜಿ, 5ಜಿ ಮುಂತಾದ ಹೊಸ ತಂತ್ರಜ್ಞಾನಗಳ ವ್ಯಾಪಾರ ಮಾಹಿತಿ, ವಿಶ್ವದ ಅತ್ಯಂತ ಶ್ರೀಮಂತರ ಪಟ್ಟಿ, ಅದರಲ್ಲಿ ಯಾರ ಯಾರ ರ್‍ಯಾಂಕ್ ಎಷ್ಟು ಎಂಬ ಮಾಹಿತಿಗಳು ಪ್ರಕಟವಾಗುತ್ತವೆ. ಇದರೊಂದಿಗೇ ಪಕ್ಷಾಂತರ, ಅಧಿಕಾರದ ಕಿತ್ತಾಟಗಳು, ಕೊರೋನಾ ಉಪಚಾರದ ಸಾಮಗ್ರಿಗಳ ಖರೀದಿಯಲ್ಲಿ ಅವ್ಯಹಾರ ಇತ್ಯಾದಿ ಇಂದಿನ ಮಾಧ್ಯಮಗಳಲ್ಲಿ ಕಾಣಿಸುತ್ತವೆ.



ಮನುಷ್ಯನ ಬೌದ್ಧಿಕ ಸೃಷ್ಟಿಗಳಾದ ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ಸದಾ ಹೊಸ ಹೊಸ ಉತ್ಪಾದನಾ ಸಾಧನಗಳನ್ನು ಒದಗಿಸುತ್ತಲೇ ಇರುತ್ತವೆ. ಇಡೀ ಉತ್ಪಾದನಾ ಕ್ರಮವನ್ನೇ ಬದಲಿಸುವಂಥಾ, ಆ ಮೂಲಕ ಉತ್ಪಾದನಾ ಸಂಬಂಧಗಳನ್ನು ನಿರ್ಧರಿಸುವಂಥಾ ಸಾಧನಗಳು ಇವು. ಮೊದಲ ಔದ್ಯಮಿಕ ಕ್ರಾಂತಿಯಿಂದ ಹಿಡಿದು ಇಂದಿನ ಡಿಜಿಟಲ್ ಮತ್ತು ಕೃತಕ ಬುದ್ಧಿಮತ್ತೆಯ-ಮಾಹಿತಿ ತಂತ್ರಜ್ಞಾನ-ಜೈವಿಕತಂತ್ರಜ್ಞಾನಗಳವರೆಗೆ, ಅವುಗಳ ಫಲವಾದ ಈ ಸಾಧನಗಳು ಉತ್ಪಾದನೆಯಲ್ಲಿನ ಶ್ರಮ ಮತ್ತು ಶ್ರಮಕಾಲವನ್ನು, ಆ ಮೂಲಕ ಉತ್ಪನ್ನಗಳ ಮೌಲ್ಯಗಳನ್ನು ಇಳಿಸುತ್ತಾ ಬಂದಿವೆ. ಈ ಕ್ರಾಂತಿಕಾರೀ ಸಾಧನಗಳು ಸಮಾಜವಾದೀ ವ್ಯವಸ್ಥೆಯಲ್ಲಿ ಸಮಾಜದ ಆಸ್ತಿಯಾಗಿ ಶ್ರಮದ ಇಳಿಕೆ, ಮತ್ತು ಮೌಲ್ಯದ ಇಳಿಕೆಯ ಲಾಭಗಳು ಎಲ್ಲರಿಗೂ ದೊರೆಯುತ್ತವೆ. ಮನುಷ್ಯರು ಶ್ರಮಮಾಡುವ ಯಂತ್ರಗಳಾಗದೆ, ಯಾರು ಯಾರನ್ನೂ ಶೋಷಿಸದೆ, ಎಲ್ಲರೂ ಸೃಜನಶೀಲತೆಯ ಪೂರ್ಣಸ್ವರೂಪದ ಮನುಷ್ಯರಾಗಿ ಜೀವಿಸುವುದು ಸಾಧ್ಯ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಸಾಧ್ಯಮಾಡುವ ಈ ಆವಿಷ್ಕಾರಗಳು ಈಗ ಬಂಡವಾಳಶಾಹಿಗಳ ಸ್ವಾಮ್ಯ ಮತ್ತು ನಿಯಂತ್ರಣದಲ್ಲಿರುವುದರಿಂದ ಅವುಗಳಿಂದ ಸಿಗುವ ಲಾಭಗಳು ಬೆರಳೆಣಿಕೆಯ 'ದೈತ್ಯ'ರಲ್ಲಿ ರಾಶಿಗೊಂಡು, ಅವರು, ಗಗನಚುಂಬಿ ಭವನಗಳಲ್ಲಿ ನೂರಾರು ಸೇವಕರೊಂದಿಗೆ ಜೀವಿಸಿದರೆ, ಒಂದಿಷ್ಟು ಮಂದಿ ಅನುಕೂಲಸ್ಥರು ಒಬ್ಬಿಬ್ಬರು ಸೇವಕರೊಂದಿಗೆ, ಮಹಡಿಗಳಲ್ಲಿ, ಇನ್ನುಳಿದ ಬಹುಸಂಖ್ಯಾತ ಜನಸಾಮಾನ್ಯರು ತಮಗೆ ತಾವೇ ಸೇವಕರಾಗಿ, ನೆಲದಮೇಲಿನ ಕಟ್ಟಡ-ಗೂಡು-ಗುಡಿಸಲು-ಗುಡಾರಗಳಲ್ಲಿ ಅನಿವಾರ್ಯವಾಗಿ ಹೇಗೆ ಹೇಗೋ ಬದುಕುವಂತಾಗಿದೆ. ಕೊರೋನಾ ಎಲ್ಲರಿಗೂ ಒಂದೇ ಆದರೂ, ಅದರ ಪರಿಣಾಮಗಳನ್ನು ಎದುರಿಸಿ ಅನುಭವಿಸಿ ಗೆಲ್ಲುವ ಅಥವಾ ಸೋಲುವ ಪರಿಗಳಲ್ಲಿ ಬಂಡವಾಳಶಾಹಿಗಳಿಗೂ, ಮಧ್ಯಮವರ್ಗದವರಿಗೂ, ಮತ್ತು ಕೆಳವರ್ಗದವರಿಗೂ ನಿರ್ಣಾಯಕವಾಗಿ ಬೇರೆ ಬೇರೆಯಾಗಿದೆ. ಆದ್ದರಿಂದ ಕೊರೋನಾದಿಂದ ಪಾರಾದರೆ ಸಾಲದು. ಬಂಡವಾಳಶಾಹಿಯಿಂದ ಪಾರಾಗಬೇಕು. ಜನಸಾಮಾನ್ಯರ ಪಾಲಿಗೆ ಬಂಡವಾಳಶಾಹಿಯೇ ಅತ್ಯಂತ ಅಪಾಯಕಾರಿಯಾದ ಕೊರೋನಾ. ಕೊರೋನಾ ಮರೆಯಾದ ಮೇಲೂ ಜನಸಾಮಾನ್ಯರ ಪಾಲಿಗೆ ಸಿಗಬಹುದಾದ ಜೀವನ ಕೊರೋನೋತ್ತರ 'ನ್ಯೂ ನಾರ್ಮಲ್' ಅಲ್ಲ. 'ಹಳೆಯ ನಾರ್ಮಲ್' ಅಂದರೆ ಬಡತನ, ನಿರುದ್ಯೋಗ, ಹಣದುಬ್ಬರ, ಮುಂತಾದ ಬಂಡವಾಳಶಾಹೀ ಮೂಲದ ಕಷ್ಟಗಳ ಜೊತೆಗೆ, ಆಹಾರದ ಅಭಾವ, ತೀವ್ರ ಪೌಷ್ಟಿಕಾಂಶದ ಕೊರತೆ, ಹೊಸ-ಮರುಕಳಿಸುವ ಕಾಯಿಲೆಗಳಿಗೆ ಸುಲಭವಾಗಿ ಪಕ್ಕಾಗುವ ನಿರ್ಬಲತೆ, ಅಲ್ಪಾಯಸ್ಸು ಮುಂತಾದ ಗಂಭೀರ ತೊಂದರೆಗಳು ಸೇರಿಕೊಳ್ಳುತ್ತವೆ.

ನಿಜವಾದ ನ್ಯೂ ನಾರ್ಮಲ್, ಅಂದರೆ ಹಳೆಯ ನಾರ್ಮಲ್‌ನಿಂದ ಪಾರಾದ, ಮತ್ತು ಬಂಡವಾಳಶಾಹಿಯಿಂದ ಬಿಡಿಸಿಕೊಂಡು ಸಂಘಟಿಸಿ ಕೊಳ್ಳಬೇಕಾದ ಸಮಾಜವಾದ. ●

ಜನಶಕ್ತಿ



ಚಿತ್ರಗಳು ಕೃಪೆ: ದೇಶಾಭಿಮಾನಿ

ಕೇರಳದಲ್ಲಿ ಕಾಂಗ್ರೆಸ್+ಬಿಜೆಪಿ ಅನೀತಿಯುತ ರಾಜಕೀಯ

ಎಲ್‌ಡಿಎಫ್ ಸರಕಾರ ಕೊವಿಡ್ ಮಹಾಮಾರಿಯನ್ನು ಎದುರಿಸುವಲ್ಲಿ ಪಡೆಯುತ್ತಿರುವ ಜನಪ್ರಿಯತೆಯಿಂದ ಹತಾಶರಾಗಿರುವ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿಗಳು ಮತ್ತು ಎಲ್‌ಡಿಎಫ್ ಸರಕಾರದ ಮೇಲೆ ಗುರಿಯಿಡಲು ಚಿನ್ನ ಕಳ್ಳಸಾಗಾಣಿಕೆ ಪ್ರಕರಣವನ್ನು ಬಳಸಲು ಸರ್ವಪ್ರಯತ್ನ ನಡೆಸುತ್ತಿದ್ದಾರೆ. ಹೀಗೆ ಮಾಡುವಾಗ, ಆರೋಪಿಯಲ್ಲಿ ಒಬ್ಬರಾದ ಸಂದೀಪ್ ನಾಯರ್‌ಗೆ ಬಿಜೆಪಿಯೊಡನೆ ಸಂಪರ್ಕವಿದೆ ಎಂಬ ಸಂಗತಿಯನ್ನೂ ಅವರು ನಿರ್ಲಕ್ಷಿಸಿದ್ದಾರೆ.
ಕಾಂಗ್ರೆಸ್ ಮತ್ತು ಬಿಜೆಪಿ ತಮ್ಮ ಕೃತ್ಯಗಳ ಮೂಲಕ ಕೊನೆಗೆ ನಿಜವಾದ ಅಪರಾಧಿಗಳು ಮತ್ತು ಅವರ ಹಿಂದಿರುವ ಶಕ್ತಿಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಒಂದು ನೆವವನ್ನು ಒದಗಿಸುತ್ತಿದ್ದಾರೆಯೇ?



ಪ್ರಕಾಶ ಕಾರಟ್

ಕೇರಳದಲ್ಲಿ ಚಿನ್ನ ಕಳ್ಳಸಾಗಾಣಿಕೆ ಪ್ರಕರಣವನ್ನು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ಎಲ್‌ಡಿಎಫ್ ಸರಕಾರದ ಪ್ರತಿಷ್ಠೆಗೆ ಮಸಿ ಬಳಿಯಲು ಮತ್ತು ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಸರಕಾರವನ್ನು ಅಸ್ಥಿರಗೊಳಿಸುವ ಜಂಟಿ ಪ್ರಯತ್ನಕ್ಕೆ ಬಳಸುತ್ತಿವೆ.

ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ಕಾಂಗ್ರೆಸ್ ಮತ್ತು ಯುಡಿಎಫ್ ಆಗ್ರಹಿಸಿವೆ, ಮತ್ತು ಅದಕ್ಕಾಗಿ ಒಂದು 'ಹೋರಾಟ'ವನ್ನು ಆರಂಭಿಸಿವೆ. ಬಿಜೆಪಿ ಕೂಡ ಅದೇ ಬೇಡಿಕೆಯೊಂದಿಗೆ ಪ್ರತಿಭಟನೆಗಳನ್ನು ನಡೆಸುತ್ತಿದೆ. ಯುಡಿಎಫ್ ವಿಧಾನಸಭೆಯಲ್ಲಿ ಸರಕಾರದ ವಿರುದ್ಧ ಒಂದು ಅವಿಶ್ವಾಸ ಠರಾವನ್ನು ಮಂಡಿಸುವುದಾಗಿ ಪ್ರಕಟಿಸಿದೆ.

ಕೊಲ್ಲಿ ದೇಶಗಳಿಂದ ಕೇರಳಕ್ಕೆ ಚಿನ್ನದ ಕಳ್ಳ ಸಾಗಾಣಿಕೆ ಒಂದು ಬಹಳ ವರ್ಷಗಳಿಂದ ನಡೆಯುತ್ತಿರುವ ವಿದ್ಯಮಾನ. ಇದು ಕೊವಿಡ್ ಮಹಾಮಾರಿಯ ನಂತರ, ವಿಮಾನ ಹಾರಾಟ ಮತ್ತೆ ಆರಂಭವಾದಾಗ ಮತ್ತು ರಾಜ್ಯಕ್ಕೆ ಚಾರ್ಟರ್ಡ್(ಖಾಸಗಿ) ಹಾರಾಟಗಳು ಹೆಚ್ಚಿದಾಗ ಇದ್ದಕ್ಕಿದ್ದಂತೆ ಏರಿದೆ. ಕಳೆದ ಆರು ತಿಂಗಳಲ್ಲಿ ಕೇರಳದ ಮೂರು ವಿಮಾನ ನಿಲ್ದಾಣಗಳಲ್ಲಿ ಸುಮಾರು 100 ಕೋಟಿ ರೂ. ಮೌಲ್ಯದ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ ತಿರುವನಂತಪುರಂ ವಿಮಾನ ನಿಲ್ದಾಣದ ಮೂಲಕ ಜೂನ್ 30 ರಂದು ಪ್ರಯತ್ನಿಸಿದ ನಿಷಿದ್ಧ ಕಳ್ಳಸಾಗಾಣಿಕೆ ಅದಕ್ಕೆ ಅಂಗೀಕರಿಸಿದ ವಿಧಾನ ಮತ್ತು ಕಳ್ಳಮಾಲಿನ ಗಾತ್ರದ ದೃಷ್ಟಿಯಿಂದ ಮಹತ್ವದ್ದಾಗಿದೆ. ಅದು ರಾಜತಾಂತ್ರಿಕ ಬ್ಯಾಗೇಜಿನಲ್ಲಿ ಬಂದಿದೆ, ಮತ್ತು ಅದರ ತೂಕ 30 ಕೆ.ಜಿ.

ಇದರಲ್ಲಿ ರಾಜ್ಯ ಪೋಲಿಸ್ ತನಿಖಾ ಸಂಸ್ಥೆಯಲ್ಲ, ಇಂತಹ ವಿಷಯಗಳಲ್ಲಿ ಪ್ರಕರಣ ದಾಖಲಿಸುವ ಅಧಿಕಾರವೂ ಅದಕ್ಕಿಲ್ಲ. ಅದು ಕಸ್ಟಮ್ಸ್ ಇಲಾಖೆಯ ವ್ಯಾಪ್ತಿಗೆ ಬರುತ್ತದೆ, ಇದು ಕೇಂದ್ರ ಸರಕಾರದ ಅಡಿಯಲ್ಲಿದೆ. ರಾಜ್ಯ ಪೋಲೀಸಿಗೆ ಇರುವುದು ಒಂದು ಸಹಾಯಕ ಪಾತ್ರ ಮಾತ್ರ. ಆದ್ದರಿಂದಲೇ ಈ ಪ್ರಕರಣದ ವಿಸ್ತಾರ ತಿಳಿದು ಬಂದ ಕೂಡಲೇ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಯಾವುದಾದರೂ ಕೇಂದ್ರೀಯ ಸಂಸ್ಥೆಯಿಂದ ಇದರ ಪರಿಣಾಮಕಾರಿ ತನಿಖೆ ನಡೆಸಿ, ಆಮೂಲಕ ಈ ಕಳ್ಳಸಾಗಾಣಿಕೆ ಕಾರ್ಯಾಚರಣೆಯ ಮೂಲದಿಂದ ಹಿಡಿದು ಅದರ ತುತ್ತತುದಿಯ ಫಲಾನುಭವಿಗಳ ವರೆಗೆ ಇಡೀ ಸರಪಳಿಯನ್ನು ಕಂಡುಹಿಡಿದು ಶಿಕ್ಷಿಸಬೇಕು ಎಂದು ಕೇಳಿದರು.

ಕೇಂದ್ರವು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಇದನ್ನು ಕೈಗೆತ್ತಿಕೊಳ್ಳುವಂತೆ ನಿರ್ದೇಶಿಸಿದೆ. ಈ ನಡುವೆ, ಕಸ್ಟಮ್ಸ್‌ನವರು ಒಂದು ಪ್ರಕರಣ ದಾಖಲಿಸಿದ್ದಾರೆ, ಇದರಲ್ಲಿ ನಾಲ್ಕು ವ್ಯಕ್ತಿಗಳು ಆರೋಪಿಗಳಾಗಿದ್ದಾರೆ. ಅವರಲ್ಲೊಬ್ಬರು ಮಹಿಳೆ, ಸ್ವಪ್ನ ಸುರೇಶ್. ಈಕೆ ಸರಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿರುವ ಒಂದು ಸಾರ್ವಜನಿಕ ವಲಯದ ಸಂಸ್ಥೆಯಲ್ಲಿ ಒಬ್ಬ ಕಂಟ್ರಾಕ್ಟ್ ನೌಕರಳಾಗಿ ಕೆಲಸ ಮಾಡಿದವರು. ಈ ಮೊದಲು ಆಕೆ ಯುಎಇ ಯ ಕಾನ್ಸುಲೇಟ್‌ನ ಮತ್ತು ಏರ್‌ಇಂಡಿಯ ಸಾಟ್ಸ್‌ನ ಒಬ್ಬ ನೌಕರಳಾಗಿದ್ದರು.

ಮಾಹಿತಿ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿಗಳ ಕಚೇರಿಯ ಪ್ರಮುಖ ಕಾರ್ಯದರ್ಶಿ ಶಿವಶಂಕರ್ ಈ ಆರೋಪಿಗೆ ಪರಿಚಯವಿದ್ದವರು ಎಂದು ತಿಳಿದು ಬಂದಾಗ ಅವರನ್ನು ಎರಡೂ ಹುದ್ದೆಗಳಿಂದ ತೆಗೆಯಲಾಯಿತು. ಸರಕಾರದ ಮುಖ್ಯ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುವ ಒಂದು ಸಮಿತಿಯನ್ನು ಕೂಡ ಆಕೆ ಮಾಹಿತಿ ತಂತ್ರಜ್ಞಾನ ಇಲಾಖೆಯ ಸಂಸ್ಥೆಯಲ್ಲಿ ಉದ್ಯೋಗ ಪಡೆದ ಸನ್ನಿವೇಶದ ಬಗ್ಗೆ ತನಿಖೆ ನಡೆಸಲು ರಚಿಸಲಾಯಿತು. ತನಿಖೆಯ ಫಲಿತಾಂಶವನ್ನು ಆಧರಿಸಿ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಆದರೆ ಕಾಂಗ್ರೆಸ್ ಮತ್ತು ಯುಡಿಎಫ್ ಮುಖಂಡತ್ವಕ್ಕೆ ಪ್ರಮುಖ ಕಾರ್ಯದರ್ಶಿ ವಹಿಸಿದರೆನ್ನಲಾದ್ದದ ಪಾತ್ರವೇ ಮುಖ್ಯಮಂತ್ರಿಗಳ ರಾಜೀನಾಮೆ ಕೇಳಲು ಸಾಕಾಗಿದೆ. ಪ್ರತಿಪಕ್ಷದ ಮುಖಂಡ ರಮೇಶ್ ಚೆನ್ನಿತಾಲ ಮತ್ತು ಕಾಂಗ್ರೆಸ್ ಮುಖಂಡತ್ವಕ್ಕೆ ಎಲ್‌ಡಿಎಫ್ ಸರಕಾರ ಕೊವಿಡ್ ಮಹಾಮಾರಿಯನ್ನು ಎದುರಿಸುವಲ್ಲಿ ಪಡೆಯುತ್ತಿರುವ ಜನಪ್ರಿಯತೆ ಮತ್ತು ಮಂಜೂರಾತಿ ತಪ್ಪಿಸಲು ಏನೂ ಮಾಡಲಾಗದ್ದಕ್ಕೆ ಹೆಚ್ಚೆಚ್ಚು ಹತಾಶೆ ಉಂಟಾಗುತ್ತಿದೆ. ಅವರು ಸರಕಾರ ಮಹಾಮಾರಿಯನ್ನು ತಡೆದಿಡಲು ಕೈಗೊಂಡ ಕ್ರಮಗಳು ಮತ್ತು ವಹಿಸಿದ ಮುಂಜಾಗ್ರತಾ ಕ್ರಮಗಳನ್ನು ಹೀಗಳೆಯಲು ಅಸಂಬದ್ಧ ಮಟ್ಟದ ವರೆಗೂ ಹೋದರು. ಅದರೆ ಏನೂ ಪ್ರಯೋಜನವಾಗಲಿಲ್ಲ.

ಹೀಗಾಗಿ, ಈಗ ಮುಖ್ಯಮಂತ್ರಿಗಳು ಮತ್ತು ಎಲ್‌ಡಿಎಫ್ ಸರಕಾರದ ಮೇಲೆ ಗುರಿಯಿಡಲು ಚಿನ್ನ ಕಳ್ಳಸಾಗಾಣಿಕೆ ಪ್ರಕರಣವನ್ನು ಬಳಸಲು ಸರ್ವಪ್ರಯತ್ನ ನಡೆಸಲಾಗುತ್ತಿದೆ. ಹೀಗೆ ಮಾಡುವಾಗ, ಆರೋಪಿಗಳಲ್ಲಿ ಒಬ್ಬರಾದ ಸಂದೀಪ್ ನಾಯರ್‌ಗೆ ಬಿಜೆಪಿಯೊಡನೆ ಸಂಪರ್ಕವಿದೆ ಎಂಬ ಸಂಗತಿಯನ್ನೂ ಅವರು ನಿರ್ಲಕ್ಷಿಸಿದ್ದಾರೆ. ಕಾಂಗ್ರೆಸ್‌ಗೆ ಎಲ್‌ಡಿಎಫ್ ಸರಕಾರದ ವಿರುದ್ಧ ಹೋರಾಟದಲ್ಲಿ ಮೋದಿ ಸರಕಾರವನ್ನು ಒಳಗೊಳ್ಳುವುದರಲ್ಲೇ ಹೆಚ್ಚು ಆಸಕ್ತಿ. ಎನ್‌ಐಎ ನ್ನು ತನಿಖಾ ಸಂಸ್ಥೆಯಾಗಿ ನೇಮಿಸುವುದರಿಂದಲೂ ಅದಕ್ಕೆ ತೃಪ್ತಿಯಾಗಿಲ್ಲ, ಸಿಬಿಐ ಮತ್ತು ಆರ್‌ಎಡಬ್ಲ್ಯುವನ್ನು ಈ ಪ್ರಕರಣದೊಳಕ್ಕೆ ತರಬೇಕು ಎಂದು ಆಗ್ರಹಿಸುತ್ತಿದೆ. ಬಿಜೆಪಿ ಸರಕಾರ ಕೇಂದ್ರೀಯ ಸಂಸ್ಥೆಗಳನ್ನು ತನ್ನ ರಾಜಕೀಯ ಉದ್ದೇಶಗಳಿಗೆ ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬುದು ಕಾಂಗ್ರೆಸ್‌ಗೆ ಚೆನ್ನಾಗಿ ಗೊತ್ತಿದೆ. ಈ ಪ್ರಕರಣದಲ್ಲಿಯೂ ಹಾಗೆಯೇ ಮಾಡಬಹುದು ಎಂಬುದು ಅದರ ಆಸೆ.

ಈ ನಡುವೆ ನಾಲ್ವರು ಮೂಲ ಆಪಾದಿತರಲ್ಲಿ ಮೂವರನ್ನು ಬಂಧಿಸಿ ವಿಚಾರಣೆಗೆ ಎನ್‌ಐಎ ಕಸ್ಟಡಿಗೆ ತಗೊಳ್ಳಲಾಗಿದೆ. ನಾಲ್ಕನೇ ವ್ಯಕ್ತಿ, ಯುಎಇ ಯಿಂದ ರವಾನೆ ಮಾಡುವುದರ ಹಿಂದೆ ಇರುವ ಫೈಸಲ್ ಫರೀದ್, ಇನ್ನೂ ವಿದೇಶದಲ್ಲಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸರು ಮೂವರು ಇತರರನ್ನು ಬಂಧಿಸಿದ್ದಾರೆ. ಅವರಲ್ಲೊಬ್ಬರು ವ್ಯಾಪಾರಿ, ರಮೀಝ್. ಈತನ ಮೇಲೆ ಈ ಮೊದಲೂ ಚಿನ್ನದ ಕಳ್ಳಸಾಗಾಣಿಕೆಯ ಪ್ರಕರಣವಿತ್ತು, ಮತ್ತು ಆತ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿನ ಒಬ್ಬ ಪ್ರಮುಖ ಮುಖಂಡರ ಒಬ್ಬ ಸಂಬಂಧಿ ಎಂದು ವರದಿಯಾಗಿದೆ.

ಕಳೆದ ನಾಲ್ಕು ವಾರಗಳಲ್ಲಿ ರಾಜ್ಯದಲ್ಲಿ ಕೊವಿಡ್ ಸೋಂಕಿನಲ್ಲಿ ತೀವ್ರ ಹೆಚ್ಚಳ ಕಂಡು ಬಂದಿದೆ. ವಿದೇಶಗಳಿಂದ ಮತ್ತು ಭಾರತದ ಇತರ ರಾಜ್ಯಗಳಿಂದ ಭಾರೀ ಸಂಖ್ಯೆಯಲ್ಲಿ ಜನಗಳು ಹಿಂದಿರುಗಿದ ನಂತರ ಇದು ಸಂಭವಿಸಿದೆ; ಆಮದಾದ ಪ್ರಕರಣಗಳ ಏರಿಕೆಯೊಂದಿಗೆ, ಈಗ ಸ್ಥಳೀಯ ಹರಡಿಕೆಯಿಂದಲೂ ಏರಿಕೆ ಆಗುತ್ತಿದೆ. ಇಂತಹ ಒಂದು ಸನ್ನಿವೇಶದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ರಸ್ತೆಗಳಲ್ಲಿ ಪ್ರತಿಭಟಿಸುತ್ತಿದ್ದಾರೆ. ಹಲವು ಸ್ಥಳಗಳಲ್ಲಿ ಪ್ರತಿಭಟನಾಕಾರರು ದೈಹಿಕ ಅಂತರದ ವಿಧಿಗಳನ್ನು ಮುರಿದಿದ್ದಾರೆ ಮತ್ತು ಪೋಲಿಸರೊಂದಿಗೆ ಘರ್ಷಣೆಗಿಳಿದಿದ್ದಾರೆ. ಇದರಿಂದ ಸೋಂಕುಗಳು ಏರಬಹುದೆಂಬ ಭೀತಿಯಿಂದ ಇದಕ್ಕೆ ಸಾರ್ವಜನಿಕರಿಂದ ವ್ಯಾಪಕ ಅಸಮ್ಮತಿ ವ್ಯಕ್ತವಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಈ ಮೂಲಕ ಕೊನೆಗೆ ನಿಜವಾದ ಅಪರಾಧಿಗಳು ಮತ್ತು ಅವರ ಹಿಂದಿರುವ ಶಕ್ತಿಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಒಂದು ನೆವವನ್ನು ಒದಗಿಸಿದಂತಾಗುತ್ತದೆ.

ಕಾಂಗ್ರೆಸ್ ಪಕ್ಷ ಈ ಛಿದ್ರಕಾರಿ ನಿಲುವು ತಳೆದು ತನ್ನ ರಾಜಕೀಯ ಮತ್ತು ಸೈದ್ಧಾಂತಿಕ ದಿವಾಳಿಯನ್ನು ಸಾಬೀತು ಪಡಿಸುತ್ತಿದೆ. ಅದು ಎಡಪಂಥದ ಮೇಲೆ ಗುರಿಯಿಡುವಲ್ಲಿ ಬಿಜೆಪಿಯೊಂದಿಗೆ ಕೈಮಿಲಾಯಿಸಲೂ ಹೇಸುತ್ತಿಲ್ಲ. ಇದು ಇತ್ತೀಚಿನ ಮಧ್ಯಪ್ರದೇಶ ಮತ್ತು ರಾಜಸ್ಥಾನದ ಘಟನೆಗಳು ತೋರಿಸುವಂತೆ ಇಡೀ ಪಕ್ಷ ಯಾವ ಪರಿಸ್ಥಿತಿಯಲ್ಲಿದೆ ಎಂಬುದರ ಮೇಲೊಂದು ಬೇಸರ ತರುವ ವ್ಯಾಖ್ಯಾನವೂ ಆಗಿದೆ. ಬಿಜೆಪಿ ಹಣಬಲ ಮತ್ತು ಇತರ ಅನೀತಿಯುತ ವಿಧಾನಗಳನ್ನು ಬಳಸಿ ಕಾಂಗ್ರೆಸ್ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸಲು ಸರ್ವ ಪ್ರಯತ್ನ ನಡೆಸುತ್ತಿದೆ. ಆದರೆ ಗುಂಪುಗಾರಿಕೆಗ್ರಸ್ತ ಮತ್ತು ಅಧಿಕಾರದಾಹೀ ಮುಖಂಡರಿಂದ ಪೀಡಿತವಾಗಿರುವ ಕಾಂಗ್ರೆಸ್ ಪಕ್ಷ ಬಿಜೆಪಿಯ ದುಷ್ಟ ತಂತ್ರಗಳಿಗೆ ಸೌಕರ್ಯಗಳನ್ನು ಒದಗಿಸುತ್ತಿದೆ.

ಕೇರಳದಲ್ಲಿ, ಈ ತೆರನ ರಾಜಕೀಯ ಮತ್ತು ಅಧಿಕಾರದ ಆಟಗಳು ಜನಗಳಿಂದ ತೀಕ್ಷ್ಣ ಧಿಕ್ಕಾರವನ್ನು ಎದುರಿಸಬೇಕಾಗುತ್ತದೆ.



ಸಂಘಪರಿವಾರದ ಕನೆಕ್ಷನ್

* ಒಬ್ಬ ಆರೋಪಿ ಸಂದೀಪ್ ನಾಯರ್‌ಗೆ ಬಿಜೆಪಿಯೊಡನೆ ಸಂಪರ್ಕವಿದೆ ಎನ್ನಲಾಗಿದೆ.
* ವಿಮಾನ ಅಥವ ಹಡಗಿನ ಮೂಲಕ ವಿದೇಶಗಳಿಂದ ಬರುವ ಸಾಮಗ್ರಿಗಳನ್ನು ಬಿಡಿಸಿಕೊಳ್ಳುವಲ್ಲಿ ಮಧ್ಯವರ್ತಿಗಳಾಗಿ ಕೆಲಸ ಮಾಡುವ ಕ್ಲಿಯರಿಂಗ್ ಏಜೆಂಟ್‌ಗಳಿದ್ದು, ಈ ಪ್ರಕರಣದಲ್ಲಿ ಮಧ್ಯಪ್ರವೇಶಿಸಿದ ಅಂತಹ ಒಬ್ಬ ಕ್ಲಿಯರಿಂಗ್ ಏಜೆಂಟ್ ಸಂಘ ಪರಿವಾರದ ಭಾಗವಾಗಿರುವವನು, ಆತ ಕಳ್ಳಸಾಗಾಣಿಕೆಯ ಚಿನ್ನವಿದ್ದ ರಾಜತಾಂತ್ರಿಕ ಬ್ಯಾಗೇಜನ್ನು ಬಿಡುಗಡೆ ಮಾಡಬೇಕು, ಇಲ್ಲವಾದರೆ ಕೆಲಸ ಕಳಕೊಳ್ಳಬೇಕಾದೀತು ಎಂದು ಕಸ್ಟಮ್ಸ್ ಆಧಿಕಾರಿಗಳಿಗೆ ಬೆದರಿಕೆ ಹಾಕಿದನೆಂದು ವರದಿಯಾಗಿದೆ. ಅದನ್ನು ಬಿಡುಗಡೆ ಮಾಡುವುದಿಲ್ಲೆಂದು ಗೊತ್ತಾದಾಗ ಅದನ್ನು ಹಿಂದಕ್ಕೆ ಕಳಿಸುವಂತೆ ಬಲವಂತ ಮಾಡಲೂ ಪ್ರಯತ್ನಿಸಿದ ಎನ್ನಲಾಗಿದೆ.
* ವಾಸ್ತವವಾಗಿ ರಾಜತಾಂತ್ರಿಕ ಬ್ಯಾಗೇಜುಗಳಿಗೆ ಕ್ಲಿಯರೆನ್ಸ್ ಬೇಕಾಗಿಲ್ಲ. ಆದರೂ ಕ್ಲಿಯರಿಂಗ್ ಏಜೆಂಟ್ ಮಧ್ಯಪ್ರವೇಶಿಸಿದ. ನಂತರ, ವಿದೇಶ ವ್ಯವಹಾರಗಳ ಇಲಾಖೆಯಲ್ಲಿ ರಾಜ್ಯಮಂತ್ರಿಯಾಗಿರುವ ವಿ.ಮುರಳೀಧರನ್ ಚಿನ್ನವನ್ನು ರಾಜತಾಂತ್ರಿಕ ಬ್ಯಾಗೇಜಿನಲ್ಲಿ ಸಾಗಿಸಿರಲಿಲ್ಲೆಂದು ಹೇಳಿಕೆ ನೀಡಿದರು. ಆದರೆ ಎನ್‌ಐಎ ಕಳ್ಳಮಾಲನ್ನು ರಾಜತಾಂತ್ರಿಕ ಬ್ಯಾಗ್‌ನಲ್ಲಿ ತರಲಾಗಿತ್ತು ಎಂದು ಸ್ಪಷ್ಟಪಡಿಸಿದೆ. ಅಂದರೆ ಮಂತ್ರಿಗಳ ಹೇಳಿಕೆ ಈ ಚಿನ್ನದ ಕಳ್ಳಸಾಗಾಣಿಕೆಯಲ್ಲಿ ತೊಡಗಿದವರು ಯಾರೆಂಬುದನ್ನು ಮುಚ್ಚಿ ಹಾಕುವ ಪ್ರಯತ್ನವೇ ಎಂಬ ಪ್ರಶ್ನೆ ಅಪ್ರಸ್ತುತವೇನಲ್ಲ. ಈ ಪ್ರಶ್ನೆಯನ್ನು ಮತ್ತು ಈ ಸ್ಪಷ್ಟೀಕರಣದ ನಂತರ ವಿದೇಶ ವ್ಯವಹಾರಗಳ ಇಲಾಖೆಯಲ್ಲಿ ತಾನು ಮಂತ್ರಿಯಾಗಿ ಮುಂದುವರೆಯುವುದು ಸೂಕ್ತವೇ ಎಂದು ಈ ಮಂತ್ರಿಗಳೇ ಕೇಳಿಕೊಳ್ಳಬೇಕಾಗಿದೆ.
* ಎನ್‌ಐಎ ತನಿಖೆ ನಡೆಯುತ್ತಿರುವಾಗಲೇ ಯುಎಇ ಕಾನ್ಸುಲೇಟ್ ಕಚೇರಿಯ ಅಟಾಚಿ ದೇಶ ಬಿಟ್ಟು ಯುಎಇಗೆ ಮರಳಿದ್ದಾರೆ. ಇದಕ್ಕೆ ವಿದೇಶಾಂಗ ವ್ಯವಹಾರಗಳ ಇಲಾಖೆ ಹೇಗೆ ಅವಕಾಶ ಕೊಟ್ಟಿತು ಎಮದು ಕೇಳಲಾಗುತ್ತಿದೆ. ಈ ದಪಿಸದೊಮದಿಗೆ ಭಾರತದ ಸಂಬಂಧಗಳು ಉತ್ತಮವಾಗಿವೆ ಎಂಬುದು ಗಮನಾರ್ಹ.
* ಈ ಪ್ರಕರಣದ ಪ್ರಮುಖ ಆರೋಪಿಯ ಜಾಮೀನಿಗೆ ಪ್ರಯತ್ನಿಸಿದ ವಕೀಲರು 'ಹಿಂದು ಇಕನಾಮಿಕ್ ಫೋರಂ'ಗೆ ಸೇರಿದವರು ಎಂದು ತಿಳಿದು ಬಂದಿದೆ. ಇದು ಸಂಘ ಪರಿವಾರಕ್ಕೆ ಸೇರಿರುವ ಸಂಘಟನೆ. ಚಿನ್ನದ ಕಳ್ಳಸಾಗಾಣಿಕೆ, ಅದೂ ಎನ್‌ಐಎ ಈಗ ಊಹಿಸುತ್ತಿರುವಂತೆ ಭಯೋತ್ಪಾದಕರಿಗೆ ನಿಧಿ ಕೊಡಲು ಎಂದಾದರೆ, ಅದು ಒಂದು ದೇಶದ್ರೋಹೀ ಅಪರಾಧ. ಅಂತಹ ಅಪರಾಧ ಮಾಡಿರುವವರನ್ನು ದೇಶಭಕ್ತಿಯ ಉಪದೇಶ ಕೊಡುವ ಸಂಘಪರಿವಾರಕ್ಕೆ ಸೇರಿದವರು ಪ್ರತಿನಿಧಿಸುತ್ತಿದ್ದಾರೆ ಎಂಬುದು ಗಮನಾರ್ಹ.

ದೇಶದ ಆರ್ಥಿಕತೆಯ ಜೀವನಾಡಿ, ಕೋಟ್ಯಾಂತರ ಜನರ ಬದುಕಿನ ಬಂಡಿ

ಭಾರತೀಯ ರೈಲ್ವೆಯ ಖಾಸಗಿಕರಣ ರಾಜಕೀಯ

ಕೆ. ಮಹಾಂತೇಶ್
ಸೈಯದ್ ಮುಜೀಬ್

ಕಳೆದ ನಾಲ್ಕು ತಿಂಗಳಿಂದ ನಾವೆಲ್ಲ ಕೊರೋನಾ ಎನ್ನುವ ಮಹಾಮಾರಿಯ ಭೀತಿಯಲ್ಲಿ ಅತ್ಯಂತ ಕಷ್ಟದ ದಿನಗಳನ್ನು ದೂಡುತ್ತಿದ್ದೇವೆ. ಕೇಂದ್ರ ಸರಕಾರ ಆರಂಭದಲ್ಲಿ ಕೊವೀಡ್ ತಡೆಯಲು ಯಾವುದೇ ಮುಂಜಾಗ್ರತೆ ವಹಿಸಲಿಲ್ಲ. ನಮ್ಮ ದೇಶದ ಪ್ರಧಾನಿಗಳು ಕೇವಲ ಭಾಷಣ ಮಾಡುತ್ತಾ ಭಾರತೀಯರಿಗೆ ಚಪ್ಪಾಳೆ ತಟ್ಟಿಸಿ, ದೀಪ ದೀಪ ಬೆಳಗಿಸಿ ಕರೋನಾ ಓಡಿಸುವ ಪ್ರಯತ್ನ ನಡೆಸಿ ಜಗತ್ತಿನ ಮುಂದೆ ತಮ್ಮ ಮೌಢ್ಯ ಪ್ರದರ್ಶಿಸಿದರು. ಇದೀಗ ದೇಶದ ಕೋಟ್ಯಾಂತರ ಜನರು ಕೊರೋನಾ ಸೋಂಕಿಗೆ ಬಲಿಯಾಗಿದ್ದಾರೆ ಅಮೇರಿಕಾ, ಬ್ರೆಜಿಲ್ ಹೊರತುಪಡಿಸಿದರೆ ಭಾರತವೂ ಅತಿ ಹೆಚ್ಚು ಕೊರೋನಾ ಸೊಂಕೀತರನ್ನು ಹೊಂದಿರುವ ಜಗತ್ತಿನ ಅತಿ ದೊಡ್ಡ ಮೂರನೇ ದೇಶವಾಗಿದೆ ಎನ್ನುವುದು ನಮ್ಮೆಲ್ಲರನ್ನು ಆತಂಕಕೀಡು ಮಾಡಿದೆ.



ದೇಶವು ಇಂತಹ ಸಂಕಟ ಮತ್ತು ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ ಮತ್ತು ಕೋಟ್ಯಾಂತರ ಭಾರತೀಯತರು ಮನೆಯಿಂದ ಹೊರಬರದೇ ತಮ್ಮ ಜೀವಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವಾಗ ಭಾರತೀಯ ಜನತಾ ಪಕ್ಷದ ನೇತೃತ್ವದ ಕೇಂದ್ರ ಸರಕಾರ ನರೇಂದ್ರ ಮೋದಿ ಮುಂದಾಳತ್ವದಲ್ಲಿ ಇದೀಗ ದೇಶದ ಸಾರ್ವಜನಿಕ ಸಂಪತ್ತುಗಳನ್ನು ಸದ್ದಿಲ್ಲದೆ ಖಾಸಗಿ ಕಂಪನಿಗಳಿಗೆ ಹಾಗೂ ಹಾಗೂ ವಿದೇಶಿ ಕಾರ್ಪೋರೇಟ್ ಗಳಿಗೆ ಮಾರಾಟ ಮಾಡುವ ಕೆಲಸಕ್ಕೆ ಕೈಹಾಕಿದೆ. ಈಗಾಗಲೇ ನಮ್ಮ ದೇಶದ ಕಲ್ಲಿದ್ದಲು ಗಣಿಗಳನ್ನು, ವಿದ್ಯುತ್‌ಚ್ಛಕ್ತಿ ನಿಗಮಗಳನ್ನು, ಎಪಿಎಂಸಿ ಮಾರುಕಟ್ಟೆಗಳನ್ನು ಖಾಸಗೀಕರಣ ಮಾಡಿರುವ ಕೇಂದ್ರ ಸರಕಾರ ಇದೀಗ ದೇಶದ ಅತಿ ದೊಡ್ಡ ಸಾರ್ವಜನಿಕ ಉದ್ಯಮವಾದ ಮತ್ತು ಜಗತ್ತಿನಲ್ಲೇ ಅತಿದೊಡ್ಡ ಸಂಪರ್ಕ ಜಾಲ ಹೊಂದಿರುವ ಭಾರತೀಯ ರೈಲ್ವೆಯನ್ನು ತುಂಡರಸಿ ಖಾಸಗೀಕರಣ ಮಾಡಲು ತೀರ್ಮಾನಿಸಿದೆ ಅದರ ಭಾಗವಾಗಿ ದೇಶದ ಪ್ರತಿಷ್ಠಿತ 109 ರೈಲ್ವೇ ನಿಲ್ದಾಣಗಳನ್ನು ಖಾಸಗಿಯವರ ಕೈಗೆ ಒಪ್ಪಿಸಿ ಅವುಗಳ ಮೂಲಕ 151 ಖಾಸಗಿ ರೈಲುಗಳನ್ನು ಓಡಿಸಲು ಮುಂದಾಗಿದೆ. **ರೈಲ್ವೆ ಎಂಬುದು ಭಾರತೀಯರ ಪಾಲಿಗೆ ಮತ್ತು ಭಾರತೀಯ ಆರ್ಥಿಕತೆಯ ದೃಷ್ಟಿಯಿಂದ 'ಜೀವನಾಡಿ' ಅದನ್ನು ಖಾಸಗಿಯವರಿಗೆ ಒಪ್ಪಿಸುವುದೆಂದರೆ ಕೋಟ್ಯಾಂತರ ಜನರ ನರ ನಾಡಿಯೇ ಸ್ಥಬ್ದಗೊಂಡಂತೆ ಜೊತೆಗೆ ಭಾರತದ ಆರ್ಥಿಕತೆಯೇ ನಾಶವಾದಂತೆ.** ಹೀಗಾಗಿ ಕೊಟ್ಯಾಂತರ ಜನ ಸಾಮಾನ್ಯರ ಬದುಕಿನ ಮೇಲೆ ದುಷ್ಪಾರಿಣಾಮ ಬೀರುವ ರೈಲ್ವೇ ಖಾಸಗಿಕರಣವನ್ನು ಪ್ರಬಲವಾಗಿ ವಿರೋಧಿಸಿಲು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ನಿರ್ಧರಿಸಿದೆ ಮಾತ್ರವಲ್ಲ ರೈಲ್ವೆ ಖಾಸಗಿಕರಣ ನೀತಿಗಳಿಂದ ಬಾಧಿತರಾಗುವ ರೈತರು, ವಲಸೆ ಕಾರ್ಮಿಕರು ಜನಸಾಮಾನ್ಯರು, ವಿಕಲಚೇತನರು, ಸಣ್ಣ ವ್ಯಾಪಸ್ಥರು ಮತ್ತು ರೈಲ್ವೆಯ ಇಲಾಖೆಯ ನೌಕರರೊಂದಿಗೆ ಸೇರಿ ಇದೇ ಜುಲೈ 16 ಮತ್ತು 17 ರಂದು ದೇಶವ್ಯಾಪಿ ಯಶಸ್ವಿ ಪ್ರತಿಭಟನೆಗಳನ್ನು ಸಿಐಟಿಯು ಸಮಿತಿಗಳು ನಡೆಸಿವೆ. ದೇಶದ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿ ಹಾಗೂ ಗುಜರಾತ್ ನಿಂದ ಹಿಡಿದು ಪಶ್ಚಿಮದ ಬಂಗಾಳ ಮಾತ್ರವಲ್ಲ ಈಶಾನ್ಯದ ತ್ರಿಪುರದವರೆಗೂ ವಿಸ್ತರಿಸಿರುವ ಸಾವಿರಾರು ರೈಲು ನಿಲ್ದಾಣಗಳು ಮತ್ತು ಹಲವು ರಾಜ್ಯ ನಗರಗಳಲ್ಲಿ ಲಾಕ್ ಡೌನ್ ಇದ್ದಾಗ್ಯೂ ಮನೆಗಳು ಮತ್ತು ಕೆಲಸದ ಸ್ಥಳಗಳಲ್ಲಿ ಲಕ್ಷಾಂತರ ದುಡಿಯುವ ಜನರು ರೈಲ್ವೆ ಖಾಸಗಿಕರಣಕ್ಕೆ ತಮ್ಮ ಪ್ರಬಲ ಪ್ರತಿರೋಧ ವ್ಯಕ್ತಪಡಿಸಿದ್ದಾರೆ.



ರೈಲ್ವೆ ಖಾಸಗಿಕರಣ ಮತು ಅದರ ಪರಿಣಾಮಗಳು :

1. ರೈಲ್ವೆ ಖಾಸಗೀಕರಣಗೊಂಡರೆ ಎಲ್ಲಾ ರೈಲ್ವೆ ಪ್ರಯಾಣಿಕರಿಗೆ ಇದುವರೆಗೂ ಸಿಗುತ್ತಿದ್ದ ಶೇ 43 ರಷ್ಟು ಸಬ್ಸಿಡಿ ರದ್ದಾಗಲಿದೆ. ಈಗ ನಾವು ನೂರು ರೂ ಟೀಕೇಟ್ ಖರೀದಿಸಿದರೆ ಶೇ 57 ರಷ್ಟು ಮಾತ್ರ ಪಾವತಿಸುತ್ತಿದ್ದೇವೆ ಉಳಿದ ಶೆ 43 ರಷ್ಟು ರೈಲ್ವೆ ಇಲಾಖೆಯಿಂದ ರಿಯಾಯಿತಿ ದೊರೆಯುತ್ತದೆ.

2. ಖಾಸಗೀಕರಣ ಪರಿಣಾಮವಾಗಿ ನಮ್ಮ ರೈಲ್ವೆ ಕೋಚ್‌ಗಳು, ಗಾಲಿಗಳು ಮತ್ತು ರೈಲ್ವೆ ಕಾರ್ಯಗಾರ ಇತ್ಯಾಧಿಗಳಿಗೆ ಸರಕಾರ ಉತ್ಪಾದನಾ ಆರ್ಡರ್‌ಗಳನ್ನು ನಿಲ್ಲಿಸುತ್ತದೆ ಆವೆಲ್ಲ ದೇಶಿಯ ಖಾಸಗೀ ಬಂಡವಾಳಿಗರು ಮತ್ತು ಅಮೇರಿಕಾದ ಜನರಲ್ ಎಲೆಕ್ಟ್ರೀಕಲ್ ನಂತಹ ಕಂಪನಿಗಳ ಪಾಲಾಗುವುದರಿಂದ ಈಗಿರುವ ರೈಲ್ವೆ ಉತ್ಪಾದನಾ ಘಟಕಗಳು ಮುಚ್ಚಿ ಅಲ್ಲಿರುವ ಸಾವಿರಾರು ನೌಕರರು ಕೆಲಸ ಕಳೆದುಕೊಳ್ಳಲಿದ್ದಾರೆ. ಖಾಯಂ ನೌಕರರ ಸ್ಥಾನಗಳಲ್ಲಿ ಅವಧಿ ಕೆಲಸಗಾರರು, ಟ್ರೈನೀಸ್, ಹೊರಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಂಡು ಖಾಸಗೀಯವರು ವಿಪರೀತ ಲಾಭ ಮಾಡಿಕೊಳ್ಳಲಿದ್ದಾರೆ. ರೈಲ್ವೆಯಲ್ಲಿ ಮಹಿಳೆಯರಿಗೆ, ದಲಿತರಿಗೆ, ವಿಕಲ ಚೇತನರು ಕ್ರೀಡಾಪಟುಗಳಿಗೆ ನೇಮಕಾತಿಗಳಲ್ಲಿ ಸಿಗುತ್ತಿದ್ದ ಎಲ್ಲಾ

ಪುಟ 14 ಕ್ಕೆ

ಭಾರತೀಯ ರೈಲ್ವೆ ಇತಿಹಾಸ ಒಂದು ಅವಲೋಕನ

ಭಾರತೀಯ ರೈಲ್ವೆಗೆ 175 ವರ್ಷಗಳ ದೀರ್ಘ ಇತಿಹಾಸವಿದೆ. ಲಾರ್ಡ್ ಡಾಲ್‌ಹೌಸಿಯನ್ನು ಭಾರತ ರೈಲ್ವೆಯ ಪಿತಾಮಹನೆಂದು ಪರಿಗಣಿಸುತ್ತಾರೆ. ಗಾಂಧೀಜಿಯ ಭಾರತ ದರ್ಶನಕ್ಕೆ ರೈಲ್ವೆ ನಂಟು ಇರುವುದು ನಮಗೆಲ್ಲ ಗೊತ್ತಿರುವ ವಿಷಯವಾಗಿದೆ. ಪ್ರಥಮ ಪ್ಯಾಸೆಂಜರ್ ರೈಲು ಮೇ 8, 1948ರಲ್ಲಿ ಮುಂಬೈನಿಂದ ಥಾಣೆಯವರೆಗೂ ಓಡಿಸಲಾಗಿತ್ತು. ಸ್ಟೀಮ್ ಇಂಜನ್ ಹೊಂದಿದ್ದಂತಹ ಈ ರೈಲು 14 ಭೋಗಿಗಳನ್ನು ಹೊಂದಿದ್ದು 39 ಕಿಲೋ ಮೀಟರ್ ಪ್ರಯಾಣವನ್ನು ನಡೆಸಿತ್ತು. ಸ್ವಲ್ಪ ಇತಿಹಾಸವನ್ನು ಕೆದುಕುತ್ತಾ ಹೋದಲ್ಲಿ ರಸ್ತೆ ಕಾಮಗಾರಿಗೆ ಬೇಕಾಗಿ ಗ್ರಾನೈಟ್ ಸರಕು ಸಾಗಾಣಿಕೆಗಾಗಿ ಪ್ರಥಮ ಟ್ರೈನ್ ಮದ್ರಾಸ್‌ನಲ್ಲಿ 19 832ರಲ್ಲಿ ರೆಡ್‌ಹಿಲ್ಸ್‌ನಿಂದ ಆರಂಭಗೊಂಡು ಚಿತ್ತಾದ್ರಿ ಪೇಟೆಗೆ ಹೋಗಿತ್ತು. ಹಾಗಾಗಿ ಈ ರೈಲ್ವೆಗೆ 198 ವರ್ಷಗಳ ದೀರ್ಘ ಇತಿಹಾಸವಿದೆ.

ಭಾರತೀಯ ರೈಲ್ವೆಯು ಜಗತ್ತಿನ ನಾಲ್ಕನೇ ಅತಿದೊಡ್ಡ ರೈಲ್ವೆ ವ್ಯವಸ್ಥೆಯಾಗಿದ್ದು 2019ರ ಸಂದರ್ಭಕ್ಕೆ 12.3 ಲಕ್ಷ ಜನ ಉದ್ಯೋಗಿಗಳನ್ನು ಹೊಂದಿದೆ. 18 ವಲಯಗಳಲ್ಲಿ ಹಂಚಿಹೋಗಿರುವ ರೈಲ್ವೆಗೆ ಒಟ್ಟು 68155 ಕಿಲೋ ಮೀಟರ್‌ನಷ್ಟು ಹಳಿಗಳಿದ್ದು 95981 ಕಿಲೋ ಮೀಟರ್‌ನಷ್ಟು ರನ್ನಿಂಗ್ ಟ್ರಾಕ್ ಇರುತ್ತದೆ. ಶೇಕಡ 50.09 ರಷ್ಟು ರೈಲ್ವೆ ವಿದ್ಯುತ್ ಆಧಾರಿತವಾಗಿ ಚಾಲನೆಗೊಳ್ಳುತ್ತಿದ್ದು 2023ಕ್ಕೆ ಅದನ್ನು ಶೇ.100ರಷ್ಟು ವಿದ್ಯುತ್ ಚಾಲಿತ ರೈಲುಗಳನ್ನಾಗಿಸುವ ಪ್ರಯತ್ನದಲ್ಲಿ ಇಲಾಖೆ ಕೆಲಸ ನಿರ್ವಹಿಸುತ್ತಿದೆ ಎಂದು ಹೇಳಲಾಗುತ್ತಿದೆ. ಸರಿಸುಮಾರು 92 ವರ್ಷಗಳ ಕಾಲ ಬಜೆಟ್‌ನಲ್ಲಿ ನೇರ ಪಾಲು ಮತ್ತು ಪ್ರತ್ಯೇಕ ಬಜೆಟ್ ಪಡೆಯುತ್ತಿದ್ದ ರೈಲ್ವೆ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ 2016ರಿಂದ ಪ್ರತ್ಯೇಕ ಬಜೆಟ್ ಇಲ್ಲವಾಗಿದೆ.

2018–19ನೇ ಸಾಲಿನ ಹೊತ್ತಿಗೆ ಸರಿಸುಮಾರು 1 ಲಕ್ಷದ 97 ಸಾವಿರದ 214ರಷ್ಟು ವಹಿವಾಟನ್ನು ನಡೆಸುವ ಮೂಲಕ 6014 ಕೋಟಿ ರೂಪಾಯಿಗಳಷ್ಟು ನಿವ್ವಳ ಲಾಭ ಗಳಿಸಿದೆ. ಇದನ್ನು ಲೆಕ್ಕಹಾಕಿದಲ್ಲಿ ಪ್ರತಿದಿನ 16 ಕೋಟಿ ರೂಪಾಯಿಗಳಷ್ಟು ಲಾಭ ಮಾಡುವ ಭಾರತೀಯ ರೈಲ್ವೆ ಹಲವಾರು ಜನುಪಯೋಗಿ ಯೋಜನೆಗಳನ್ನು ಹೊಂದಿದೆ. ಅಂಗವಿಕಲರಿಗೆ, ವಯೋವೃದ್ಧರಿಗೆ, ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ, ಸೈನಿಕರಿಗೆ ಸಮಾಜದಲ್ಲಿ ವಿಶಿಷ್ಟ ಸಾಧನೆಗೈದವರಿಗೆ, ಅಷ್ಟೇ ಯಾಕೆ ಸಂಸತ್ ಸದಸ್ಯರಿಗೆ ಹಾಲಿ ಮಾಜಿ ಎನ್ನದೆ ವಿನಾಯಿತಿ ನೀಡುತ್ತಿದೆ. ಸುಮಾರು 8500ರಷ್ಟು ರೈಲ್ವೆ ನಿಲ್ದಾಣಗಳನ್ನು ಹೊಂದಿರುವ ಭಾರತೀಯ ರೈಲ್ವೆ ಜಗತ್ತಿನ ನಾಲ್ಕನೇ ಅತಿದೊಡ್ಡ ಉದ್ಯೋಗದಾತನಾಗಿದೆ. ಭಾರತದಲ್ಲಿ ಪ್ರತಿನಿತ್ಯ ಸುಮಾರು 13 ಸಾವಿರದಷ್ಟು ಪ್ಯಾಸೆಂಜರ್ ಟ್ರೈನ್‌ಗಳು ಒಳಗೊಂಡಂತೆ ಎಕ್ಸ್‌ಪ್ರೆಸ್ ಟ್ರೈನ್‌ಗಳಲ್ಲಿ ಎರಡು ಕೋಟಿ ಜನ ಪ್ರಯಾಣ ಬೆಳೆಸುತ್ತಾರೆ ಎಂಬ ಅಂದಾಜಿದೆ. ಒಟ್ಟಾರೆ ಭಾರತೀಯ ರೈಲ್ವೆಯ ಆಸ್ತಿಯ ಮೊತ್ತ ಸುಮಾರು 2 ಟ್ರಿಲಿಯನ್ ಕೋಟಿ ಎಂದು ಅಂದಾಜಿಸಲಾಗಿದೆ.

ರೈಲ್ವೆ ನೇರವಾಗಿ ಭಾರತ ಸರ್ಕಾರದ ಅಡಿಯಲ್ಲಿದ್ದು ಹತ್ತಾರು ಉಪ ಸಂಸ್ಥೆಗಳನ್ನು ಹುಟ್ಟುಹಾಕುವ ಮೂಲಕ ದೇಶದ ಬಡ ಮತ್ತು ಮಧ್ಯಮ ಜನತೆಯ ಸಾರಿಗೆ ಸಾಧನವಾಗಿ ಬಳಕೆಯಾಗುತ್ತಿದೆ. ಹಣಕಾಸು ಹಾಗೂ ನಿರ್ಮಾಣ ಮತ್ತು ಯೋಜನೆಗಳ ಜಾರಿಗಾಗಿ:

ಭಾರತೀಯ ರೈಲ್ವೆ ಹಣಕಾಸು ಕಾರ್ಪೋರೇಷನ್ (ಐಆರ್‌ಎಫ್‌ಸಿ)

ಭಾರತೀಯ ರೈಲ್ವೆ ನಿರ್ಮಾಣ ಕಾರ್ಪೋರೇಷನ್ (ಐಆರ್‌ಸಿಓಎನ್)

ಮುಂಬೈ ರೈಲ್ವೆ ವಿಕಾಸ್ ಕಾರ್ಪೋರೇಷನ್ (ಎಂಆರ್‌ವಿಸಿ)

ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ನಿಗಮಗಳನ್ನು ಹೊಂದಿದೆ.

ಭೂಮಿ ಮತ್ತು ನಿಲ್ದಾಣಗಳ ಅಭಿವೃದ್ಧಿಗಾಗಿ:

ರೈಲ್ ಲ್ಯಾಂಡ್ ಡೆವಲಪ್‌ಮೆಂಟ್ ಅಥಾರಿಟಿ (ಆರ್‌ಎಲ್‌ಡಿಎ)

ಇಂಡಿಯನ್ ರೈಲ್ವೆ ಸ್ಟೇಷನ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಐಆರ್‌ಎಸ್‌ಡಿಸಿ)

ರೈಲ್ವೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಪಟ್ಟ ಹಾಗೆ ಡೆಡಿಕೇಟೆಡ್ ಫ್ರೈಟ್ ಕಾರಿಡಾರ್ ಕಾರ್ಪೋರೇಷನ್ ಇಂಡಿಯಾ ಲಿಮಿಟೆಡ್‌ನ್ನು ಹೊಂದಿದೆ.

ರೈಲ್ವೆ ನಿರ್ವಹಣೆಗಾಗಿ:

ಕೊಂಕಣ ರೈಲ್ವೆ ಕಾರ್ಪೋರೇಷನ್ (ಕೆಆರ್‌ಸಿಎಲ್)

ಕಂಟೈನರ್ ಕಾರ್ಪೋರೇಷನ್ ಅಫ್ ಇಂಡಿಯಾ (ಸಿಓಎನ್‌ಸಿಓಆರ್)

ಐಟಿ ಮತ್ತು ಸಂವಹನೆಗೆ:

ಸೆಂಟರ್ ಫಾರ್ ರೈಲ್ವೆ ಇನ್‌ಫರ್ಮೇಷನ್ ಸಿಸ್ಟಮ್ (ಸಿಆರ್‌ಐಎಸ್)

ರೈಲ್ ಟೆಲಿ ಕಾರ್ಪೋರೇಷನ್ ಆಫ್ ಇಂಡಿಯಾ (ಆರ್‌ಸಿಐಎಲ್) ಗಳನ್ನು ಹೊಂದಿದೆ. ಹಾಗೆ

ಪ್ರವಾಸೋದ್ಯಮ ಮತ್ತು ಊಟೋಪಾಚಾರಕ್ಕೆ ಸಂಬಂಧಿಸಿದಂತೆ:


ಇಂಡಿಯನ್ ರೈಲ್ವೆ ಕೇಟರಿಂಗ್ ಅಂಡ್ ಟೂರಿಸಂ ಕಾರ್ಪೋರೇಷನ್ (ಐಆರ್‌ಸಿಟಿಸಿ) ಹೊಂದಿದೆ.

ಇವುಗಳೆಲ್ಲದ ಸಹಾಯದೊಂದಿಗೆ ಭಾರತೀಯ ರೈಲ್ವೆ ನಿರಂತರವಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದೆ. ಭಾರತೀಯ ರೈಲ್ವೆಗೆ ಬೇಕಾಗಿರುವಂತಹ ಭೋಗಿಗಳು, ವೀಲ್ ಮತ್ತು ಹಳಿಗಳ ಉತ್ಪಾದನೆಗೆ ಸಾರ್ವಜನಿಕ ವಲಯಗಳಲ್ಲಿ ಹಲವಾರು ಕಂಪನಿಗಳನ್ನು ಹೊಂದಿರುತ್ತದೆ.

ಭಾರತೀಯ ರೈಲ್ವೆ ದೇಶದ ಒಳಗಷ್ಟೇ ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಸಹ ರೈಲ್ವೆ ಸಂಪರ್ಕಗಳನ್ನು ಹೊಂದಿದೆ. ನೆರೆ ದೇಶಗಳಾದ ಪಾಕಿಸ್ತಾನ, ಭೂತಾನ್, ಬಾಂಗ್ಲಾದೇಶಗಳಲ್ಲಿ ಸಹ ಭಾರತೀಯ ರೈಲ್ವೆಯ ಟ್ರೈನುಗಳು ಸಂಚರಿಸುತ್ತವೆ.

ವಿವಿಧ ಸ್ವರೂಪದ ಟ್ರೈನ್‌ಗಳನ್ನು ಹೊಂದಿರುವ ಭಾರತೀಯ ರೈಲ್ವೆ ರಾಜಧಾನಿ ಎಕ್ಸ್‌ಪ್ರೆಸ್, ಶತಾಬ್ದಿ ಎಕ್ಸ್‌ಪ್ರೆಸ್, ಗರೀಭ್ ರಥ ಎಕ್ಸ್‌ಪ್ರೆಸ್, ಡಬಲ್ ಡೆಕ್ಕರ್ ಎಕ್ಸ್‌ಪ್ರೆಸ್, ತೇಜಸ್ ಎಕ್ಸ್‌ಪ್ರೆಸ್, ಹಮ್ ಸಫರ್ ಎಕ್ಸ್‌ಪ್ರೆಸ್, ದುರಂತೋ ಎಕ್ಸ್‌ಪ್ರೆಸ್, ಯುವ ಎಕ್ಸ್‌ಪ್ರೆಸ್ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ಗಳ ಹೆಸರಲ್ಲಿ ಹವಾನಿಯಂತ್ರಿತ ಟ್ರೈನ್‌ಗಳನ್ನು ಓಡಿಸುತ್ತದೆ.

ಖಾಸಗಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಕೇಂದ್ರ ಸರಕಾರ ವಿದ್ಯುತ್ ಆಯಿದೆ 2003ಕ್ಕೆ, ಇಷ್ಟು ತರಾತುರಿಯಲ್ಲಿ ವಿದ್ಯುತ್ ಕ್ಷೇತ್ರವನ್ನು ಇನ್ನಷ್ಟು ತೀವ್ರ ಬಿಕ್ಕಟ್ಟಿಗೆ ನೂಕುವ, ಈ ತಿದ್ದುಪಡಿಗಳನ್ನು ತರುತ್ತಿದೆ. ಆದರೆ ಇಷ್ಟರ ವರೆಗೆ ಖಾಸಗಿ ರಂಗದ ವಿದ್ಯುತ್ ಉತ್ಪಾದಕರ ಸಾಧನೆಗಳೇನು? 1.37ಲಕ್ಷ ಕೋಟಿ ರೂ. ಬ್ಯಾಂಕಿನ ಸಾಲಪಾವತಿ ಬಾಕಿ ಮಾತ್ರ ಅವರ ಸಾಧನೆ. ಈ ಸಾಲಬಾಕಿಯ ಹೊರೆಯನ್ನು ರಾಜ್ಯ ಸರಕಾರ, ಎಸ್ಕಾಂ ಗಳು ಮತ್ತು ಬಡ ಬಳಕೆದಾರರಿಗೆ ವರ್ಗಾಯಿಸುವುದೇ ಈ ತಿದ್ದುಪಡಿಗಳ ಹಿಂದಿರುವ ಪ್ರಮುಖ ಉದ್ದೇಶ. ನವೀಕರಣಗೊಳಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನಾ ಕ್ಷೇತ್ರದ ಬೆಳವಣಿಗೆಯಾಗಲಿ, ಹವಾಮಾನ ಬದಲಾವಣೆಗೆ ಅಗತ್ಯ ಕ್ರಮಗಳಾಗಲಿ ಅವುಗಳ ಉದ್ದೇಶ ಅಲ್ಲವೇ ಅಲ್ಲ. ಮೋದಿ ಸರಕಾರಕ್ಕೆ ಆತ್ಮೀಯರಾದ ಉದ್ಯಮಿ/ ಕಾರ್ಪೊರೇಟುಗಳ ಸಾಲಬಾಕಿ ಅಳಿಸಿ ಅವರು ಲಾಭ ಮಾಡುವಂತೆ ಮಾಡುವುದಷ್ಟೇ ಈ ತಿದ್ದುಪಡಿಗಳ ಉದ್ದೇಶ.



ವಿದ್ಯುತ್ ಕಾಯ್ದೆ ತಿದ್ದುಪಡಿ 2020 ಏಕೆ ಬೇಡ?

ಎಸ್. ವರಲಕ್ಷ್ಮಿ

ಭಾರತ ಸರ್ಕಾರದ ವಿದ್ಯುತ್ ಶಕ್ತಿ ಇಲಾಖೆಯು 2003ರ ವಿದ್ಯುತ್ ಶಕ್ತಿ ಕಾಯ್ದೆಗೆ 17 ಏಪ್ರಿಲ್ 2020 ರಂದು ತಿದ್ದುಪಡಿಗಳನ್ನು ತಂದಿದೆ. ಆಗ ದೇಶದಲ್ಲಿ ಕೋವಿಡ್ 19 ಮಹಾಮಾರಿಯ ಪ್ರಯುಕ್ತ ಲಾಕ್‌ಡೌನ್ ಇತ್ತು. ವಿಪತ್ತು ನಿರ್ವಹಣಾ ಕಾಯ್ದೆ 2005ರ ಅಡಿಯಲ್ಲಿ ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸಿ, ತನ್ನ ಇಲಾಖೆಯ ಮುಖಾಂತರ ಇದನ್ನು ಜಾರಿಗೊಳಿಸಿದೆ. ಕರಡು ಮಸೂದೆಯ ಬಗ್ಗೆ ಚರ್ಚೆಗ, ಜನರಿಗೆ ಅಭಿಪ್ರಾಯ ನೀಡಲು ಕೇವಲ 21 ದಿನಗಳ ಸಮಯ ಕೊಟ್ಟಿದೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದಕ್ಕೆ ಬೇಕಾದಂತಹ ಚರ್ಚೆಗಳನ್ನು ವ್ಯಾಪಕವಾಗಿ ನಡೆಸಲು, ಅಭಿಪ್ರಾಯಗಳನ್ನು ಕೊಡಲು ಸಾಧ್ಯವಾಗಲಿಲ್ಲ.

ಭಾರತದಲ್ಲಿ ವಿದ್ಯುತ್ ಶಕ್ತಿ

ವಿದ್ಯುತ್ ಶಕ್ತಿ ಕಾಯ್ದೆಗೆ ತಂದ ಈ ತಿದ್ದುಪಡಿಗಳನ್ನು ಚರ್ಚಿಸುವ ಮೊದಲು, ವಿದ್ಯುತ್ ಶಕ್ತಿಯು ಬೆಳೆದು ಬಂದ ಹಾದಿಯ ಕುರಿತು ಕೆಲವು ವಿಚಾರಗಳನ್ನು ತಿಳಿಯುವ ಅವಶ್ಯಕತೆ ಇದೆ. ಕಲ್ಕತ್ತಾದಲ್ಲಿ ವಿದ್ಯುತ್‌ಶಕ್ತಿ ಬೆಳಕಿನ ಮೊದಲು ಪ್ರದರ್ಶನವನ್ನು 24 ಜುಲೈ 1879ರಂದು PW Fleury ಕಂಪನಿ ಮಾಡಿತು. 1897 ಜನವರಿ 7 ರಂದು ಕಿಲ್ಬರ್ನ್ ಮತ್ತು ಕೋ (ಕಂಪನಿ) ಕಲ್ಕತ್ತಾ ನಗರದ ವಿದ್ಯುತ್ ಬೆಳಕಿನ ವ್ಯವಸ್ಥೆಯ ಪರವಾನಗಿಯನ್ನು ಇಂಡಿಯನ್ ಎಲೆಕ್ಟ್ರಿಕ್ ಕಂಪನಿಯ ಏಜೆನ್ಸಿಯಾಗಿ ಪಡೆಯಿತು. ಅದು 1897 ಜನವರಿ 15 ರಂದು ಲಂಡನ್‌ನಲ್ಲಿ ನೊಂದಾಯಿಸಲ್ಪಟ್ಟಿತು. ನಂತರ ಕಂಪನಿಯನ್ನು ಕಲ್ಕತ್ತಾ ಎಲೆಕ್ಟ್ರಿಕ್ ಸಪ್ಲೈ ಕಾರ್ಪೋರೇಷನ್ ಎಂದು ಮರುನಾಮಕರಣ ಮಾಡಲಾಯಿತು. ಕಲ್ಕತ್ತಾದಲ್ಲಿ ವಿದ್ಯುದೀಕರಣ ಮೊದಲ ಬಾರಿಗೆ ಆರಂಭವಾಗಿತ್ತು.

ಆ ಮೇಲೆ ವಿದ್ಯುದೀಕರಣ ಮುಂಬಯಿಗೆ ಹರಡಿತು. 1882 ರಲ್ಲಿ ಮೊದಲ ಬಾರಿಗೆ ಮುಂಬಯಿಯ ಕ್ರಾಫರ್ಡ್ ಮಾರ್ಕೆಟ್ ನಲ್ಲಿ ವಿದ್ಯುತ್ ಬೆಳಕು ಬಳಸಲಾಯಿತು. ಬೆಸ್ಟ್ (ಭಾರತ ಎಲೆಕ್ಟ್ರಿಕ್ ಸರಬರಾಜು ಮತ್ತು ಟ್ರಾಮ್ ವೇಸ್ ಕಂಪನಿ) 1905 ರಲ್ಲಿ ಟ್ರಾಮ್ ವೇ ಯ ದಾರಿಗೆ ವಿದ್ಯುತ್ಶಕ್ತಿಯನ್ನು ಒದಗಿಸಲು ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿಸಿತು.

1897ರಲ್ಲಿ ಡಾರ್ಜಲಿಂಗ್ ಪುರ ಸಭೆಗಾಗಿ ಸಿಡ್ರಾಪೊಂಗ್ ನಲ್ಲಿ ಚಹಾ ಎಸ್ಟೇಟ್ ಬಳಿ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಏಷ್ಯಾದಲ್ಲಿ ಮೊದಲ ವಿದ್ಯುತ್ ಬೀದಿ ಬೆಳಕು 1905 ಆಗಸ್ಟ್ 5 ರಂದು ಬೆಂಗಳೂರಿನಲ್ಲಿ ಆಯಿತು. 1925 ರಲ್ಲಿ ಮೊದಲ ಎಲೆಕ್ಟ್ರಿಕ್ ಟ್ರೈನ್ ಭಾರತದಲ್ಲಿ ಮುಂಬಯಿಯಲ್ಲಿ ವಿಕ್ಟೋರಿಯಾ ಟರ್ಮಿನಸ್ ನಿಂದ ಕುರ್ಲಾ ನಿಲ್ದಾಣದ ವರೆಗೆ ಓಡಲಾರಂಭಿಸಿತು. 2015 ರಲ್ಲಿ ಮೊದಲ ಬಾರಿಗೆ ಪೂರ್ಣವಾಗಿ ಸೌರ ಶಕ್ತಿಯನ್ನು ಬಳಸುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾಪನೆ ಕೊಚ್ಚಿನ್ ನಲ್ಲಾಯಿತು.

ವಿದ್ಯುತ್ ಉತ್ಪಾದನೆ ಹಾಗೂ ಬಳಕೆಯಲ್ಲಿ ಚೀನಾ, ಅಮೆರಿಕಾ ಗಳ ನಂತರ ಭಾರತ 3 ನೇ ಸ್ಥಾನದಲ್ಲಿದೆ. 2020 ಮಾರ್ಚ್ 31 ರ ಮಾಹಿತಿ ಪ್ರಕಾರ 3.70 ಲಕ್ಷ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಭಾರತ ಪಡೆದುಕೊಂಡಿದೆ. ಅದರಲ್ಲಿ 47% ಖಾಸಗಿ, 28% ಕೇಂದ್ರ, 25% ರಾಜ್ಯ ಸರ್ಕಾರಗಳ ಒಡೆತನದಲ್ಲಿರುವ ಉತ್ಪಾದನಾ ಕಂಪನಿಗಳ ಪಾಲಿದೆ.

2018–19ರಲ್ಲಿ ತಲಾ ವಿದ್ಯುತ್ ಬಳಕೆ 1181 ಕಿಲೋ ವಾಟ್–ಅವರ್ ಆಗಿತ್ತು. ಬಳಕೆಯಲ್ಲಿಯೂ ಭಾರತ ವಿಶ್ವದಲಿ 3ನೇ ಸ್ಥಾನ ಹೊಂದಿದ್ದರೂ ತಲಾ ವಿದ್ಯುತ್ ಬಳಕೆ ಕಡಿಮೆ ಇದೆ. ಭಾರತದ ತಲಾ ವಿದ್ಯುತ್ ಬಳಕೆ ಜಾಗತಿಕ ಸರಾಸರಿಯ ಮೂರನೇ ಒಂದು ಭಾಗದಷ್ಟು ಇದ್ದು, ಅದರಲ್ಲಿ ಜಾಗತಿಕವಾಗಿ 104ನೇ ಸ್ಥಾನದಲ್ಲಿದೆ.

ಭಾರತದಲ್ಲಿ ವಿದ್ಯುತ್ 2019–20ರಲ್ಲಿ ಕೆಳಕಂಡ ಮೂಲಗಳಿಂದ ಉತ್ಪಾದನೆಯಾಗಿದೆ.

ಕಲ್ಲಿದ್ದಲು	71.8 %
ಅನಿಲ	3.5 %
ಪರಮಾಣು	3.3 %
ದೊಡ್ಡ ಹೈಡ್ರೋ (ಜಲ)	11.3 %
ಸಣ್ಣ ಹೈಡ್ರೋ (ಜಲ)	0.6 %
ಪವನ ವಿದ್ಯುತ್	4.6 %
ಸೌರ ವಿದ್ಯುತ್	3.6 %
ಜೈವಿಕ	1.0 %
ಇತರ	0.3 %

ಭಾರತದಲ್ಲಿ 1947ರಲ್ಲಿ 1500 ಗ್ರಾಮಗಳು, 1991ರಲ್ಲಿ C.E.A ಯ ಪ್ರಕಾರ 4,81,124 ಗ್ರಾಮಗಳು 2011 ರ ಜನಗಣತಿಯ ಪ್ರಕಾರ 5.79.012 (97%) ಗ್ರಾಮಗಳು ವಿದ್ಯುದೀಕರಣಗೊಂಡಿವೆ. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಉಳಿದ 18,452 ಗ್ರಾಮಗಳನ್ನು ವಿದ್ಯುದೀಕರಣಗೊಳಿಸಲು ಯೋಜಿಸಿದೆ. 2015–16ರಲ್ಲಿ 8360, 2016–17ರಲ್ಲಿ 5686 ಹಳ್ಳಿಗಳಲ್ಲಿ ವಿದ್ಯುದೀಕರಣದ ಯೋಜನೆ ಮಾಡಲಾಗಿತ್ತು. 2017–18 ರಲ್ಲಿ 4406 ಗ್ರಾಮಗಳನ್ನು ಮಾತ್ರ ವಿದ್ಯುದೀಕರಣಗೊಳಿಸಲು ಯೋಜಿಸಲಾಗಿತ್ತು. ಇತ್ತೀಚೆಗೆ ಮೋದಿ ಸರಕಾರ ಶೇ. 100 ಗ್ರಾಮೀಣ ವಿದ್ಯುದೀಕರಣವನ್ನು ಯೋಜಿತ ಅವಧಿಗಿಂತ ಮೊದಲೇ ಸಾಧಿಸಿದೆ ಎಂದು ಪ್ರಚಾರ ಮಾಡಲಾಯಿತು. ಆದರೆ 'ದಿ ವೈರ್' ವೆಬ್ ಸೈಟ್ ಪ್ರಕಾರ UPA 1 ಮತ್ತು 2 ಸರ್ಕಾರದ ಅವಧಿಯಲ್ಲಿ 1,08,228 ಹಳ್ಳಿಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿತ್ತು. ಸರಾಸರಿ ಪ್ರತಿವರ್ಷ UPA ಸರ್ಕಾರ ತನ್ನ ಆಡಳಿತಾವಧಿಯಲ್ಲಿ 12,030 ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದರೆ, NDA ಸರ್ಕಾರ 4842 ಗ್ರಾಮಗಳಿಗೆ ಮಾತ್ರ ವಿದ್ಯುತ್ ಕಲ್ಪಿಸಿದೆ.

ಆದರೆ ಒಂದು ಗ್ರಾಮದ ವಿದ್ಯುದೀಕರಣ ಅಂದರೆ ಎಲ್ಲ ಮನೆಗಳಿಗೆ ವಿದ್ಯುತ್ ಒದಗಿಸಲಾಯಿತು ಎಂದಾಗಲಿ ಸದಾ ವಿದ್ಯುತ್ ಲಭ್ಯವಿದೆಯೆಂದಾಗಲಿ ಅರ್ಥವಲ್ಲ. ಗ್ರಾಮದ ಯಾವುದೇ ಭಾಗದಲ್ಲಿ ವಿದ್ಯುತ್ ಸಂಪರ್ಕ ಬಂದಿದ್ದರೆ ಮತ್ತು ಶೇ. 10 ಮನೆಗಳಿಗೆ ವಿದ್ಯುತ್ ಒದಗಿಸಲಾಗಿದ್ದರೆ ಆ ಗ್ರಾಮದ ವಿದ್ಯುದೀಕರಣ ಆಗಿದೆ ಎಂದು ಪರಿಗಣಿಸಲಾಗುತ್ತದೆ. ಹೆಚ್ಚಿನ ಗ್ರಾಮೀಣ ಪ್ರದೇಶಗಳಲ್ಲಿ ಕೆಲವೇ ಗಂಟೆಗಳ ಕಾಲ ವಿದ್ಯುತ್ ಲಭ್ಯವಿರುತ್ತದೆ. ಭಾರತದ 3.1 ಕೋಟಿ (ಒಟ್ಟು ಮನೆಗಳ ಶೇ. 17ರಷ್ಟು) ಮನೆಗಳು ಇನ್ನೂ ಕೂಡಾ ವಿದ್ಯುತ್ ಸಂಪರ್ಕ ಪಡೆದಿಲ್ಲ.

ಒಂದು ಮಾಹಿತಿಯ ಪ್ರಕಾರ 1905 ರಿಂದ KEB ಪ್ರಾರಂಭವಾಯಿತು. 1910ರಲ್ಲಿ Indian Electricity Act ಜಾರಿ ಮಾಡಲಾಯಿತು. 1948ರಲ್ಲಿ Electricity Regulatory Commission ಪ್ರಾರಂಭ ಮಾಡಲಾಯಿತು. ಭಾರತದ ವಿದುತ್ ಶಕ್ತಿ ಉತ್ಪಾದನೆ ಮತ್ತು ಬಳಕೆಯಲ್ಲಿ 3 ನೇ ಸ್ಥಾನ ಪಡೆದಿರುವುದರ ಹಿಂದೆ ಇದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ.


ವಿದ್ಯುತ್ ವಲಯ ಒಂದು ದೇಶದ ಅಭಿವೃದ್ಧಿಯ ಬೆನ್ನೆಲುಬು. ವಿದ್ಯುತ್ ಶಕ್ತಿ ಇಲ್ಲದಿದ್ದರೆ ಕೈಗಾರಿಕಾ ಬೆಳವಣಿಗೆಯಲ್ಲಿ ಕೃಷಿಯ ಬೆಳವಣಿಗೆಯಿಲ್ಲ, ಉದ್ಯೋಗ ನಿರ್ಮಾಣವಿಲ್ಲ ಮತ್ತು ಜನರ ಜೀವನಮಟ್ಟ ಉತ್ತಮಗೊಳ್ಳಲು ಸಾಧ್ಯವಿಲ್ಲ. ಒಂದು ನಾಗರಿಕ ಸಮಾಜದ ನಿರ್ಮಾಣವೂ ಅಸಾಧ್ಯ. ಎಲ್ಲರಿಗೂ ಕೈಗೆಟ್ಟುಕುವ ಬೆಲೆಯಲ್ಲಿ ಎಲ್ಲಾ ಕ್ಷೇತ್ರಗಳಿಗೆ ವಿದ್ಯುತ್ ಪೂರೈಸಬಲ್ಲ ಒಂದು ವಿದ್ಯುತ್ ಶಕ್ತಿ ನೀತಿ ದೇಶದ ಅಭಿವೃದ್ಧಿಯ ಜೀವಾಳ.

ಸ್ವಾತಂತ್ರ್ಯ ನಂತರ ದೇಶದಲ್ಲಿ ವಿದ್ಯುತ್ ವಲಯ

ಸ್ವಾತಂತ್ರ್ಯ ಪೂರ್ವದಲ್ಲಿ ವಿದ್ಯುತ್ ಉತ್ಪಾದನೆಯನ್ನು ಖಾಸಗಿ ಸಂಸ್ಥೆಗಳು, ಸ್ಥಳೀಯ ನಿಗಮಗಳು ಮಾಡುತ್ತಿದ್ದವು. ಆ ಕಾಲದಲ್ಲಿ ಕೇವಲ ನಗರಗಳಿಗೆ ಮತ್ತು ಕೈಗಾರಿಕೆಗಳಿಗೆ ಮಾತ್ರ ವಿದ್ಯುತ್ ಶಕ್ತಿಯ ಪೂರೈಕೆಯಿತ್ತು. ಆಗ ವಿದ್ಯುತ್ ಶಕ್ತಿ ಕೇವಲ 1450 ಮೆಗಾವಾಟ್ ನಷ್ಟಿತ್ತು. ವಿದ್ಯುತ್ ಉಪಕರಣಗಳನ್ನು ಮತ್ತು ಅದರ ತಯಾರಿಕಾ ಯಂತ್ರಗಳನ್ನು ಉತ್ಪಾದಿಸುವ ಯಾವುದೇ ಉದ್ದಿಮೆ ಇರಲಿಲ್ಲ.

ಭಾರತದ ಅಭಿವೃದ್ಧಿ ನೀತಿಯ ಭಾಗವಾಗಿ ವಿದ್ಯುತ್‌ಶಕ್ತಿ ಅತಿ ಅವಶ್ಯಕವಾದದ್ದು. ಇದನ್ನು ಮೂಲ ಸೌಕರ್ಯವಾಗಿ ಒದಗಿಸಬೇಕು ಎಂದು ತೀರ್ಮಾನಿಸಲಾಯಿತು. ಆಗ ಖಾಸಗಿ ವಲಯದಲ್ಲಿದ್ದ ಟಾಟಾ ಎಲೆಕ್ಟ್ರಿಕ್, ಅಹಮದಾಬಾದ್

ಪುಟ 10 ಕ್ಕೆ



ವಿದ್ಯುತ್ ಕಾಯ್ದೆ ತಿದ್ದುಪಡಿ 2020 ಏಕೆ ಬೇಡ?....

ಪುಟ 9 ರಿಂದ

ಎಲೆಕ್ಟ್ರಿಕ್ ಹಾಗೂ CESC ಕಂಪನಿಗಳು ಕೆಲಸ ಮಾಡುತ್ತಿದ್ದವು. 1946 ರಲ್ಲಿ ದೇಶದ ಪ್ರಮುಖ ಉದ್ಯಮಿಗಳು 'ಬಾಂಬೆ ಪ್ಲಾನ್'ನ್ನು ಪ್ರಕಟಿಸಿ "ವಿದ್ಯುತ್ ವಲಯದಲ್ಲಿ ಬಂಡವಾಳವನ್ನು ಸರ್ಕಾರ ತೊಡಗಿಸಬೇಕು ಮತ್ತು ಅದು ಅದರ ಪ್ರಾಥಮಿಕ ಜವಾಬ್ದಾರಿ" ಎಂದರು.

ವಿದ್ಯುತ್ ಸ್ಥಾವರಗಳಿಗೆ ಭಾರಿ ಪ್ರಮಾಣದ ಬಂಡವಾಳ ಬೇಕು. ಆದರೆ ಪ್ರತಿ ಫಲ ದೊರೆಯಲು ಸಾಕಷ್ಟು ಸಮಯ ಬೇಕು. ಆದ್ದರಿಂದ ಆಗಿನ ಟಾಟಾಗಳು, ಬಿರ್ಲಾಗಳು ಈ ವಲಯಗಳಿಗೆ ಬಂಡವಾಳ ತೊಡಗಿಸಲು ಸಿದ್ದರಿರಲಿಲ್ಲ. ಅಗ್ಗದ ದರದಲ್ಲಿ ವಿದ್ಯುತ್ ಅಂದಿನ ಬಂಡವಾಳಗಾರರಿಗೆ ಅಗತ್ಯವಾಗಿತ್ತು. ಸರ್ಕಾರ ಅವರ ಬಯಕೆಯಂತೆ ಬಂಡವಾಳ ತೊಡಗಿಸಿತು.

1948ರ ಭಾರತೀಯ ವಿದ್ಯುತ್ ಶಕ್ತಿ ಕಾಯ್ದೆಯಲ್ಲಿ ಪ್ರತಿಯೊಂದು ರಾಜ್ಯಗಳ ರಾಜ್ಯ ವಿದ್ಯುತ್ ಮಂಡಳಿಗಳಿಗೆ ಈ ಜವಾಬ್ದಾರಿಯನ್ನು ವಹಿಸಲಾಯಿತು. ಇದರ ಪರಿಣಾಮವಾಗಿ 5 ದಶಕಗಳಲ್ಲಿ ಉತ್ಪಾದನಾ ಸಾಮಾರ್ಥ್ಯ 1 ಲಕ್ಷ 46 ಸಾವಿರ ಮೆಗಾವಾಟ್ ಆಯಿತು.

ಸ್ವಲ್ಪ ಸಮಯದ ನಂತರ ಸರ್ಕಾರ ವಿದ್ಯುತ್ ಉಪಕರಣಗಳ ಉತ್ಪಾದನಾ ವಲಯವನ್ನು ಪ್ರವೇಶಿಸಿತು. ಇದು ಆಗಿನ ಸ್ವಾವಲಂಬಿ ಬೆಳವಣಿಗೆ ನೀತಿಯ ಭಾಗವೂ ಆಗಿತ್ತು. ಆದರೆ ಆಗಿನ ಜಾಗತಿಕ ದೈತ್ಯ ಕಂಪನಿಗಳಾಗಿದ್ದ ಅಮೆರಿಕಾದ ಜನರಲ್ ಎಲೆಕ್ಟ್ರಿಕಲ್ ಅಥವಾ ಬಾಬ್‌ಕೊಕ್ ಅಂಡ್ ವಿಲ್‌ಕಾಕ್ಸ್ ನಂತಹ ಟರ್ಬೈನ್ ಮತ್ತು ಬಾಯ್ಲರ್ ಉತ್ಪಾದನಾ ಕಂಪನಿಗಳು ಭಾರತದಲ್ಲಿ ಜಂಟಿ ಕಂಪನಿ ಸ್ಥಾಪಿಸಲು ಮುಂದೆ ಬರಲಿಲ್ಲ. ಆದರೆ ಸೋವಿಯತ್ ರಷ್ಯಾ ಮತ್ತು ಜೆಕೋಸ್ಲಾವಿಯಾ ದೇಶಗಳ ನೆರವಿನೊಂದಿಗೆ ಇಂದಿನ BHEL ನ್ನು 1964 ರಲ್ಲಿ ಸ್ಥಾಪಿಸಲಾಯಿತು. ಈಗ BHEL ಒಂದು ಅತ್ಯುತ್ತಮ ವಿದ್ಯುತ್ ಯಂತ್ರ ಉತ್ಪಾದನಾ ಘಟಕವಾಗಿ ಜಾಗತಿಕವಾಗಿ ಹೆಸರುವಾಸಿಯಾಗಿದೆ.

1960 ರ ದಶಕದಲ್ಲಿ ಆದ ಮತ್ತೊಂದು ಗಮನಾರ್ಹ ಬೆಳವಣಿಗೆಯನ್ನು ಗಮನಿಸಬೇಕು. ಕತ್ತು ಹಿಸುಕುವ ಅಮೆರಿಕಾದ PL480 ಒಪ್ಪಂದದಿಂದ ಪಾಠ ಕಲಿತ ಭಾರತ ಆಹಾರ ಧಾನ್ಯ ಉತ್ಪಾದನಾ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲು ಪ್ರಯತ್ನಗಳನ್ನು ಆರಂಭಿಸಿತು. ಆಹಾರಧಾನ್ಯ ಉತ್ಪಾದನೆಯನ್ನು ಹೆಚ್ಚಿಸಿ ಅಮೆರಿಕಾದ ರಾಜಕೀಯ ಬ್ಲಾಕ್‌ಮೇಲ್ ತಂತ್ರಗಳನ್ನು ವಿಫಲಗೊಳಿಸಲು ಅನೇಕ ಕ್ರಮಗಳನ್ನು ಜಾರಿಗೊಳಿಸಲಾಯಿತು. ರಸಗೊಬ್ಬರಕ್ಕೆ ಸಹಾಯಧನ, ಕೃಷಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಒದಗಿಸುವ ಕ್ರಮಗಳನ್ನು ಕೃಷಿವಲಯದ ಉತ್ಪಾದನೆ ಹೆಚ್ಚಿಸಲು ಉತ್ತೇಜನವಾಗಿ ನೀಡಲಾಯಿತು. ರಸಗೊಬ್ಬರಕ್ಕೆ ಕೇಂದ್ರ ಸರ್ಕಾರ ಸಹಾಯಧನ ನೀಡಿದರೆ, ರಿಯಾಯಿತಿ ದರದಲ್ಲಿ ವಿದ್ಯುತ್ ಒದಗಿಸುವುದು ರಾಜ್ಯ ಸರ್ಕಾರಗಳ ಜವಾಬ್ದಾರಿಯಾಯಿತು.

ಆಗ ಕೃಷಿ ಕ್ಷೇತ್ರದಲ್ಲಿ 4% ಮಾತ್ರ ವಿದ್ಯುತ್ ಬಳಕೆಯಾಗುತ್ತಿತ್ತು. ಭಾರತ ಕೃಷಿ ಮತ್ತು ಖನಿಜ ಉತ್ಪಾದನೆಯಂತಹ ಪ್ರಾಥಮಿಕ ವಸ್ತು ಉತ್ಪಾದನೆಗೆ ಸೀಮಿತಗೊಳಿಸಿ ಭಾರತದ ಕೈಗಾರಿಕಾ ಬೆಳವಣಿಗೆಯನ್ನು ಕುಂಠಿತಗೊಳಿಸಬೇಕೆಂಬ ಪ್ರಯತ್ನಗಳನ್ನು ನವವಸಾಹತು ಶಕ್ತಿಗಳು ಮತ್ತು ಅವರ ದೇಶೀಯ ಹಿಂಬಾಲಕರು ನಡೆಸಿದ್ದರು. ವಿದ್ಯುತ್ ವಲಯದಲ್ಲಿ ಸಾರ್ವಜನಿಕ ಕ್ಷೇತ್ರದ ಪಾಲ್ಗೊಳ್ಳುವಿಕೆಯ ಹಿಂದೆ ಭಾರೀ ಹೂಡಿಕೆ, ಲಾಭ ಗಳಿಕೆಗೆ ದೀರ್ಘ ಕಾಲ – ಈ ಅಂಶಗಳಲ್ಲದೆ, ಭಾರತೀಯ ಹಾಗೂ ವಿದೇಶಿ ಬಂಡವಾಳಿಗರು ಈ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಹಿಂದೇಟು ಹಾಕುತ್ತಿದ್ದಕ್ಕೆ ಇದೂ ಕಾರಣವಾಗಿತ್ತು.



ಭಾರತೀಯ ಖಾಸಗಿ ಹಾಗೂ ವಿದೇಶಿ ಕಂಪನಿಗಳ ಪ್ರವೇಶ

ಕಳೆದ 5 ದಶಕಗಳಲ್ಲಿ ಭಾರತ ಸುಮಾರು 1 ಲಕ್ಷ 46 ಸಾವಿರ ಮೆಗಾವಾಟ್ ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. 5 ಲಕ್ಷ ಕೋಟಿ ಬೃಹತ್ ಪ್ರಮಾಣದ ಆಸ್ತಿ ಶೇಖರಣೆಯಾಗಿದೆ. 80 ರ ದಶಕದವರೆಗೂ ಬಹುತೇಕ ಎಲ್ಲಾ ಅಭಿವೃದ್ಧಿಶೀಲ ದೇಶಗಳ ವಿದ್ಯುತ್ ವಲಯ ಸಾರ್ವಜನಿಕ ರಂಗದಲ್ಲಿತ್ತು. 80 ರ ದಶಕದಲ್ಲಿ ವಿಶ್ವ ಬ್ಯಾಂಕ್ ಅಭಿವೃದ್ಧಿಶೀಲ ದೇಶಗಳ ವಿದ್ಯುತ್ ವಲಯಕ್ಕೆ ಸಾಲಕೊಡುವ ನೀತಿ ಪ್ರಾರಂಭಿಸಿತು. ಸಾಲದೊಂದಿಗೆ ಷರತ್ತುಗಳು ಬಂದವು. ಇದು ಹಂತಹಂತವಾಗಿ ಸಾರ್ವಜನಿಕ ರಂಗದ ವಿದ್ಯುತ್ ವಲಯವನ್ನು ನಾಶಪಡಿಸಿ ಖಾಸಗಿ ಮತ್ತು ವಿದೇಶಿ ಬಂಡವಾಳಗಾರರರಿಗೆ ಅದನ್ನು ವಹಿಸಿಕೊಡುವ ಸ್ಪಷ್ಟ ಪ್ರಯತ್ನವಾಗಿತ್ತು. ಹೀಗೆ ಹೇರಳವಾಗಿ ಸಂಗ್ರಹವಾಗಿರುವ ಜಾಗತಿಕ ಬಂಡವಾಳವೇ, ಶ್ರೀಮಂತ ದೇಶಗಳು ಅಭಿವೃದ್ಧಿಶೀಲ ದೇಶಗಳನ್ನು ಸಾಲಿಗೆ ಮಾಡುವ ಪ್ರಕ್ರಿಯೆ ಮತ್ತು ಸರ್ಕಾರಗಳು ಅನುಸರಿಸುತ್ತಿರುವ ವಿದ್ಯುತ್ ವಲಯದ ಸುಧಾರಣೆಗಳ ಹಿಂದಿರುವ ಪ್ರೇರಕ ಶಕ್ತಿ.

1991ರಲ್ಲಿ ಹೊಸ ವಿದ್ಯುತ್ ನೀತಿ

ಭಾರತೀಯ ವಿದ್ಯುತ್ ಶಕ್ತಿ ಕಾಯ್ದೆ 1948 ಕ್ಕೆ ತಿದ್ದುಪಡಿ ತಂದು 1991 ರ ಹೊಸ ವಿದ್ಯುತ್ ನೀತಿ ಜಾರಿಗೆ ಬಂತು. ಈ ನೀತಿಯ ಪ್ರಕಾರ ಕಾರ್ಯಾಂಗದ ಆದೇಶಗಳನ್ನು ಜಾರಿಗೊಳಿಸಿ ಕೆಲವು ವಿಶೇಷ ಸೌಲಭ್ಯಗಳನ್ನು ನೀಡಿ ವಿದೇಶಿ ಖಾಸಗೀ ಬಂಡವಾಳದಾರರಿಗೆ ವಿದ್ಯುತ್ ಉತ್ಪಾದನೆ ಪ್ರಾರಂಭಿಸಲು ಆಹ್ವಾನ ನೀಡಲಾಯಿತು. ಈ ನೀತಿಯ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:

- ವಿದೇಶಿ ಕಂಪನಿಗಳ ಬಂಡವಾಳಕ್ಕೆ 16 % ಲಾಭದ ಗ್ಯಾರಂಟಿ
- ಸಂಪೂರ್ಣ ತೆರಿಗೆ ರಜಾ
- ಬಂಡವಾಳ ಖರ್ಚು ಹಾಗೂ ನಿರ್ವಹಣಾ ಖರ್ಚು ಎರಡು ಅಂಶಗಳನ್ನು ಸೇರಿಸಿ. ವಿದ್ಯುತ್ ದರ ಲೆಕ್ಕ ಹಾಕಲು ಅವಕಾಶ
- ವಿದ್ಯುತ್ ಸ್ಥಾವರಗಳಿಗೆ ಅಗತ್ಯವಾದ ಉಪಕರಣಗಳನ್ನು ತಮಗೆ ತೋಚಿದಂತೆ (ಅಂದರೆ ಇವು ದೇಶದಲ್ಲೆ ಇನ್ನೂ ಕಡಿಮೆ ಬೆಲೆಗೆ ಲಭ್ಯವಿದ್ದರೂ) ಆಮದು ಮಾಡಿಕೊಳ್ಳಬಹುದು.

77,000 ಮೆಗಾವಾಟ್ ವಿದ್ಯುತ್ ಸಾಮರ್ಥ್ಯದಲ್ಲಿ ಕೇವಲ 5,000 ಮೆಗಾವಾಟ್ ಮಾತ್ರ ಉತ್ಪಾದಿಸುತ್ತಿದ್ದ ವಿದೇಶಿ ಮತ್ತು ಖಾಸಗಿ ಕಂಪನಿಗಳಿಗೆ ಮುಕ್ತ ಮಾರುಕಟ್ಟೆ ಒದಗಿಸಿದ್ದರ ಬಗ್ಗೆ ದೊಡ್ಡ ವಿರೋಧಗಳು ಎದ್ದವು. ವಿರೋಧದ ಮಧ್ಯೆಯೂ ಕೂಡಾ ಅಮೆರಿಕಾದ ಎನ್ರಾನ್ ಕಂಪನಿ ಮಹಾರಾಷ್ಟ್ರದ ದಾಬೋಲ್ ಯೋಜನೆಗೆ ಅನುಮತಿ ಕೊಡಲಾಯಿತು. ಈ ನಡುವೆ ರಾಜ್ಯ ವಿದ್ಯುತ್ ಮಂಡಳಿಗಳನ್ನು ವಿಭಜಿಸಲು ಮತ್ತು ಖಾಸಗೀಕರಿಸಲು, ರಾಜ್ಯ ವಿದ್ಯುತ್ ಮಂಡಳಿಗಳ ಪುನರಚನೆ ನೀತಿ ಮತ್ತೆ ವಿಶ್ವ ಬ್ಯಾಂಕಿನಿಂದ ನಿರ್ದೇಶಿಸಲ್ಪಟ್ಟಿತು.

ಬಲವಾದ ವಿರೋಧದ ನಡುವೆಯೂ ಇದರ ಅನ್ವಯ ಹಲವು ರಾಜ್ಯಗಳಲ್ಲಿ ಆರಂಭವಾಯಿತು. ಅದರ ಪರಿಣಾಮಗಳೂ ಕಾಣಲಾರಂಭಿಸಿದವು. ಉದಾಹರಣೆಗೆ, ಒಡಿಶಾದ ಪ್ರಸರಣ ಮತ್ತು ಉತ್ಪಾದನಾ ವಿಭಾಗವನ್ನು 2 ಭಾಗಗಳಾಗಿ ಮಾಡಿ, 4 ಪ್ರಾದೇಶಿಕ ಸರಬರಾಜು ಕಂಪನಿಗಳಾಗಿ ಮಾಡಿದ ನಂತರ ಅಮೆರಿಕಾದ AES ಮತ್ತು ಇತರೆ ಬಹುರಾಷ್ಟ್ರೀಯ ಕಂಪನಿಗಳು ಇವನ್ನು ಖರೀದಿಸಿದವು. ನಂತರ ಒಡಿಶಾದಲ್ಲಿ ರಾಜ್ಯದ ವಿದ್ಯುತ್ ಕ್ಷಾಮ ಪ್ರಾರಂಭವಾಯಿತು.

ಮಹಾರಾಷ್ಟ್ರದಲ್ಲಿ ಎನ್ರೋನ್, ಒಡಿಶಾದಲ್ಲಿ ಹಲವು ಖಾಸಗಿ ವಿದ್ಯುತ್ ಸರಬರಾಜು ಕಂಪನಿಗಳು ವಿಫಲವಾಗುತ್ತಿದ್ದಂತೆ, 2001 ರಲ್ಲಿ ನಿವೃತ್ತ IAS ಅಧಿಕಾರಿ ಸೋವನ್ ಕುನಾಂಗೋ ನೇತೃತ್ವದ ತನಿಖಾ ಸಮಿತಿಯನ್ನು ರಚಿಸಲಾಯಿತು. ಅದು ಕೊಟ್ಟ ವರದಿಯಲ್ಲಿ ಎಲ್ಲಾ ರಂಗಗಳಲ್ಲಿ ಖಾಸಗಿ ವಿದ್ಯುತ್ ಸರಬರಾಜು ಕಂಪನಿಗಳ ವೈಫಲ್ಯವನ್ನು ಬಿಚ್ಚಿಟ್ಟಿತು. ಈ ಕಂಪನಿಗಳು ದಕ್ಷತೆಯಿಂದ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣದಲ್ಲಿ ವಿಫಲವಾದವು. ಮಾತ್ರವಲ್ಲ, ಉನ್ನತ ದರ್ಜೆಯ ಆಡಳಿತ ಮತ್ತು ಬಂಡವಾಳವನ್ನು ಸಹ ತರಲಿಲ್ಲ. ಖಾಸಗಿ ಸರಬರಾಜು ಕಂಪನಿಗಳ ದುಡಿಯುವ ಬಂಡವಾಳ ಸರ್ಕಾರಿ ಸ್ವಾಮ್ಯದ ಗ್ರಿಡ್ಕೊಗೆ ಬಾಕಿ ಉಳಿಸಿದ ಹಣದಿಂದ ಬಂತು. ಇಂತಹ ಒಟ್ಟು ಬಾಕಿ 1000 ಕೋಟಿ ರೂ. ಬಾಕಿ ಇತ್ತು. ಇದರಲ್ಲಿ AES ಕಂಪನಿಯೊಂದೇ 403 ಕೋಟಿ ರೂ. ಬಾಕಿ ಇಟ್ಟುಕೊಂಡಿತ್ತು, ಎಂದು ವರದಿ ಬಯಲುಪಡಿಸಿತು.

ಎಲ್ಲ ರಾಜ್ಯಗಳಲ್ಲಿ ಖಾಸಗೀಕರಣ ಆಗದಿದ್ದರೂ, ವಿಶ್ವಬ್ಯಾಂಕ್ ಪ್ರಣೀತ ಮತ್ತು ಮಾರುಕಟ್ಟೆ ಆಧಾರಿತ ವಿದ್ಯುತ್ ನಿರ್ವಹಣಾ ಮಾದರಿಯನ್ನು ಭಾರತ ಅಳವಡಿಸಿಕೊಂಡಿತು. ಅದರ ಪರಿಣಾಮವಾಗಿ ಮೊದಲಿದ್ದ ರಾಜ್ಯ ವಿದ್ಯುತ್ ಮಂಡಳಿಗಳ ಬದಲು (ಒಡಿಶಾದಲ್ಲಿದಂತೆ) ಉತ್ಪಾದನೆ, ಪ್ರಸರಣ ಮತ್ತು ಹಂಚಿಕೆ ಬೇರೆ ಬೇರೆ ಸಂಸ್ಥೆಗಳಾದವು ಅವುಗಳಿಗೆ ಲಾಭದ ದಾಹ ಹಾಗೂ ಆರ್ಥಿಕ ಹಿತಾಸಕ್ತಿಯೇ ಮುಖ್ಯವಾಯಿತು. ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೂ ಅವಕಾಶ ದೊರೆಯಿತು. ವಿದೇಶಿಗಳಿಂದ ಬಂದ ಖಾಸಗಿ ವಿದ್ಯುತ್ ಉತ್ಪಾದಕರು ಇಲ್ಲಿ ಘಟಕಗಳನ್ನು ಸ್ಥಾಪಿಸಿ ಉತ್ಪಾದನೆ ಮಾಡಿದ ವಿದ್ಯುತ್ತನ್ನು ಸಾಧ್ಯವಾದಷ್ಟು ಹೆಚ್ಚಿನ ದರಕ್ಕೆ SEB (State Electricity Board) ಮಾರಾಟ ಮಾಡಲು ಹಾತೊರೆದರು. ಆದರೆ ಅಷ್ಟರಲ್ಲಾಗಲೇ SEB ಗಳು ದಿವಾಳಿ ಅಂಚಿಗೆ ಬಂದು ನಿಂತಿದ್ದವು. ಆದ್ದರಿಂದಲೇ ಎನ್ರಾನ್ ನಂತಹ ಹಗರಣಗಳು ನಡೆದವು.

2002ರ ಹೊತ್ತಿಗೆ **ವಿಶ್ವ ಬ್ಯಾಂಕ್ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ಗಳು ವಿದ್ಯುತ್ ವಲಯದ ಯೋಜನೆಗಳಿಗೆ ಹೂಡಿಕೆಯಿಂದ ಹಿಂದೆ ಸರಿದವು .ಈ ಸಮಸ್ಯೆಯನ್ನು 'ಪರಿಹರಿಸಲು' ಬೇಕಿದ್ದ** 'ಸುಧಾರಣೆ'ಗಳೇ 2003 ರ ವಿದ್ಯುತ್ ಕಾಯ್ದೆ. ಈ ಕಾಯ್ದೆಯಲ್ಲಿ ಪೂರೈಕೆ ವ್ಯವಸ್ಥೆಯಲ್ಲಿ ಸ್ಪರ್ಧೆಯನ್ನು ಹುಟ್ಟು ಹಾಕುವ ಜೊತೆಗೆ ಗ್ರಾಹಕರ ಹಿತರಕ್ಷಣೆ ಮಾಡುವುದು, ರಾಷ್ಟ್ರೀಯ ವಿದ್ಯುತ್ ದರ ನೀತಿ, ಗ್ರಾಮೀಣ ಭಾಗಗಳಿಗೆ ವಿದ್ಯುತ್ ಪೂರೈಕೆ, ವಿದ್ಯುತ್ ನಿಯಂತ್ರಣ ಆಯೋಗಗಳ ರಚನೆ, ಮೀಟರ್ ಗಳ ಕಡ್ಡಾಯ ಅಳವಡಿಕೆ, ವಿದ್ಯುತ್ ಕಳ್ಳತನ ತಡೆಗಟ್ಟಲು ಭಾರಿ ದಂಡ ವಿಧಿಸುವ ಅಂಶಗಳು ಇದ್ದವು. ಖಾಸಗಿಯವರ ವಿದ್ಯುತ್ ಉತ್ಪಾದನೆಯ ಪಾಲು ಈಗ 47%. ಎಲ್ಲಾ ಉತ್ಪಾದನಾ ಘಟಕಗಳು ವಿದ್ಯುತ್ ಖರೀದಿಗಾಗಿ ಡಿಸ್ಕಾಂ (ಡಿಸ್ಟ್ರಿಬುಶನ್ ಅಥವಾ ವಿತರಣೆ ಕಂಪನಿ) ಅಥವಾ ಎಸ್ಕಾಂ ಗಳ ಜೊತೆ ಒಪ್ಪಂದಮಾಡಿಕೊಂಡಿವೆ. ಬೇಡಿಕೆ ಅಷ್ಟಾಗಿಲ್ಲದಿದ್ದರೂ ಅತ್ಯಧಿಕ ದರ ತೆತ್ತು ವಿದ್ಯುತ್ ಖರೀದಿಗೆ ಡಿಸ್ಕಾಂಗಳು ಹಿಂದೇಟು ಹಾಕುತ್ತಿವೆ. ಖರೀದಿ ಮಾಡಿದ ಪ್ರಕರಣಗಳಲ್ಲಿ ಶುಲ್ಕಪಾವತಿ ಬಾಕಿಯಿದೆ. **ಖಾಸಗಿ ವಿದ್ಯುತ್ ಘಟಕ ಬಹುದೊಡ್ಡ ಮೂಲಸೌಕರ್ಯ ಹೊಂದಿದ್ದರೂ ಅನುತ್ಪಾದಕ ಸ್ಥಿತಿಯಲ್ಲಿವೆ. ಈ ಬಿಕ್ಕಟ್ಟು ಹೆಚ್ಚಿರುವ ಈ ಹಂತದಲ್ಲಿ ಸರ್ಕಾರ ಮತ್ತೇ ಪೂರೈಕೆಯನ್ನೇ ಕೇಂದ್ರವಾಗಿಟ್ಟು ಕೊಂಡು ಸುಧಾರಣೆ** ತರಲು ಹೊರಟಿದೆ. 2020 ರ ತಿದ್ದುಪಡಿ ಮಸೂದೆಯಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿದೆ.

ವಿದ್ಯುತ್ ಕಾಯಿದೆ 2003ಕ್ಕೆ ತಿದ್ದುಪಡಿಗೆ ಶಿಫಾರಸುಗಳು, ಸಮಸ್ಯೆಗಳು

ಭಾರತ ಸರ್ಕಾರದ ವಿದ್ಯುತ್ ಸಚಿವಾಲಯ ತನ್ನ ಅಧಿಸೂಚನೆ ಸಂಖ್ಯೆ 42/6/2011 K&R (ಸಂಪುಟ–VIII) ಮೂಲಕ ದಿನಾಂಕ 17/4/2020 ರಂದು ವಿದ್ಯುತ್ ವಲಯದ ಕರಡು ವಿದ್ಯುತ್ (ತಿದ್ದುಪಡಿ) ಮಸೂದೆ ತಂದಿದೆ.

ಈ ತಿದ್ದುಪಡಿಗಳ ಪ್ರಮುಖ ಉದ್ದೇಶ ವಿದ್ಯುತ್ ವಲಯದಲ್ಲಿ ರಾಜ್ಯದ ಪಾತ್ರವನ್ನು ಕುಗ್ಗಿಸಿ ಕೇಂದ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡುವುದು. ಈಗ ಇರುವಂತೆ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ (SERC) ದ ಅಧ್ಯಕ್ಷರು ಮತ್ತು ಸದಸ್ಯರನ್ನು ರಾಜ್ಯ ಸರ್ಕಾರವೇ ನೇಮಕ ಮಾಡುತ್ತದೆ. ಈಗ ಈ ನೇಮಕವನ್ನು ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ, ಇಂಧನ ಇಲಾಖೆಯ ಮುಖ್ಯ ಕಾರ್ಯದರ್ಶಿಗಳು ಮತ್ತು ಕೇಂದ್ರ ವಿದ್ಯುತ್ ನಿಯಂತ್ರಣ ಪ್ರಾಧಿಕಾರ (CERC) ದ ಸದಸ್ಯರು ಇರುವ ಸಮಿತಿ ಮಾಡುತ್ತದೆ. ಆದರೆ ತಿದ್ದುಪಡಿಯಲ್ಲಿ ಏಕರೂಪದ ಸಮಿತಿಯನ್ನು ತರುವ ಪ್ರಸ್ತಾಪವಿದೆ. ಕೇಂದ್ರ ಸರ್ಕಾರ ನೇಮಕ ಮಾಡಿದವರನ್ನು ರಾಜ್ಯ SERC ಗಳಲ್ಲಿ ನಿಯೋಜನೆ ಮಾಡುವ ಮೂಲಕ ಪ್ರಾಬಲ್ಯ ಸಾಧಿಸಲು ಈ ತಿದ್ದುಪಡಿ ಅವಕಾಶ ಮಾಡಿಕೊಡುತ್ತದೆ. ವಿದ್ಯುತ್ ಸಮವರ್ತಿ ಪಟ್ಟಿಯಲ್ಲಿ (ಅಂದರೆ ಕೇಂದ್ರ ಮತ್ತು ರಾಜ್ಯ ಎರಡಕ್ಕೂ ಕಾನೂನು ಮಾಡಲು ಅವಕಾಶ) ಇರುವ ವಿಷಯವಾಗಿದ್ದು ಅದನ್ನು ಪೂರ್ತಿಯಾಗಿ ಕೇಂದ್ರದ ನಿಯಂತ್ರಣದಲ್ಲಿ ತರುವುದು ಸಂವಿಧಾನದ ಉಲ್ಲಂಘನೆಯಾಗಿದೆ.

ವಿದ್ಯುತ್ ಮಾರಾಟ, ಖರೀದಿ, ಪ್ರಸರಣಗಳಿಗೆ ಸಂಬಂಧಿಸಿದವ್ಯಾಜ್ಯಗಳನ್ನುಬಗೆಹರಿಸಲುರಾಜ್ಯಗಳಲ್ಲಿ ವಿದ್ಯುತ್ ನಿಯಂತ್ರಣ ಆಯೋಗ (SERC) ಇದೆ. ಬಗೆಹರಿಯದ ಅಥವಾ ಆಕ್ಷೇಪಗಳಿರುವ ವ್ಯಾಜ್ಯಗಳನ್ನು ಮೇಲ್ಮನವಿ ಪ್ರಾಧಿಕಾರಕ್ಕೆ (ಅಪಲೇಟ್ ಟ್ರಿಬ್ಯೂನಲ್ ಫಾರ್ ಎಲೆಕ್ಟ್ರಿಸಿಟಿ: ATE) ಒಯ್ಯಲು ಅಧಿಕಾರವಿದೆ. ಕಾಯ್ದೆ ತಿದ್ದುಪಡಿಯಾದರೆ ವಿದ್ಯುತ್ ಗುತ್ತಿಗೆ ಜಾರಿ ಪ್ರಾಧಿಕಾರ (Electricity Contract

ಪುಟ 15 ಕ್ಕೆ

ಶತಮಾನೋತ್ಸವ ಲೇಖನ ಮಾಲೆ-35

ತ್ರಿಪುರಾ: ಪ್ರಜಾಪ್ರಭುತ್ವ ಮತ್ತು ಆದಿವಾಸಿ ಹಕ್ಕುಗಳಿಗಾಗಿ ಹೋರಾಟ

ಜನ ಶಿಕ್ಷಾ ಸಮಿತಿ(ಜೆಎಸ್‌ಎಸ್) ಆರಂಭಿಸಿದ ಸಾಮೂಹಿಕ ಸಾಕ್ಷರತಾ ಚಳುವಳಿಯು ನಂತರದಲ್ಲಿ ಪಾಳೇಗಾರಿ ಪದ್ಧತಿ, ರಾಜಪ್ರಭುತ್ವ, ದಿವಾನರ ಆಳ್ವಿಕೆಗಳ ವಿರುದ್ಧವಾಗಿ ಮತ್ತು ಪ್ರಜಾಸತ್ತಾತ್ಮಕವಾದ ಚುನಾಯಿತ ಸರ್ಕಾರದ ಸ್ಥಾಪನೆಗಾಗಿನ ಚಳುವಳಿಯಾಗಿ ಬೆಳೆಯಿತು. ಈ ಪ್ರಕ್ರಿಯೆಯಲ್ಲಿ, ದಶರಥ ದೇಬ್‌ನಂತಹ ಜೆ.ಎಸ್.ಎಸ್.ನ ಮುಖಂಡರು ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದರು. 'ಜನಶಿಕ್ಷಣ' ಚಳುವಳಿಯು ಅಪಾಯಕರವೆಂದು ಬಗೆದ ಆಳರಸರು ಜೆ.ಎಸ್.ಎಸ್.ನ ಉಸಿರುಕಟ್ಟಿಸುವ ಮತ್ತು ಮೊಳಕೆಯಲ್ಲೇ ಚಿವುಟಿ ಹಾಕುವ ಯತ್ನ ಮಾಡಿದರು. ಹೀಗಿದ್ದೂ, ಚಳುವಳಿ ಬೆಳೆಯಿತು, ಜನತಾ ವಿಮೋಚನಾ ಚಳುವಳಿಯ ರೂಪ ಪಡೆದು ತ್ರಿಪುರಾದ ಸಮಾಜದಲ್ಲಿ ಆಳವಾದ ಪ್ರಭಾವ ಬೀರಿತು, ಹಿಂದೆಂದೂ ಕಾಣದ ಹೋರಾಟಗಳಿಗೆ ನಾಂದಿ ಹಾಡಿತು, ತಳಹದಿ ನಿರ್ಮಿಸಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

1940ರ ಆರಂಭದಲ್ಲಿ, ಕಮ್ಯುನಿಸ್ಟ್ ಪಕ್ಷವು ಮುಖ್ಯವಾಗಿ ತ್ರಿಪುರಾದಲ್ಲಿ ಕೆಲವೇ ಕೆಲವು ಪಟ್ಟಣವಾಸಿ ಆದಿವಾಸಿಯೇತರ ಜನರ ನಡುವೆ ಇತ್ತು. ಈ ಅವಧಿಯಲ್ಲಿ, ಎರಡನೇ ವಿಶ್ವಯುದ್ಧ ಮುಗಿದ ನಂತರ, 1945ರ ಡಿಸೆಂಬರ್ 27 ರಂದು 12 ಆದಿವಾಸಿ ಯುವಕರು ಒಟ್ಟುಗೂಡಿ ಜನಶಿಕ್ಷಾ ಸಮಿತಿ(ಜೆ.ಎಸ್.ಎಸ್.) ಸ್ಥಾಪಿಸಿದರು. ಸಾಕ್ಷರತೆಯ ಪ್ರಚಾರ ಮಾತ್ರವಲ್ಲದೇ ಆದಿವಾಸಿ ಸಮಾಜದಲ್ಲಿ ಪ್ರಚಲಿತವಾಗಿದ್ದ ಶೋಷಣೆ, ಅನೇಕ ಸಾಮಾಜಿಕ ಪಿಡುಗುಗಳು ಮತ್ತು ಮೂಢನಂಬಿಕೆಗಳ ವಿರುದ್ಧ ಹೋರಾಟ ಮಾಡುವುದೂ ಕೂಡ ಜೆ.ಎಸ್.ಎಸ್.ನ ಉದ್ದೇಶವಾಗಿತ್ತು. ಯುದ್ಧದ ಸಮಯದಲ್ಲಿ ಅತಿ ಹೆಚ್ಚಾಗಿದ್ದ ಕಳ್ಳಸಂತೆ ಮತ್ತು ಕಳ್ಳ ದಾಸ್ತಾನಿನಂತಹ ವಿಷಯಗಳನ್ನು ಕೂಡ ಅದು ಕೈಗೆತ್ತಿಕೊಂಡಿತು. ಜೆ.ಎಸ್.ಎಸ್. ನೂರಾರು(ಒಂದು ಅಂದಾಜಿನ ಪ್ರಕಾರ 488) ಪ್ರಾಥಮಿಕ ಶಾಲೆಗಳನ್ನು ತೆರೆಯಿತು. ಶಾಲೆಯ ನಿರ್ಮಾಣ ಮಾಡುವ ಮತ್ತು ನಡೆಸುವ ಕೆಲಸವನ್ನು ತಾವೇ ಮುಂದೆ ನಿಂತು ಮಾಡುವುದಾಗಿ ದೊಡ್ಡ ಸಂಖ್ಯೆಯ ಬಡ ಆದಿವಾಸಿ ಹಳ್ಳಿಗರು ಸಿದ್ಧರಾದರು. ಜೆ.ಎಸ್.ಎಸ್. ವಿಶಾಲ ದೃಷ್ಟಿಕೋನ ಹೊಂದಿತ್ತು ಮತ್ತು ಸಂಕುಚಿತ ಪಂಥವಾದದಿಂದ ಬಾಧಿತವಾಗಿರಲಿಲ್ಲ. ಅದರ ಪರಿಣಾಮವಾಗಿ, ಗಣನೀಯ ಸಂಖ್ಯೆಯ ಆದಿವಾಸಿಯೇತರ ವಿಚಾರವಂತರು ಕೂಡ ಈ ಚಳುವಳಿಯನ್ನು ಸೇರಿದರು. ಈ ಜನಶಿಕ್ಷಾ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷವು ಕ್ರಿಯಾಶೀಲವಾಗಿ ತೊಡಗಿಕೊಂಡಿತು.

ಈ ಸಾಕ್ಷರತಾ ಚಳುವಳಿಯು ನಂತರದಲ್ಲಿ ಪಾಳೇಗಾರಿ ಪದ್ಧತಿ, ರಾಜಪ್ರಭುತ್ವ, ದಿವಾನರ ಆಳ್ವಿಕೆಗಳ ವಿರುದ್ಧವಾಗಿ ಮತ್ತು ಪ್ರಜಾಸತ್ತಾತ್ಮಕವಾದ ಚುನಾಯಿತ ಸರ್ಕಾರದ ಸ್ಥಾಪನೆಗಾಗಿನ ಚಳುವಳಿಯಾಗಿ ಬೆಳೆಯಿತು. ಈ ಪ್ರಕ್ರಿಯೆಯಲ್ಲಿ, ದಶರಥ ದೇಬ್‌ರಂತಹ ಜೆ.ಎಸ್.ಎಸ್. ನ ಮುಖಂಡರು ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದರು. 'ಜನಶಿಕ್ಷಣ' ಚಳುವಳಿಯು ಅಪಾಯಕರವೆಂದು ಬಗೆದ ಆಳರಸರು ಜೆ.ಎಸ್.ಎಸ್. ನ ಉಸಿರುಕಟ್ಟಿಸುವ ಮತ್ತು ಮೊಳಕೆಯಲ್ಲೇ ಚಿವುಟಿಹಾಕುವ ಯತ್ನ ಮಾಡಿದರು. ಹೀಗಿದ್ದೂ, ಚಳುವಳಿ ಬೆಳೆಯಿತು ಮತ್ತು ತ್ರಿಪುರಾದ ಸಮಾಜದಲ್ಲಿ ಆಳವಾದ ಪ್ರಭಾವ ಬೀರಿತು, ಹಿಂದೆಂದೂ ಕಾಣದ ಹೋರಾಟಗಳಿಗೆ ನಾಂದಿ ಹಾಡಿತು, ತಳಹದಿ ನಿರ್ಮಿಸಿತು.

ಜೆ.ಎಸ್.ಎಸ್. ನ ಚಟುವಟಿಕೆಗಳನ್ನು ಬಗ್ಗುಬಡಿಯಲು ನಾನಾ ರೀತಿಯ ಪ್ರಯತ್ನಗಳನ್ನು ಸರ್ಕಾರ ಮಾಡಿತು ಮತ್ತು ಅದರ ಮುಖಂಡರನ್ನು ಪ್ರತಿಬಂಧಕ ಕಾಯಿದೆ(ಪ್ರಿವೆಂಟಿವ್ ಡಿಟೆನ್ಷನ್ ಆಕ್ಟ್)ಯ ಅಡಿಯಲ್ಲಿ ಬಂಧಿಸಿತು. ಇಂತಹ ನಿರ್ಣಾಯಕ ಹಂತದಲ್ಲಿ, ಜೆ.ಎಸ್.ಎಸ್. ನ ಮುಖಂಡರು ಗುಪ್ತ ಸಭೆ ನಡೆಸಿದರು ಮತ್ತು 1948ರಲ್ಲಿ ಆದಿವಾಸಿಗಳ ರಾಜಕೀಯ ವೇದಿಕೆಯಾಗಿ 'ಗಣಮುಕ್ತಿ ಪರಿಷದ್'(ಜಿಎಂಪಿ – ಜನತಾ ವಿಮೋಚನಾ ಪರಿಷತ್ತು)ನ್ನು ಸ್ಥಾಪಿಸಲು ನಿರ್ಧರಿಸಿದರು. ಬಿಟ್ಟಿ ಚಾಕರಿ, ಬಡ್ಡಿಸಾಹುಕಾರರು ಮತ್ತು ವ್ಯಾಪಾರಿಗಳ ಶೋಷಣೆ, ಒಕ್ಕಲೆಬ್ಬಿಸುವಿಕೆ, ಕುಟಿಲ ಕೌಟುಂಬಿಕ ತೆರಿಗೆಗಳ ವಿರುದ್ಧ ಮತ್ತು ಸರ್ಕಾರ ಪ್ರಣೀತ ಭಯೋತ್ಪಾದನೆಯ ವಿರುದ್ಧ ಕೂಡ ಆದಿವಾಸಿ ಜನರನ್ನು ರಕ್ಷಿಸುವ ನಿಟ್ಟಿನಲ್ಲಿ ಜಿಎಂಪಿ ಕಾರ್ಯ ನಿರ್ವಹಿಸಿತು. ಜಿಎಂಪಿ ಸ್ಥಾಪನೆಯಲ್ಲಿ ಕಮ್ಯುನಿಸ್ಟ್ ಪಕ್ಷ ಸಹಾಯಹಸ್ತ ನೀಡಿತು.

ಪೋಲೀಸರು ಮತ್ತು ಸೇನೆಯ ದಾಳಿ ದಬ್ಬಾಳಿಕೆ ದೌರ್ಜನ್ಯ ಎದುರಿಸಲು ಪ್ರತಿಯೊಂದು ಆದಿವಾಸಿ ಹಳ್ಳಿಯಲ್ಲೂ ಜಿಎಂಪಿಯ ಘಟಕಗಳನ್ನು ರಚಿಸಲಾಯಿತು. 1948 ಆಗಸ್ಟ್ 15 ರಂದು, ಆದಿವಾಸಿ ಹಳ್ಳಿಯೊಂದರಲ್ಲಿ ಆದಿವಾಸಿ ಸಮುದಾಯದ ಸಾವಿರಾರು ಜನರನ್ನು ಅಣಿನೆರೆಸಿ ಬೃಹತ್ ಬಹಿರಂಗ ಸಭೆಯನ್ನು ನಡೆಸಲಾಯಿತು, ಮತ್ತು ಅಲ್ಲಿಂದ ಅಗರ್ತಲಾಗೆ ಕಾಲ್ನಡಿಗೆ ಜಾತಾ ಮಾಡಲಾಯಿತು. ಇಡೀ ಅಗರ್ತಲಾ ಆದಿವಾಸಿ ಜನಗಳಿಂದ ಕಿಕ್ಕಿರಿದು ತುಂಬಿಹೋಗಿತ್ತು. ಜನರ ಮತದಿಂದ ಸರ್ಕಾರ; ದಿವಾನರ ಆಳ್ವಿಕೆ ರದ್ದು ಮಾಡಿ; ಬಂಧಿತ ರಾಜಕೀಯ ಖೈದಿಗಳನ್ನು ಬೇಷರತ್ತಾಗಿ ಬಿಡುಗಡೆ ಮಾಡಿ; ಬಂಧನ ವಾರಂಟುಗಳನ್ನು ರದ್ದುಮಾಡಿ; ಪೋಲಿಸ್ ಹಿಂಸೆ ನಿಲ್ಲಿಸಿ; ವಿಚಾರಣೆ ಇಲ್ಲದೇ ಯಾರನ್ನೂ ಬಂಧಿಸಬಾರದು ಮತ್ತು ಇಂಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಗಳನ್ನು ಕೂಗಿದರು. ಅದೊಂದು ಸಮರಶೀಲ ಪ್ರತಿಭಟನಾ ಸಭೆಯಾಗಿತ್ತು, ಜನರ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು ಮತ್ತು ಹೋರಾಟಕ್ಕೆ ಅವರನ್ನು ಸಿದ್ಧಗೊಳಿಸಿತ್ತು. ಹಳ್ಳಿಗಳ ಮೇಲೆ ಪೋಲಿಸರು ಮತ್ತು ಸೇನೆ ನಡೆಸಿದ ಸತತ ದಾಳಿಗಳ ನಂತರ ಜಿಎಂಪಿ ದುರ್ಬಲವಾಗಿದೆ ಎಂದು ಸರ್ಕಾರ ಯೋಚಿಸಿತ್ತು. ಆದರೆ ಈ ಬಹಿರಂಗ ಸಭೆ ಅದನ್ನು ಸುಳ್ಳಾಗಿಸಿತ್ತು. ಈ ಬಹಿರಂಗ ಸಭೆಯ ನಂತರ, ಜಿಎಂಪಿಯ ಸಾಮಾನ್ಯ ಜನರ ನಡುವೆ ಭಾರಿ ಜನಪ್ರಿಯತೆ ಗಳಿಸಿತು.

1948ರಲ್ಲಿ ತ್ರಿಪುರಾದಲ್ಲಿ ತೀವ್ರ ಆಹಾರ ಕೊರತೆಯ ಬಿಕ್ಕಟ್ಟಿತ್ತು. ಆ ದಿನಗಳಲ್ಲಿ, ಆದಿವಾಸಿ ಪ್ರದೇಶಗಳ ಇಡೀ ಆರ್ಥಿಕತೆಯನ್ನು ಸುಲಿಗೆಯ ಬಡ್ಡಿ ಸಾಹುಕಾರರು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ಜಿಎಂಪಿ ನೇತೃತ್ವದ ಆದಿವಾಸಿ ರೈತರು ತಮ್ಮ ಸುಲಿಗೆಯ ವಿರುದ್ಧ ಸತತವಾಗಿ ಹೋರಾಡಿದರು. ಆದಿವಾಸಿಗಳ ಪ್ರತಿಭಟನೆಯನ್ನು ಹತ್ತಿಕ್ಕಲು ದಿವಾನರ ಆಳ್ವಿಕೆಯು ಪೋಲಿಸರನ್ನು ಹರಿಬಿಟ್ಟಿದ್ದರು. ಗೋಲಘಾಟಿ ಪೋಲಿಸ್ ಗೋಲಿಬಾರಿನಲ್ಲಿ ಏಳು ಜನರು ಜೀವ ಕಳೆದುಕೊಂಡರು ಮತ್ತು ಅನೇಕರು ಗಾಯಗೊಂಡರು. ಕಳ್ಳ ದಾಸ್ತಾನುಗಾರರು, ಬಡ್ಡಿ ಸಾಹುಕಾರರು, ಭೂಗಳ್ಳರು, ಪೋಲಿಸ್ ಅಧಿಕಾರಿಗಳು ಮತ್ತು ಸ್ವತಂತ್ರ ಭಾರತದ ಆಡಳಿತಗಾರರ ನಡುವಿನ ಅಪವಿತ್ರ ನಂಟಿನ ಬಗ್ಗೆ ಆ ಘಟನೆಯು ಜನರ ಕಣ್ಣು ತೆರೆಸಿತು.

ಕಮ್ಯುನಿಸ್ಟರನ್ನು ಸದೆಬಡಿಯಲು ಮಾರ್ಚ್ 9, 1949ರಂದು ಮಿಲಿಟರಿ ಆಳ್ವಿಕೆಯನ್ನು ಸರ್ಕಾರವು ಹೇರಿತು. ಬಂಧನ ತಪ್ಪಿಸಿಕೊಳ್ಳಲು ಜಿಎಂಪಿ ಮುಖಂಡರು ಭೂಗತರಾದರು. ಮಾರ್ಚ್ 28, 1949ರಂದು, ಮೂರು ಆದಿವಾಸಿ ಹುಡುಗಿಯರನ್ನು, ಅವರು ತಿತುನ್ ಪದ್ಧತಿ(ಅಧಿಕಾರಿಗಳ ಸಾಮಾನುಗಳನ್ನು ಹೊರುವ ಬಿಟ್ಟಿ ಚಾಕರಿ)ಯನ್ನು ನಿರಾಕರಿಸಿದ ಕಾರಣಕ್ಕಾಗಿ, ಸೇನೆಯು ಅವರ ಮೇಲೆ ತೀರ ಹತ್ತಿರದಿಂದ ಗುಂಡುಹಾರಿಸಿ ಸಾಯಿಸಿತು. ಅವರು ತ್ರಿಪುರಾದ ಸಾಮೂಹಿಕ ಚಳುವಳಿಯಲ್ಲಿ ಹುತಾತ್ಮರಾದ ಮೊದಲ ಮಹಿಳೆಯರಾಗಿದ್ದರು. ಅವರ ಹತ್ಯೆ ಜನರನ್ನು ಇನ್ನಷ್ಟು ಕೆರಳಿಸಿತು.

ಸನ್ನಿವೇಶದ ಸ್ಥಿತಿಯನ್ನು ಅಂದಾಜು ಮಾಡಿದ ಜೆ.ಎಸ್.ಎಸ್. ಮುಖಂಡರು, ಪ್ರತಿರೋಧದ ಹೋರಾಟ ಮಾಡುವುದೊಂದೇ ಉಳಿದ ದಾರಿ ಎಂಬ ತೀರ್ಮಾನಕ್ಕೆ ಬಂದರು. ತೆಲಂಗಾಣ ಜನರ ಮತ್ತು ಕಾಕದ್ವೀಪದ ರೈತರ ಸಶಸ್ತ್ರ ಹೋರಾಟದ ಸಂಗತಿ ಕೂಡ ಜಿಎಂಪಿಯನ್ನು ಹುರಿದುಂಬಿಸಿತ್ತು. ಗೆರಿಲ್ಲಾ ಪಡೆಯನ್ನು ರಚಿಸಲು ಮತ್ತು ಅದಕ್ಕೆ ಅಗತ್ಯವಿರುವ ಶಸ್ತ್ರಾಸ್ತ್ರಗಳನ್ನು ಆದಿವಾಸಿಗಳ ಬಳಿಯಿಂದಲೇ ಪಡೆಯಬೇಕೆಂದು ತೀರ್ಮಾನ ಮಾಡಲಾಯಿತು. ಶಸ್ತ್ರಸಜ್ಜಿತ ಹೋರಾಟಗಳ ಜೊತೆಯಲ್ಲೇ, ರಾಜಪ್ರಭುತ್ವ ಮತ್ತು ಪಾಳೇಗಾರಿ ವ್ಯವಸ್ಥೆಯ ವಿರುದ್ಧದ ಸೈದ್ಧಾಂತಿಕ ಹೋರಾಟವನ್ನೂ ನಡೆಸಬೇಕೆಂದು ಮತ್ತು ಅದಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲೂ ಮಾರ್ಕ್ಸ್‌ವಾದ–ಲೆನಿನ್‌ವಾದದ ಪುಸ್ತಕಗಳು ಮತ್ತು ಕಿರುಹೊತ್ತಿಗೆಗಳ ಅಧ್ಯಯನವನ್ನು ಪ್ರೋತ್ಸಾಹಿಸಲಾಯಿತು. ಈ ಉದ್ದೇಶ ಸಾಧನೆಗಾಗಿ, ಕಾರ್ಯಕರ್ತರಿಗೆ ಮಾರ್ಕ್ಸ್‌ವಾದದ ತರಗತಿಗಳನ್ನು ನಡೆಸಲಾಯಿತು. ಆದಿವಾಸಿಗಳು ಕೋಮುವಾದಿ ಗಳಾಗದಂತೆ ಮತ್ತು ಬಂಗಾಳಿ–ವಿರೋಧಿ ಅಥವಾ ಆದಿವಾಸಿಯೇತರ–ವಿರೋಧಿ ಭಾವನೆಗಳನ್ನು ಬೆಳೆಸಿಕೊಳ್ಳದಂತೆ ವ್ಯಾಪಕ ಪ್ರಚಾರ ಕಾರ್ಯಕ್ರಮ ಕೈಗೊಳ್ಳಲಾಯಿತು. ಎಲ್ಲಾ ಕಾರ್ಯಕರ್ತರಿಗೂ ಕನಿಷ್ಠ ಸಾಕ್ಷರತೆಯನ್ನು ಕಡ್ಡಾಯ ಮಾಡಲಾಗಿತ್ತು.

ತ್ರಿಪುರಾದಲ್ಲಿ ಸಶಸ್ತ್ರ ಹೋರಾಟವು 1948ರಿಂದ 1950ರ ವರೆಗೆ ನಡೆಯಿತು. ಸಶಸ್ತ್ರ ಹೋರಾಟವು ಯಶಸ್ಸಿನ ಶಿಖರ ತಲುಪಿದ್ದಾಗ, ತ್ರಿಪುರಾ ರೈಫಲ್ಸ್‌ನ ಸಿಪಾಯಿಗಳು ತಮ್ಮ ಆಯುಧಗಳೊಂದಿಗೆ ಬಂದು ಗೆರಿಲ್ಲಾ ಪಡೆಯೊಂದಿಗೆ ಸೇರಿಕೊಂಡರು. ಸೇನೆಯಿಂದ ತೊರೆದುಬಂದ ಘಟನೆಯು ಜನರಲ್ಲಿ ಉತ್ಸಾಹ ಮೂಡಿಸಿತು ಮತ್ತು ಅವರ ಆತ್ಮವಿಶ್ವಾಸ ಹೆಚ್ಚಿಸಿತು. 1949 ಮತ್ತು 1950ರ ನಡುವೆ, ತ್ರಿಪುರಿ ಆದಿವಾಸಿ ಸಮುದಾಯದ ಪ್ರತಿಯೊಂದು ತಾಂಡಾದಲ್ಲಿಯೂ ಜಿಎಂಪಿ ಬೆಳೆಯಿತು. ಪ್ರತಿಯೊಂದು ತಾಂಡಾದಲ್ಲಿಯೂ ಒಬ್ಬ ಕಾರ್ಯದರ್ಶಿ, ಸಹ ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ಒಳಗೊಂಡಂತೆ ಒಂಭತ್ತು ಜನರ ಗ್ರಾಮ ಸಮಿತಿಗಳನ್ನು ರಚಿಸಲಾಯಿತು. ಈ ಸಂರಚನೆಯಿಂದ ದೊಡ್ಡ ಸಂಖ್ಯೆಯ ಕಾರ್ಯಕರ್ತರನ್ನು ಬೆಳೆಸಲು ಸಹಾಯವಾಯಿತು. ಜಿಎಂಪಿಯಲ್ಲಿ ರಾಜಕೀಯ ಹಾಗೂ ಮಿಲಿಟರಿ ಎಂಬ ಎರಡು ಅಂಗಗಳಿದ್ದವು. ದಶರಥ್ ದೇಬ್ ಅವರು ಮಿಲಿಟರಿ ಅಂಗದ ಸುಪ್ರೀಂ ಕಮ್ಯಾಂಡರ್ ಆಗಿದ್ದರು ಮತ್ತು ರಾಜಕೀಯ ಅಂಗದ ನಾಯಕರೂ ಆಗಿದ್ದರು. ಗೆರಿಲ್ಲಾ ಪಡೆಗಳಿಗಾಗಿ ಪಕ್ಷವು ರೂಪಿಸಿದ್ದ ನೀತಿಸಂಹಿತೆಯು ಶಿಸ್ತು ಮತ್ತು ಖಚಿತವಾದ ರಾಜಕೀಯ ತರಬೇತಿಗೆ ಹೆಚ್ಚು ಒತ್ತು ನೀಡಿತ್ತು. ಅವು ಈ ಕೆಳಗಿನಂತೆ ಇದ್ದವು: (1) ಮಿಲಿಟರಿ ಅಂಗದ ಮೇಲೆ ರಾಜಕೀಯ ಅಂಗದ ಪರಮಾಧಿಕಾರ ಇತ್ತು ಮತ್ತು ಕಾರ್ಯಾಚರಣೆಗಳಲ್ಲಿ ಮೇಲಿನ ತೀರ್ಮಾನವನ್ನು ಚಾಚೂ ತಪ್ಪದೆ ವಿಧೇಯತೆಯಿಂದ ಪಾಲಿಸಬೇಕಿತ್ತು; (2) ಜನರನ್ನು ಮುಖ್ಯವಾಗಿ ಮಹಿಳೆಯರನ್ನು ಗೌರವ ಮರ್ಯಾದೆಗಳಿಂದ ಮತ್ತು ವಿನಯದಿಂದ ಕಾಣಬೇಕು; (3) ರೈತರ ಆಸ್ತಿಪಾಸ್ತಿಗಳ ಮುಟ್ಟುಗೋಲು ಮತ್ತು ನಾಶ ಮಾಡುವುದರ ಮೇಲೆ ನಿಷೇಧ ಮತ್ತು ರೈತರೊಂದಿಗೆ ನ್ಯಾಯಯುತವಾಗಿ ವ್ಯವಹರಿಸಬೇಕು ಮತ್ತು (4) ಸೆರೆಸಿಕ್ಕವರನ್ನು ಕೆಟ್ಟದಾಗಿ ನಡೆಸಿಕೊಳ್ಳಬಾರದು. ಈ ನೀತಿಸಂಹಿತೆ ಕುರಿತು ಗೆರಿಲ್ಲಾಗಳಿಗೆ ತರಗತಿ ನಡೆಸಲಾಯಿತು. ಗೆರಿಲ್ಲಾಗಳು ಕೋನೇ ಪಕ್ಷ ವಾರಕ್ಕೊಮ್ಮೆಯಾದರೂ ರಾಜಕೀಯ ತರಗತಿಗಳಲ್ಲಿ ಭಾಗವಹಿಸುವುದು ಕಡ್ಡಾಯವಾಗಿತ್ತು. 'ಹಳ್ಳಿಯ ಬಡವರಿಗೆ' ಎಂಬ ಲೆನಿನ್ ಅವರ ಪುಸ್ತಕವೂ ಒಳಗೊಂಡಂತೆ ಓದುವುದು ಕಡ್ಡಾಯವಾಗಿತ್ತು. ಹೀಗೆ ಗೆರಿಲ್ಲಾಗಳನ್ನು ರಾಜಕೀಯವಾಗಿ ಸಂವೇದನಾ ಶೀಲರನ್ನಾಗಿ ಮಾಡಲಾಗುತ್ತಿತ್ತು.

ಗೆರಿಲ್ಲಾಗಳು ಈ ಆದೇಶಗಳನ್ನು ಚಾಚೂ ತಪ್ಪದೇ ಪಾಲಿಸಿದರು ಮತ್ತು ಅದರ ಪರಿಣಾಮವಾಗಿ, ಜಿಎಂಪಿಯು ಆದಿವಾಸಿ ಜನಗಳ ಮಧ್ಯೆ ಅಸಾಧಾರಣವಾದ ಜನಪ್ರಿಯತೆ ಗಳಿಸಿತು. ಬಂಗಾಳಿ ಮುಸ್ಲಿಮರ ದೊಡ್ಡ ವಿಭಾಗವೂ ಜಿಎಂಪಿಯನ್ನು ಬೆಂಬಲಿಸಿತು. ದೇಶದ ವಿಭಜನೆ ಕೂಡ ಬಂಗಾಳಿ ಮುಸ್ಲಿಮರು ಮತ್ತು ಆದಿವಾಸಿ ಜನರ ನಡುವಿನ ಬಹುಕಾಲದ ಸಂಬಂಧಗಳನ್ನು ಛಿದ್ರಗೊಳಿಸಲಾಗಲಿಲ್ಲ.



ದಶರಥ ದೇಬ್ –1946ರಲ್ಲಿ

ಹಲವಾರು ಹಳ್ಳಿಗಳಲ್ಲಿ ಜಿಎಂಪಿಯು ಜನತಾ ಸರ್ಕಾರವನ್ನು ರಚಿಸಿತು. ವಿವಾದಗಳನ್ನು ಪರಿಹರಿಸಿ ಮತ್ತು ನ್ಯಾಯ ಒದಗಿಸಲು ನ್ಯಾಯ ಪಂಚಾಯಿತಿ ಸಮಿತಿಗಳನ್ನು ರಚಿಸಲಾಯಿತು. ಬಿಟ್ಟಿ ಚಾಕರಿಯನ್ನು ನಿಷೇಧಿಸಲಾಯಿತು ಮತ್ತು ಭೂ ಹಿಡುವಳಿಗಳಿಗೆ ಮಿತಿ, ಭೂಮಿಯ ಗೇಣಿ ಹಾಗೂ ಮರು ಗೇಣಿ ದರಗಳನ್ನು, ಬಡ್ಡಿ ದರಗಳನ್ನು ನಿಗದಿ ಮಾಡಲಾಯಿತು. ಜಾತಿ ತಾರತಮ್ಯವನ್ನು ನಿಷೇಧಿಸಲಾಯಿತು. ಬಹುಪತ್ನಿತ್ವ, ಬಾಲ್ಯವಿವಾಹ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ, ವಿಪರೀತ ಹೆಂಡ ಕುಡಿತ, ಮೂಢನಂಬಿಕೆಗಳ ವಿರುದ್ಧ ಮತ್ತು ಮಹಿಳೆಯರನ್ನು ಮಾಟಗಾತಿಯೆಂದು ಹಣೆಪಟ್ಟಿ ಕಟ್ಟುವುದು ಮುಂತಾದವುಗಳನ್ನು ನಿಷೇಧಿಸಲು ಸುದೀರ್ಘವಾದ ನಿಯಮಗಳನ್ನು ರಚಿಸಲಾಯಿತು. ಈ ನಿಯಮಗಳನ್ನು ಕಾನೂನುಗಳೆಂದೆಣಿಸಿ ಪಾಲಿಸಿದರು. ಪಾಳೇಗಾರಿ ರಾಜಪ್ರಭುತ್ವಕ್ಕೆ ಮೂಲಭೂತವಾಗಿ ಭಿನ್ನವಾದ ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ಆಚರಣೆಗೆ ತರಲಾಯಿತು.

ಈ ಸಾಮೂಹಿಕ ಹೋರಾಟಗಳ ಒತ್ತಡದ ಅಡಿಯಲ್ಲಿ, ತ್ರಿಪುರಾವು ವಿಧ್ಯುಕ್ತವಾಗಿ ಅಕ್ಟೋಬರ್ 1949ರಲ್ಲಿ ಭಾರತದೊಂದಿಗೆ ವಿಲೀನವಾಯಿತು. ಆದರೆ ಹಳೆಯ ಪಾಳೇಗಾರಿ ಶಕ್ತಿಗಳು ಹೊರಹೊಮ್ಮುತ್ತಿದ್ದ ಬಂಡವಾಳಶಾಹಿ ವರ್ಗದೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರವನ್ನು ತಮ್ಮ ಹಿಡಿತದಲ್ಲೇ ಉಳಿಸಿಕೊಂಡವು. ಪಾಳೇಗಾರಿ ಹಾಗೂ ಬಂಡವಾಳಶಾಹಿಗಳ ವಿರುದ್ಧ ಏಕಕಾಲದಲ್ಲಿ ಹೋರಾಟ ಮಾಡದೇ ಆದಿವಾಸಿ ಸಮುದಾಯ ಮತ್ತು ಕಾರ್ಮಿಕ ವರ್ಗವನ್ನು ವಿಮೋಚನೆಗೊಳಿಸಲು ಸಾಧ್ಯವಿಲ್ಲ ಎಂದು ಜೆ.ಎಸ್.ಎಸ್. ಮತ್ತು ಜಿಎಂಪಿ ಮುಖಂಡರು ಮನಗಂಡರು.

ವಿಲೀನದ ನಂತರ, ಜಿಎಂಪಿ ಮತ್ತು ಕಮ್ಯುನಿಸ್ಟರ ಮೇಲಿನ ದಾಳಿಗಳು ಇನ್ನೂ ಮುಂದುವರಿದವು, 'ಕೆಲವೇ ದಿನಗಳಲ್ಲಿ ಕಮ್ಯುನಿಸ್ಟರನ್ನು ಬಲಿಹಾಕಬೇಕು' ಎಂದು ಸರ್ಕಾರ ಘೋಷಿಸಿತು. ಗುಡ್ಡಗಾಡು ಪ್ರದೇಶಗಳ ಒಳಗಡೆಯಲ್ಲಿ ಕೂಡ ಮಿಲಿಟರಿ ಕ್ಯಾಂಪುಗಳನ್ನು ನೆಲೆಗೊಳಿಸಲಾಯಿತು ಮತ್ತು ಹಲವಾರು ಹಳ್ಳಿಗಳನ್ನು ಸುಟ್ಟು ಭಸ್ಮ ಮಾಡಲಾಯಿತು. ಮಿಲಿಟರಿ ಭಯೋತ್ಪಾದನೆಯ ನಡುವೆಯೂ, ಯುವಜನರು ಜಿಎಂಪಿಯನ್ನು ಬೆಂಬಲಿಸಿದರು ಮತ್ತು ಅದರ ಕಣ್ಣು ಕಿವಿಗಳಾಗಿ ಕಾರ್ಯ ನಿರ್ವಹಿಸಿದರು. ಸರ್ಕಾರದ ವಿರುದ್ಧದ ಜನರ ಪ್ರತಿರೋಧಕ್ಕೆ ಅವರು ನಾಯಕತ್ವ ನೀಡಿದರು. ಕೆಲವೇ ತಿಂಗಳುಗಳೊಳಗೆ, ಜಿಎಂಪಿ ಎಷ್ಟರಮಟ್ಟಿಗೆ ಬೆಳೆಯಿತೆಂದರೆ ಭೂಗತ ಮುಖಂಡರು ಮತ್ತು ಕಾರ್ಯಕರ್ತರು ಹಾಡುಹಗಲೇ ಹಳ್ಳಿಗಳಲ್ಲಿ ಬಹಿರಂಗವಾಗಿ ತಿರುಗಾಡಲು ಸಾಧ್ಯವಾಯಿತು.

ಪುಟ 14 ನೋಡಿ

ಒಂದು ಮಿಲಿಯ ದಾಟಿದ ಕೊವಿಡ್ ಸೋಂಕಿತರ ಸಂಖ್ಯೆ

ಜುಲೈ 16 ರಂದು ಭಾರತದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಒಂದು ಮಿಲಿಯ (10 ಲಕ್ಷ) ದಾಟಿದೆ. ಪ್ರಾಣ ಕಳಕೊಂಡವರ ಸಂಖ್ಯೆ 25 ಸಾವಿರವನ್ನು ದಾಟಿದೆ.

ಭಾರತದಲ್ಲಿ ಮೊದಲ ಕೊವಿಡ್ ಸೋಂಕು ದಾಖಲಾದ್ದು ಜನವರಿ 30 ರಂದು. ಅಂದರೆ 175 ದಿನಗಳಲ್ಲಿ ಅದು ಒಂದು ಮಿಲಿಯ ತಲುಪಿದೆ. ಜಗತ್ತಿನಲ್ಲಿ ಅಮೆರಿಕ (ಸುಮಾರು 3.5 ಮಿಲಿಯ) ಮತ್ತು ಬ್ರೆಝಿಲ್ (1.97 ಮಿಲಿಯ (ನಂತರ ಮೂರನೇ ಸ್ಥಾನದಲ್ಲಿ ಮುಂದುವರೆಯುತ್ತಿದೆ.

ಜುಲೈ 16 ರ ರಾತ್ರಿ 10.45ಕ್ಕೆ ಒಟ್ಟು ಸೋಂಕಿತರ ಸಂಖ್ಯೆ 10,04,380, ಪ್ರಾಣ ಕಳಕೊಂಡವರ ಸಂಖ್ಯೆ 25619.

ಒಂದು ವಾರದ ಹಿಂದೆ, ಜುಲೈ 9 ರಂದು, ಒಟ್ಟು ಸೋಂಕಿತರ ಸಂಖ್ಯೆ 7,94,106 ಮತ್ತು ಸಾವುಗಳ ಸಂಖ್ಯೆ 21604.



ವ್ಯಂಗ್ಯಚಿತ್ರ: ಅರವಿಂದ ತೆಗ್ಗಿನಮಠ

ಕಳೆದ ಒಂದು ವಾರದಲ್ಲಿ ಪ್ರತಿದಿನ ಹೆಚ್ಚುತ್ತಿರುವ ಸೋಂಕುಗಳ ಪ್ರಮಾಣ, ಸಾವುಗಳ ಪ್ರಮಾಣ ಪ್ರತಿದಿನ ಹೊಸ ದಾಖಲೆಯನ್ನು ನಿರ್ಮಿಸಿಕೊಂಡು ಬಂದಿವೆ..


	ಹೊಸ ಸೋಂಕಿತರು	ಸಾವುಗಳು
ಜುಲೈ 10	26620	520
ಜುಲೈ 11	27715	540
ಜುಲೈ 12	28211	499
ಜುಲೈ 13	26967	536
ಜುಲೈ 14	29829	580
ಜುಲೈ 15	31438	641
ಜುಲೈ 16	34424	676

ಕಳೆದ ವಾರ ಕೇಂದ್ರ ಆರೋಗ್ಯಮಂತ್ರಿಗಳು ಭಾರತದಲ್ಲಿ ಸಾವುಗಳ ಪ್ರಮಾಣ ಬಹಳ ಕಡಿಮೆ ಎಂದು ಸಮಾಧಾನ ಹೇಳಿದ್ದರು. ಆದರೆ ಈ ವಾರದ ದೈನಂದಿನ ಸಾವುಗಳ ಸರಾಸರಿ 568, ಹೆಚ್ಚಿನ ದೇಶಗಳಿಗೆ ಹೋಲಿಸಿದರೆ ಹೆಚ್ಚೇ ಇದೆ. ಕೇವಲ ಮೂರು ದೇಶಗಳ ಸರಾಸರಿ ಭಾರತಕ್ಕಿಂತ ಹೆಚ್ಚಿದೆ: ಮೆಕ್ಸಿಕೊ(587), ಅಮೆರಿಕ(695) ಮತ್ತು ಬ್ರೆಝಿಲ್(1057).

ಆರೋಗ್ಯ ಮಂತ್ರಿಗಳು ಹೇಳಿರುವಂತೆ ಭಾರತದ ಜನಸಂಖ್ಯೆಗೆ ಹೋಲಿಸಿದರೆ ಮರಣ ಪ್ರಮಾಣ ಕಡಿಮೆಯೆಂಬುದು ನಿಜ. ಆದರೆ ಭಾರತದ ಸರಾಸರಿ ವಯಸ್ಸೂ ಕಡಿಮೆ ಇರುವುದರಿಂದ, ಅಂದರೆ ಯುವಜನರ ಪ್ರಮಾಣ ಹೆಚ್ಚಿರುವುದರಿಂದ ಈ ಮರಣದರವೂ ಸಮಾಧಾನ ಪಟ್ಟುಕೊಳ್ಳುವಂತದ್ದೇನೂ ಅಲ್ಲ ಎಂದು ಪರಿಣಿತರು ಹೇಳುತ್ತಿದ್ದಾರೆ.

ಕೆಲವು ದಿನಗಳ ಹಿಂದೆಯಷ್ಟೇ ಪ್ರಧಾನ ಮಂತ್ರಿಗಳು ಉತ್ತರ ಪ್ರದೇಶದ 'ಸಾಧನೆ'ಯನ್ನು ಹೊಗಳಿದ್ದರು. ಆದರೆ ಅಲ್ಲಿ ಪರಿಸ್ಥಿತಿ ಗಂಭಿರಗೊಳ್ಳುತ್ತಿದೆ,

ವೈದ್ಯಕೀಯ ಪತ್ರಿಕೆ 'ಲಾಂಸೆಟ್' ಪ್ರಕಾರ 30 ದೊಡ್ಡ ರಾಜ್ಯಗಳಲ್ಲಿ ಮಧ್ಯಪ್ರದೇಶ, ಬಿಹಾರ, ತೆಲಂಗಾಣ, ಝಾರ್ಖಂಡ, ಉತ್ತರಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ಒಡಿಶಾ ಮತ್ತು ಗುಜರಾತ್ ಪರಿಸ್ಥಿತಿ ಗಂಭೀರಗೊಳ್ಳುತ್ತಿದೆ.



ದೈನಂದಿನ ಸೋಂಕುಹೆಚ್ಚಳ 21000 ದಿಂದ 34000. ಸಮುದಾಯ ಹರಡಿಕೆ ಇಲ್ಲ !

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ದಕ್ಷಿಣ ಭಾರತದ 5 ರಾಜ್ಯಗಳಲ್ಲಿ ಜುಲೈ 16 ರ ರಾತ್ರಿ ಅಂಕೆ-ಸಂಖ್ಯೆಗಳು ಹೀಗಿವೆ:

	ಒಟ್ಟು ಸೋಂಕಿತರು	ಸಾವುಗಳು
ತಮಿಳುನಾಡು	156366	2236
ಕರ್ನಾಟಕ	51422	1038
ತೆಲಂಗಾಣ	41019	396
ಆಂಧ್ರಪ್ರದೇಶ	38044	492
ಕೇರಳ	10271	37

ಮೊದಲು ಕೊವಿಡ್-19 ಪ್ರಕರಣವನ್ನು ದಾಖಲಿಸಿದ ಚೀನಾದಲ್ಲಿ ಒಟ್ಟು ಸೋಂಕಿತರ ಸಂಕ್ಯೆ 85314, ಸಾವುಗಳ ಸಂಖ್ಯೆ 4644.

ಭಾರತದ ರಾಜಕಾರಣದಲ್ಲಿ ವಿಸ್ತರಣಾವಾದದ ಯುಗ...

ಕೋವಿಡ್ ಮಹಾಮಾರಿಯ ವಿರುದ್ಧ 21 ದಿನಗಳ 'ಮಹಾಬಾರತ ಸಮರ'ದ ರಣಕಹಳೆಯನ್ನು ಮಧ್ಯಪ್ರದೇಶದಲ್ಲಿ ಸರಕಾರ ಉರುಳಿಸುವ ಕಾರ್ಯಾಚರಣೆ ಮುಗಿದ ಕೂಡಲೇ ಊದಲಾಗಿತ್ತು. ಈಗ 175 ದಿನಗಳ ನಂತರ ಕೊವಿಡ್ ದಾಳಿ ಒಂದು ಮಿಲಿಯ ದಾಟುವ ವೇಳೆಗೆ ಅದು ರಾಜಸ್ಥಾನವನ್ನು ತಲುಪಿದೆ. ಅದು ಕೊವಿಡ್ ಸಮರದ ರೀತಿಯಲ್ಲಿ 'ಯಶಸ್ವಿ'ಯಾಗುವುದೋ ಇಲ್ಲವೋ ಇನ್ನೂ ಸ್ಪಷ್ಟವಾಗಿಲ್ಲ.

ಆದರೆ ಕಳೆದ ಆರು ವರ್ಷಗಳಲ್ಲಿ ಇಂತಹ 11 ಕಾರ್ಯಾಚರಣೆಗಳ ದಾಖಲೆ ಗಮನಾರ್ಹ. ಯಾವ ಭಕ್ತರುಗಳೂ ಆ ಸಾಧನೆಯನ್ನು ಬಹಿರಂಗವಾಗಿ ನೆನಪಿಸಿಕೊಳ್ಳುತ್ತಿಲ್ಲವಾದರೂ ಪ್ರಜಾಪ್ರಭುತ್ವವಾದಿಗಳು ನೆನಪಿಸಿಕೊಳ್ಳುತ್ತಾರೆ.

ಅರುಣಾಚಲ ಪ್ರದೇಶ (2014): ಬಿಜೆಪಿ 11 ಸೀಟುಗಳನ್ನು ಪಡೆದಿತ್ತು, ಕಾಂಗ್ರೆಸ್ 42. ಎರಡು ವರ್ಷಗಳ ನಂತರ ಬಿಜೆಪಿ 48, ಕಾಂಗ್ರೆಸ್ 1. ರಾಷ್ಟ್ರಪತಿ ಆಳ್ವಿಕೆ ಮತ್ತು ನಾಲ್ಕು ಮು.ಮಂ. ಬದಲಾವಣೆಗಳ ನಂತರ ಬಿಜೆಪಿ ಸರಕಾರ.

ಝಾರ್ಖಂಡ್(2014): 81 ಸೀಟುಗಳಲ್ಲಿ ಬಿಜೆಪಿ ಮೈತ್ರಿಕೂಟಕ್ಕೆ 35+5. 8 ಸೀಟುಗಳನ್ನು ಗೆದ್ದ ಜೆವಿಎಂ 2 ಕ್ಕೆ ಇಳಿಯಿತು.

ಬಿಹಾರ (2015): 243 ಸೀಟುಗಳಲ್ಲಿ ಬಿಜೆಪಿ ಮೈತ್ರಿಗೆ ಕೇವಲ 53+2. ಆರ್‌ಜೆಡಿ-ಜೆಡಿಯು-ಕಾಂಗ್ರೆಸ್ ಮೈತ್ರಿ ಕುಟಕ್ಕೆ 178. ಆದರೆ ಎರಡೇ ವರ್ಷಗಳಲ್ಲಿ ಬಿಜೆಪಿ-ಜೆಡಿಯು ಸರಕಾರ.

ಗೋವಾ(2017): ಬಿಜೆಪಿಗೆ 40ರಲ್ಲಿ 13. ಕಾಂಗ್ರೆಸ್‌ಗೆ 17 ಸ್ಥಾನಗಳಿದ್ದರೂ ಸರಕಾರ ಬಿಜೆಪಿಯದ್ದೇ, ತನ್ನ ವಿರುದ್ಧ ಸ್ಪರ್ಧಿಸಿ ಗೆದ್ದವರೊಂದಿಗೇ.

ಮಣಿಪುರ (2017): 60 ರಲ್ಲಿ 21, ಕಾಂಗ್ರೆಸಿಗೆ 28, ರಾಜ್ಯಪಾಲರ ಕೃಪಾಕಟಾಕ್ಷದಿಮದ ಸರಕಾರ ರಚನೆ.

ಮೇಘಾಲಯ(2018) 60 ಸಿಟುಗಳಲ್ಲಿ ಬಿಜೆಪಿಗೆ ಕೇವಲ 2. ಆದರೂ ರಾಜ್ಯಪಾಲರ ನೆರವಿನಿಂದ ಸರಕಾರದಲ್ಲಿ.

ಕರ್ನಾಟಕ(2018-19): ಎರಡು ಅಂಕಗಳ ನಾಟಕ ನಮಗೆ ಇನ್ನೂ ಮರೆತಿಲ್ಲ.

ಹರ್ಯಾಣ(2019):ಬಿಜೆಪಿಗೆ 90ರಲ್ಲಿ 40. ತನ್ನನ್ನು ತೀವ್ರವಾಗಿ ವಿರೋಧಿಸಿ ಗೆದ್ದ ಜೆಜೆಪಿ ಪಕ್ಷದ ಮುಖಂಡನನ್ನು ಉಪಮುಖ್ಯಮಂತ್ರಿ ಮಾಡಿ ಮತ್ತೆ ಅಧಿಕಾರ.

ಮಹಾರಾಷ್ಟ್ರ(2019):ಇಲ್ಲೂ ಎರಡಂಕಗಳ ನಾಟಕ. ಆದರೆ ಕರ್ನಾಟಕದ ಪುನರಾವರ್ತನೆ ಆಗಲಿಲ್ಲ. ಐದು ವರ್ಷಗಳಲ್ಲಿ ಮೊದಲ ಹಿನ್ನಡೆ-ಅದೂ ದೀರ್ಘಕಾಲದ ಮಿತ್ರಪಕ್ಷದಿಂದಲೇ.


ಮಧ್ಯಪ್ರದೇಶ: ಕರ್ನಾಟಕ ಮಾದರಿಯ 'ಯಶಸ್ವಿ' ಪುನರಾವರ್ತನೆ. ಕೊರೊನ ಹಾವಳಿಯ ನಡುವೆಯೇ ಅಧಿಕಾರ ಗ್ರಹಣ. ಪಕ್ಷಾಂತರ ಮಾಡಿದ ಕಾಂಗ್ರೆಸ್ ಮುಖಂಡನಿಗೆ ರಾಜ್ಯಸಭಾ ಸ್ಥಾನ.

ಈಗ ರಾಜಸ್ಥಾನ: ಇಲ್ಲೂ ಕರ್ನಾಟಕ/ ಮಧ್ಯಪ್ರದೇಶ ಮಾದರಿಯ ಪ್ರಯತ್ನ. ಫಲಿತಾಂಶ ಕಾದು ನೋಡಬೇಕು.

(ಕೃಪೆ: ನ್ಯೂಸ್‌ಕ್ಲಿಕ್, ಜುಲೈ 16)

ಇತ್ತೀಚೆಗೆ ಲಡಾಖ್‌ಗೆ ಭೇಟಿ ನೀಡಿದ ಪ್ರಧಾನ ಮಂತ್ರಿಗಳು ಇದೀಗ 'ವಿಸ್ತರಣಾವಾದ'ದ ಯುಗ ಮುಗಿದಿದೆ ಎಂದು ಸಾರಿದರು. ಇದು ಬಿಜೆಪಿಗೂ ಅನ್ವಯವಾಗಬಹುದೇ? ರಾಜಸ್ಥಾನದಲ್ಲಿ ಕಾದು ನೋಡಬೇಕಾಗಿದೆ.

ಖ್ಯಾತ ವ್ಯಂಗ್ಯಚಿತ್ರಕಾರ ಸತೀಶ ಆಚಾರ್ಯ ಅವರ ಈ ವ್ಯಂಗ್ಯಚಿತ್ರ ನೋಡಿ.



ಪ್ರಧಾನ ಮಂತ್ರಿಗಳು ವಿಶ್ವ ಯುವ ಕೌಶಲದಿನದ ಪ್ರಯುಕ್ತ ಯುವಜನರಿಗೆ ಸಂದೇಶ ನೀಡುತ್ತ "ಕೌಶಲ, ಮರುಕೌಶಲ, ಮೇಲ್ಮಟ್ಟದ ಕೌಶಲ" ಗಳಿಸಿಕೊಂಡು ಕೊವಿಡ್-19ರ ಪರಿಣಾಮದಿಂದಾಗಿ ಬದಲಾಗುತ್ತಿರುವ ವ್ಯವಹಾರ ವಾತಾವರಣಕ್ಕೆ ಹೊಂದಿಕೊಳ್ಳಿ ಎಂದು ಕರೆ ನೀಡಿದರು-ಸುದ್ದಿ

ಈ ಮಂತ್ರವನ್ನು ಸಾವಿರ ಬಾರಿ ಉಚ್ಚರಿಸಿ.
ನಿಮಗೆ ಒಳ್ಳೆಯ ನಿದ್ದೆ ಸಿಗುತ್ತದೆ.
ಇದು ನಾನು ಪ್ರಯತ್ನಿಸಿರುವ,
ಪರೀಕ್ಷಿಸಿರುವ ಸೂತ್ರ

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ನ್ಯೂ ಡೀಲ್ ಜಾರಿ ಇಂದು ಸುಲಭವಲ್ಲ



ಪ್ರಸಕ್ತ ಆರ್ಥಿಕ ಪರಿಸ್ಥಿತಿಯು ನವ ಉದಾರವಾದದ ಅಂತ್ಯದ ಸೂಚನೆ ಎಂಬುದನ್ನು ಒಂದು ಮುಂದುವರೆದ ಬಂಡವಾಳಶಾಹಿ ದೇಶದ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಗುರುತಿಸುವುದು ಬಹಳ ಮುಖ್ಯವಾದದ್ದು. ಆದರೆ, ಇಂತಹ ಒಂದು ಪರಿಸ್ಥಿತಿಯಿಂದ ಹೊರಬರಲು ಬ್ರಿಟನ್‌ನಲ್ಲಿ ನ್ಯೂಡೀಲ್ ನಂತಹ ಯೋಜನೆಯೊಂದನ್ನು ಜಾರಿಗೆ ತರಬಹುದು ಎಂಬ ಅವರ ನಂಬಿಕೆಯು ಹುರುಳಿಲ್ಲದ್ದು. ನ್ಯೂಡೀಲ್ ನಂತಹ ಯೋಜನೆಯನ್ನು ವಿರೋಧಿಸುವ ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಮಣಿಸಲು ಒಂದು ವರ್ಗ ಹೋರಾಟವನ್ನೇ ಮಾಡಬೇಕಾಗುತ್ತದೆ. ಇದನ್ನು ಅವರ ಕನ್ಸರ್ವೇಟಿವ್ ಪಕ್ಷವಂತೂ ಮಾಡಲಾರದು, ಲೇಬರ್ ಪಕ್ಷವೂ ಮಾಡಲಾರದು. ಒಂದು ಎಡ ಚಳುವಳಿ ಮಾತ್ರವೇ ಈ ಬೃಹತ್ಕಾರ್ಯವನ್ನು ಕೈಗೊಳ್ಳಬಲ್ಲದು. ಆದರೆ, ಆಗ ಬಂಡವಾಳಶಾಹಿ ವ್ಯವಸ್ಥೆಯು ಹೀಗೆಯೇ ಉಳಿಯಲಾರದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ದೂರದೃಷ್ಟಿಯುಳ್ಳ ಕೆಲವು ಮಂದಿ ಚಿಂತಕರು ಇದುವರೆಗೆ ಯಾವುದನ್ನು ಒಂದು ಸಲಹೆ ಎಂದು ಹೇಳುತ್ತಿದ್ದರೋ ಅದೀಗ ಬ್ರಿಟನ್ನಿನಲ್ಲಿ ಒಂದು ಅಧಿಕೃತ ನೀತಿಯಾಗಿ ಮಾರ್ಪಟ್ಟಿದೆ. ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಉದ್ದೇಶದಿಂದ, 1930ರ ದಶಕದಲ್ಲಿ ಅಮೆರಿಕದಲ್ಲಿ ರೂಸ್‌ವೆಲ್ಟ್ ಅವರು ಜಾರಿಗೊಳಿಸಿದ ನ್ಯೂ ಡೀಲ್ (New Deal) ಕಾರ್ಯಕ್ರಮದ ಮಾದರಿಯಲ್ಲಿ ತಮ್ಮ ಸರ್ಕಾರವು ಸಾರ್ವಜನಿಕ ಹೂಡಿಕೆಯ ಕ್ರಮವನ್ನು ಕೈಗೊಳ್ಳಲಿದೆ ಎಂದು ಬ್ರಿಟನ್ನಿನ ಪ್ರಧಾನ ಬೋರಿಸ್ ಜಾನ್ಸನ್ ಘೋಷಿಸಿದ್ದಾರೆ. ರೂಸ್‌ವೆಲ್ಟ್ ಅವರ ನ್ಯೂ ಡೀಲ್ ಕಾರ್ಯಕ್ರಮವನ್ನು ಜಾನ್ಸನ್ ನಿರ್ದಿಷ್ಟವಾಗಿ ಉಲ್ಲೇಖಿಸಿದ್ದಾರೆ. ಅಗತ್ಯಬಿದ್ದರೆ ಶ್ರೀಮಂತರ ಮೇಲೆ ತೆರಿಗೆಗಳನ್ನು ಹೆಚ್ಚಿಸುವ ಇಂಗಿತವನ್ನೂ ಜಾನ್ಸನ್ ವ್ಯಕ್ತಪಡಿಸಿದ್ದಾರೆ. ಆದರೆ, ಈ ಘೋಷಣೆ ಮಾಡುವ ಸಂದರ್ಭದಲ್ಲಿ, "ನಾನು ಕಮ್ಯೂನಿಸ್ಟ್ ಅಲ್ಲ" ಎಂಬ ಮಾತುಗಳ ಮೂಲಕ ಜಾನ್ಸನ್ ತಮ್ಮ ಭಾಷಣವನ್ನು ಆರಂಭಿಸಿರುವುದು ತಮಾಷೆಯಾಗಿದೆ.

ಒಂದು ತೀವ್ರ ಬಿಕ್ಕಟ್ಟಿಗೆ ಒಳಗಾಗಿರುವ ನವ–ಉದಾರ ಬಂಡವಾಳಶಾಹಿಯು ಮುಂದೆ ಸಾಗಲು ದಾರಿಯೇ ಇಲ್ಲದ ಹಂತವನ್ನು ತಲುಪಿರುವುದನ್ನು ಮತ್ತು ಅದನ್ನು ಪುನಶ್ಚೇತನಗೊಳಿಸಲು ಸರ್ಕಾರದ ಹಸ್ತಕ್ಷೇಪದ ಅಗತ್ಯವಿದೆ ಎಂಬ ಅಂಶವನ್ನು ಗುರುತಿಸಿ ಅದನ್ನು ಒಪ್ಪಿಕೊಂಡಿರುವ ಬೋರಿಸ್ ಜಾನ್ಸನ್ ಅವರಿಗೆ ಪ್ರಶಂಸೆಗಳು ಸಲ್ಲುತ್ತವೆ. ಆದರೆ, ಭಾರತದಲ್ಲಿ ಮೋದಿ ಸರ್ಕಾರವು ನವ ಉದಾರ ಬಂಡವಾಳಶಾಹಿಯು ಬಿಕ್ಕಟ್ಟಿಗೆ ಒಳಗಾಗಿರುವ ಈ ಮೂಲಭೂತ ಅಂಶದ ಬಗ್ಗೆ ತನಗೆ ಏನೂ ಗೊತ್ತಿಲ್ಲ ಎಂಬಂತೆಯೇ ವರ್ತಿಸುತ್ತಿದೆ. ಕಿಸಬಾಯಿ ದಾಸರು ಹಾಡುವ ರೀತಿಯಲ್ಲಿ ಅದು ಈಗಲೂ "ಸಂಪತ್ತಿನ ಸೃಷ್ಟಿಕರ್ತ"ರನ್ನು ಪ್ರೋತ್ಸಾಹಿಸುವ ಅದೇ ಹಳೆಯ ಹಾಡನ್ನೇ ಮುರಿದ ಗ್ರಾಮಾಫೋನ್ ಒದರುವಂತೆ ಒದರುತ್ತಲೇ ಇದ್ದಾರೆ. ಅದೇನೇ ಇರಲಿ, ಈಗಿರುವ ಸಮಸ್ಯೆಯೆಂದರೆ, ಬೋರಿಸ್ ಜಾನ್ಸನ್ ಆಗಲಿ, ಅಥವಾ ಬೇರೆ ಯಾವುದೇ ಪಾಶ್ಚಿಮಾತ್ಯ ದೇಶದ ನಾಯಕನೇ ಇರಲಿ, ಈ ನ್ಯೂ ಡೀಲ್ ಜಾರಿಗೊಳಿಸುವುದು ಅಷ್ಟು ಸುಲಭವಲ್ಲ.

ಮೊಟ್ಟಮೊದಲಿಗೆ ನ್ಯೂ ಡೀಲ್ ಕಾರ್ಯಕ್ರಮವನ್ನು ಪ್ರಾರಂಭಿಸಿದ ಸಮಯದಲ್ಲಿ ಹಣಕಾಸು ಬಂಡವಾಳವು ಜಾಗತೀಕರಣ ಗೊಂಡಿರಲಿಲ್ಲ. ಬಂಡವಾಳವು ಆಗ ರಾಷ್ಟ್ರ–ಆಧಾರಿತವಾಗಿತ್ತು. ರಾಷ್ಟ್ರ–ಪ್ರಭುತ್ವ–ಬಲದ ಹಣಕಾಸು ಬಂಡವಾಳಗಳು ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಯಲ್ಲಿ ತೊಡಗಿದ್ದವು. ಹಾಗಾಗಿ, ಪ್ರತಿಯೊಂದು ರಾಷ್ಟ್ರ–ಪ್ರಭುತ್ವವೂ ತನ್ನ (ದೇಶದ) ಹಣಕಾಸು ಬಂಡವಾಳದ ಮೇಲೆ ಒಂದು ರೀತಿಯ ಹಿಡಿತ ಹೊಂದಿತ್ತು. ಇಡೀ ಬಂಡವಾಳಶಾಹಿ ವ್ಯವಸ್ಥೆಯನ್ನು ಸಂರಕ್ಷಿಸುವ ಸಲುವಾಗಿ ಅಗತ್ಯ ಬದಲಾವಣೆಗಳನ್ನು ಒಪ್ಪಿಕೊಳ್ಳುವಂತೆ ರಾಷ್ಟ್ರ–ಪ್ರಭುತ್ವವು ಹಣಕಾಸು ಬಂಡವಾಳದ ಮನವೊಲಿಸುವುದು ಸಾಧ್ಯವಿತ್ತು.

ವಸ್ತುಸ್ಥಿತಿ ಹಾಗಿದ್ದರೂ ಸಹ, ರೂಸ್‌ವೆಲ್ಟ್ ಜಾರಿಗೊಳಿದ ನ್ಯೂ ಡೀಲ್ ಯೋಜನೆಯನ್ನು ಅಮೆರಿಕದ ಹಣಕಾಸು ಬಂಡವಾಳವು ಬಲವಾಗಿ ವಿರೋಧಿಸಿತು. ಆರ್ಥಿಕ ಕುಸಿತದಿಂದ ಚೇತರಿಕೆಯಾಗುವಲ್ಲಿ ನ್ಯೂ ಡೀಲ್‌ನ ಕೊಡುಗೆಯು ಯಶಸ್ವಿಯಾದ ನಂತರವೂ ಈ ಕಾರ್ಯಕ್ರಮದಿಂದ (ನ್ಯೂ ಡೀಲ್) ಭಾಗಶಃ ಹಿಂದೆ ಸರಿಯುವಂತೆ ಅಮೆರಿಕದ ಹಣಕಾಸು ಬಂಡವಾಳವು ಆಡಳಿತದ ಮೇಲೆ ಒತ್ತಡಕ್ಕೆ ಹೇರಿತು. ಈ ಕಾರಣದಿಂದಾಗಿ, 1937ರಲ್ಲಿ ಅಮೆರಿಕ ಮತ್ತೊಮ್ಮೆ ಆರ್ಥಿಕ ಹಿಂಜರಿತಕ್ಕೆ ಸಿಲುಕಿತು. ಎರಡನೆಯ ಮಹಾಯುದ್ಧದ ಪೂರ್ವ ಸಿದ್ಧತೆಯಾಗಿ ಶಸ್ತ್ರಾಸ್ತ್ರ ಉತ್ಪಾದನೆ ಹೆಚ್ಚಾದ ಕಾರಣ, ಅಮೇರಿಕಾದ ಅರ್ಥವ್ಯವಸ್ಥೆಯು ಮಹಾ ಆರ್ಥಿಕ ಕುಸಿತದಿಂದ ಚೇತರಿಸಿಕೊಳ್ಳಲು ಸಾಧ್ಯವಾಗಿತ್ತು. ವಾಸ್ತವವಾಗಿ, ಶಸ್ತ್ರಾಸ್ತ್ರಗಳ ಮೇಲಿನ ವೆಚ್ಚವನ್ನು ಹೆಚ್ಚಿಸುವ ಮುನ್ನ, ಅಮೇರಿಕಾದಲ್ಲಿ, ಗ್ರಾಹಕ ಸರಕುಗಳ ಉತ್ಪಾದನಾ ವಲಯದಲ್ಲಿ ಸ್ವಲ್ಪ ಮಟ್ಟಿನ ಚೇತರಿಕೆಯಾಗಿತ್ತು. ಆದರೆ, ಮೂಲ ಸರಕುಗಳ (capital goods) ವಲಯವು ನೆಲ ಕಚ್ಚಿತ್ತು. ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಉಂಟಾದ ನಂತರ ಈ ವಲಯವು ಪುನಶ್ಚೇತನಗೊಂಡಿತು.

ಕೋಳಿಯನ್ನು ಕೇಳಿ ಮಸಾಲೆ ಅರೆಯುವಂತೆ, ಕಾರ್ಪೊರೇಟ್‌ಗಳ ಮಧ್ಯಸ್ತಿಕೆಯ ಹೊರತಾಗಿ, ಆರ್ಥಿಕ ಚಟುವಟಿಕೆಗಳ ಮಟ್ಟವನ್ನು ಉತ್ತೇಜಿಸಲು ಪ್ರಭುತ್ವವು ನೇರವಾಗಿ ಕೈಗೊಳ್ಳುವ ಯಾವುದೇ ಕ್ರಮವನ್ನೂ ಹಣಕಾಸು ಬಂಡವಾಳವು ಹಿಂದೆಂದಿಗಿಂತಲೂ ಹೆಚ್ಚು ಪ್ರಬಲವಾಗಿ ವಿರೋಧಿಸುತ್ತದೆ. ಪ್ರಭುತ್ವವೇ ನೇರವಾಗಿ ಬಂಡವಾಳ ಹೂಡಿಕೆ ಮಾಡುವುದರ ಬದಲಾಗಿ, ಕಾರ್ಪೊರೇಟ್‌ಗಳಿಗೆ ಪ್ರೋತ್ಸಾಹ–ಧನ ನೀಡುವುದು ಅಥವಾ ಅವರಿಗೆ ತೆರಿಗೆ ರಿಯಾಯಿತಿ ಕೊಡುವುದನ್ನು ಕಾರ್ಪೊರೇಟ್‌ಗಳು ಹೆಚ್ಚಾಗಿ ಬಯಸುತ್ತವೆ (ಇಂತಹ ಕ್ರಮಗಳು ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವಲ್ಲಿ ವಿಫಲ ವಾಗಿದ್ದರೂ ಸಹ).



ನ್ಯೂ ಡೀಲ್ ಕಾರ್ಯಕ್ರಮದ ಮಾದರಿಯಲ್ಲಿ ತಮ್ಮ ಸರ್ಕಾರವು ಕ್ರಮವನ್ನು ಕೈಗೊಳ್ಳಲಿದೆ ಎಂದು ಘೋಷಿಸಿರುವ ಬ್ರಿಟನ್ ಪ್ರಧಾನಿ

ಹಣಕಾಸು ಬಂಡವಾಳಕ್ಕೆ ಒದಗಿರುವ ಈ ಸ್ಥಿತಿಯು ಆಶ್ಚರ್ಯಪಡುವಂತಹದ್ದಲ್ಲ. ಏಕೆಂದರೆ, ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರವು ಅರ್ಥವ್ಯವಸ್ಥೆಯಲ್ಲಿ ನೇರ ಹಸ್ತಕ್ಷೇಪ ಮಾಡಿದರೆ (ಅಂದರೆ, ಉದ್ದಿಮೆಗಳನ್ನು ಆರಂಭಿಸಿ ಅವುಗಳನ್ನು ಸಮರ್ಥವಾಗಿ ನಡೆಸಿದರೆ) ಬಂಡವಾಳಶಾಹಿಗಳಿಗೆ ಇರುವ ಸಾಮಾಜಿಕ ಮನ್ನಣೆ–ಔಚಿತ್ಯಗಳು ಇಲ್ಲವಾಗುತ್ತವೆ. ಬಂಡವಾಳಗಾರರನ್ನು ಸಾಕುವುದು ನಿಜಕ್ಕೂ ಅಗತ್ಯವಿಲ್ಲ, ಏಕೆಂದರೆ, ಸರ್ಕಾರ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳು ಬಂಡವಾಳಗಾರರ ಕೆಲಸವನ್ನು ಉತ್ತಮವಾಗಿ ನಿರ್ವಹಿಸಬಲ್ಲವು ಎಂಬುದನ್ನು ಸೂಚಿಸುತ್ತದೆ ತಾನೇ.

ಎರಡನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಬಿಕ್ಕಟ್ಟಿಗೆ ಸಿಲುಕಿದ್ದ ಬಂಡವಾಳಶಾಹಿ ವ್ಯವಸ್ಥೆಯ ಅಸ್ತಿತ್ವವನ್ನು ಉಳಿಸುವ ಸಲುವಾಗಿ ಎಲ್ಲ ಬಂಡವಾಳಶಾಹಿ ದೇಶಗಳ ಸರ್ಕಾರಗಳೂ ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶಿಸಿದವು ಮತ್ತು ಬೇರೆ ಬೇರೆ ಉದ್ದಿಮೆಗಳನ್ನು ಸಾರ್ವಜನಿಕ ವಲಯದಲ್ಲಿ ಸ್ಥಾಪಿಸಿದವು. ಈ ಬೆಳವಣಿಗೆಯಿಂದಾಗಿ ಹಣಕಾಸು ಬಂಡವಾಳದ ಯಜಮಾನಿಕೆಗೆ ಧಕ್ಕೆಯುಂಟಾಯಿತು. ಇಂತಹ ಸನ್ನಿವೇಶದಲ್ಲಿ ಬೆದರಿಕೆಗೆ ಒಳಗಾದ ಹಣಕಾಸು ಬಂಡವಾಳವು ತನ್ನ ಪಾರಮ್ಯವನ್ನು ಪುನಃ ಸ್ಥಾಪಿಸುವ ಪ್ರಯತ್ನವನ್ನು ಪ್ರಾರಂಭಿಸಿತು. ಆ ಪ್ರಯತ್ನದ ಭಾಗವಾಗಿ, ಹಣಕಾಸು ಬಂಡವಾಳವು ಸಾರ್ವಜನಿಕ ವಲಯವನ್ನು ಕೀಳಾಗಿ (ನಷ್ಟ, ಸೋಮಾರಿತನ, ಅದಕ್ಷತೆ ಮುಂತಾಗಿ) ಪ್ರಚಾರದ ಮೂಲಕ ಬಿಂಬಿಸಿ ಅವುಗಳ ಹೆಸರು ಕೆಡಿಸುವ ಕೆಲಸದಲ್ಲಿ ತೊಡಗಿದೆ. ಇದೊಂದು ನವ ಉದಾರವಾದದ ಸಾಮಾನ್ಯ ಲಕ್ಷಣ. ಇಂತಹ ಸನ್ನಿವೇಶದಲ್ಲಿ, ಬೋರಿಸ್ ಜಾನ್ಸನ್, ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಬಗ್ಗೆ ಮಾತನಾಡಿರುವುದು ಮಹತ್ವಪೂರ್ಣವಾಗಿರುವುದರ ಜೊತೆಗೆ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯು ಕೊನೆಗಾಲದಲ್ಲಿರುವುದರ ಸೂಚನೆಯೂ ಆಗಿದೆ.

ನವ ಉದಾರ ಬಂಡವಾಳಶಾಹಿ ವ್ಯವಸ್ಥೆಯ ಅಸ್ತಿತ್ವವೇ ಅಲುಗಾಡುತ್ತಿರುವ ಇಂದಿನ ಸನ್ನಿವೇಶ ದಲ್ಲೂ ಹಣಕಾಸು ಬಂಡವಾಳವು ನ್ಯೂಡೀಲ್ ರೀತಿಯ ಯಾವುದೇ ಕಾರ್ಯಕ್ರಮ ಈಗ ಜಾರಿಯಾಗುವುದನ್ನು ತೀವ್ರವಾಗಿ ವಿರೋಧಿಸುತ್ತದೆ. ಈ ವಿರೋಧವು 1930ರ ದಶಕದಲ್ಲಿ ಇದ್ದುದಕ್ಕಿಂತ ಇಂದು ಹೆಚ್ಚು ಬಲವತ್ತಾಗಿದೆ. ಏಕೆಂದರೆ, ಪ್ರತಿ ರಾಷ್ಟ್ರ–ಪ್ರಭುತ್ವವೂ ಇಂದು ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಎದುರಿಸಬೇಕಾಗುತ್ತದೆ. 1930ರ ದಶಕದಲ್ಲಿ ರಾಷ್ಟ್ರ–ಪ್ರಭುತ್ವವು ಕೇವಲ "ತನ್ನದೇ" ಹಣಕಾಸು ಬಂಡವಾಳವನ್ನು ಮಾತ್ರ ಎದುರಿಸಬೇಕಾಗುತ್ತಿತ್ತು. ಹಣಕಾಸು ಬಂಡವಾಳವು ಜಾಗತೀಕರಣಗೊಂಡಿದೆ ಎಂಬುದರ ಅರ್ಥವ್ಯಾಪ್ತಿ ಏನೆಂದರೆ, ಹಣಕಾಸು ಬಂಡವಾಳದ ಹುಕುಂಗಳನ್ನು ಉಲ್ಲಂಘಿಸುವ ಯಾವುದೇ ದೇಶವು, ಕೊರತೆ ಬಜೆಟ್ ಸ್ಥಿತಿಯಲ್ಲಿದ್ದರೆ ಅಥವಾ ಶ್ರೀಮಂತರ ಮೇಲೆ ತೆರಿಗೆ ವಿಧಿಸಿದರೆ, ದೇಶದಲ್ಲಿ ಹೂಡಿಕೆಯಾದ ಬಂಡವಾಳವು ಹೊರ ಹರಿಯುವ ಅಪಾಯವನ್ನು ಮತ್ತು ಆದ್ದರಿಂದ ಉಂಟಾಗುವ ಆರ್ಥಿಕ ಬಿಕ್ಕಟ್ಟಿನ ಅಪಾಯವನ್ನು ಎದುರಿಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ (ನವ ಉದಾರ ಬಂಡವಾಳಶಾಹಿ ಪೂರ್ವದಲ್ಲಿ) ಇಂತಹ ಕ್ರಮಗಳಿಗೆ ಹಣಕಾಸು ಬಂಡವಾಳದ ವಿರೋಧವು ಕೇವಲ ರಾಜಕೀಯ ರೂಪದಲ್ಲಿ ಪ್ರಕಟವಾಗುತ್ತಿತ್ತು. ಆದರೆ, ಅದು ಈಗ ರಾಜಕೀಯ ರೂಪದಲ್ಲಿ ಪ್ರಕಟವಾಗುವುದರ ಜೊತೆಗೆ, ಬಂಡವಾಳದ ಹೊರ ಹರಿವಿನಂತಹ ಆರ್ಥಿಕ ದಾಳಿಯ ರೂಪವನ್ನೂ ಪಡೆಯುತ್ತದೆ.

ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಎದುರಿಸಬೇಕಾಗಿ ಬಂದಾಗ ಒಂದು ರಾಷ್ಟ್ರ–ಪ್ರಭುತ್ವವು ಬಲಹೀನವಾಗಿರುತ್ತದೆ. ಆ ಪ್ರಭುತ್ವವು ಒಂದು ವೇಳೆ ಜಾಗತಿಕ ಪ್ರಭುತ್ವವಾಗಿದ್ದರೆ, ಜಾಗತಿಕ ಹಣಕಾಸು ಬಂಡವಾಳವನ್ನು ಎದುರಿಸುವಲ್ಲಿ ಯಾವುದೇ ದೌರ್ಬಲ್ಯ ಇರುತ್ತಿರಲಿಲ್ಲ. ಆದರೆ, ಒಂದು ಜಾಗತಿಕ ಪ್ರಭುತ್ವದ ಸಂಭಾವ್ಯತೆ ಈಗ ಇಲ್ಲದ ಕಾರಣದಿಂದ, ಅಗತ್ಯವಾಗಿ ಬೇಕಾಗಿರುವುದು ಏನೆಂದರೆ, ಅನೇಕ ದೇಶಗಳು ಸುಸಂಘಟಿತವಾಗಿ, ಪರಸ್ಪರ ಒಪ್ಪಿಗೆಯಿಂದ, ಎಲ್ಲರೂ ಒಟ್ಟಿಗೇ ಮತ್ತು ಏಕ ಕಾಲದಲ್ಲಿ ನ್ಯೂ ಡೀಲ್‌ನಂತಹ ಯೋಜನೆಯನ್ನು ಜಾರಿಗೊಳಿಸುವ ರೀತಿಯ ಒಂದು ಬದಲಿ ಜಾಗತಿಕ ಪ್ರಭುತ್ವದ ಪರಿಕಲ್ಪನೆ. ಇದಾದರೂ ನವ ಉದಾರ ಬಂಡವಾಳಶಾಹಿ ವ್ಯವಸ್ಥೆಯ ಈಗಿನ ಏರ್ಪಾಟಿಗಿಂತ ಮುಂದಿಟ್ಟ ಒಂದು ಹೆಜ್ಜೆಯಾಗುತ್ತದೆ. ಆದರೆ, ಈ ವಿಷಯವನ್ನು ಮುಂದುವರಿದ ಬಂಡವಾಳಶಾಹಿ ದೇಶಗಳ ರಾಜಕೀಯ ನಾಯಕರುಗಳ ಮಾತಿರಲಿ, ದೂರದೃಷ್ಟಿಯುಳ್ಳ ಬೂರ್ಜ್ವಾ ಚಿಂತಕರೂ ಸಹ ಚರ್ಚಿಸುತ್ತಿಲ್ಲ.

ಹಾಗಾಗಿ, ಬ್ರಿಟನ್ ನಂತಹ ಒಂದೇ ಒಂದು ಮುಂದುವರಿದ ಬಂಡವಾಳಶಾಹಿ ದೇಶದ ಸರ್ಕಾರವು ನ್ಯೂ ಡೀಲ್ ನಂತಹ ಯೋಜನೆಯನ್ನು ಜಾರಿಗೊಳಿಸುವಾಗ ಬಂಡವಾಳವು ಓಡಿ ಹೋಗದಂತೆ ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿರಬೇಕಾಗುತ್ತದೆ ಮತ್ತು ಅದಕ್ಕನುಗುಣವಾಗಿ ಬಂಡವಾಳದ ಹೊರ ಹರಿವಿನ ಮೇಲೆ ನಿಯಂತ್ರಣ ಹೇರಬೇಕಾಗುತ್ತದೆ. ಆದರೆ, ಲಂಡನ್ ನಗರದಲ್ಲಿ ತಳ ಊರಿರುವ ಆರ್ಥಿಕ ಹಿತಾಸಕ್ತಿಗಳ ಬಲ ಮತ್ತು ಮಹತ್ವಾಕಾಂಕ್ಷೆಗಳನ್ನು ಪರಿಗಣಿಸಿದಾಗ, ಬ್ರಿಟನ್

ಪುಟ 14 ನೋಡಿ

ನ್ಯೂ ಡೀಲ್ ಕಾರ್ಯಕ್ರಮವನ್ನು ಪ್ರಾರಂಭಿಸಿದ ಸಮಯದಲ್ಲಿ ಬಂಡವಾಳವು ರಾಷ್ಟ್ರ–ಆಧಾರಿತವಾಗಿತ್ತು. ಹಾಗಿದ್ದರೂ ಸಹ, ರೂಸ್‌ವೆಲ್ಟ್ ಜಾರಿಗೊಳಿದ ನ್ಯೂಡೀಲ್ ಯೋಜನೆಯನ್ನು ಅಮೆರಿಕದ ಹಣಕಾಸು ಬಂಡವಾಳವು ಬಲವಾಗಿ ವಿರೋಧಿಸಿತು.



ಒಂದು ಉದ್ಯೋಗ ಒಂದು ಹಕ್ಕು
ಬಂಡವಾಳಶಾಹಿ ಕೆಲಸ ಮಾಡುತ್ತಿಲ್ಲ



ತ್ರಿಪುರಾ: ಪ್ರಜಾಪ್ರಭುತ್ವ ಮತ್ತು ಆದಿವಾಸಿ ಹಕ್ಕುಗಳಿಗಾಗಿ ಹೋರಾಟ

ಪುಟ 11 ರಿಂದ

ಪೋಲಿಸರಿಗೆ ಸುದ್ದಿ ನೀಡುವವರು ಬಹುತೇಕ ಯಾರೂ ಇಲ್ಲದಂತಾಯಿತು. ಪ್ರತಿಯೊಂದು ಹಳ್ಳಿಯಲ್ಲೂ ಒಂದು ಅಡಗುದಾಣವಿತ್ತು, ಅಲ್ಲಿ ರಾಜಕೀಯ ತರಗತಿಗಳನ್ನು ನಿಯತಕಾಲಿಕವಾಗಿ ನಡೆಸಲಾಗುತ್ತಿತ್ತು. ಆ ದಿನಗಳ ಪ್ರಮುಖ ಲಕ್ಷಣವೆಂದರೆ, ನಿರಂತರವಾಗಿ ನಡೆಯುತ್ತಿದ್ದ ಸಭೆಗಳು ಮತ್ತು ರಾಜಕೀಯ ತರಗತಿಗಳಿಂದಾಗಿ ಜನರ ಪ್ರಜಾಸತ್ತಾತ್ಮಕ ಹಾಗೂ ರಾಜಕೀಯ ಪ್ರಜ್ಞೆ ಗಟ್ಟಿಯಾಯಿತು ಮತ್ತು ಚಳುವಳಿಯ ಬಗೆಗಿನ ಅವರ ಬದ್ಧತೆ ಕೂಡ ಬಲಗೊಂಡಿತು.

ಮಹಿಳೆಯರನ್ನು ಮಹಿಳಾ ಸಂಘಗಳಲ್ಲಿ ಮತ್ತು ಗೆರಿಲ್ಲಾ ಪಡೆಗಳಲ್ಲಿ ಸಂಘಟಿಸಲಾಯಿತು. ಆದಿವಾಸಿ ಮಹಿಳೆಯರು ಸುದ್ದಿವಾಹಕರಾಗಿ ಧೀರೋದಾತ್ತ ಪಾತ್ರವನ್ನು ವಹಿಸಿದರು, ಮುಖಂಡರ ಬಂಧನವನ್ನು ತಡೆದರು ಮತ್ತು ಭೂಗತರಾಗಿದ್ದವರನ್ನು ರಕ್ಷಿಸಿದರು. ಆದಿವಾಸಿ ಮಹಿಳೆಯರನ್ನು ಗುಂಪು ಮಾಡಿ ನಾರಿಸಮಿತಿಗಳನ್ನು ರಚಿಸಲಾಯಿತು. ಅವರು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಮಹಿಳಾ ಗೆರಿಲ್ಲಾ ಪಡೆಗಳಿಗೆ ಸೇರುವಂತೆ ಮಹಿಳೆಯರನ್ನು ಹುರಿದುಂಬಿಸುತ್ತಿದ್ದರು.

ಪ್ರತಿರೋಧ ಹೋರಾಟಗಳನ್ನು ನಡೆಸುವ ಸಂದರ್ಭದಲ್ಲಿ, ಜಿಎಂಪಿಯು ಸಾಂಸ್ಕೃತಿಕ ಚಳುವಳಿಯತ್ತ ಕೂಡ ಗಮನ ಹರಿಸಿತು. ಆದಿವಾಸಿಗಳ ಭಾಷೆಯಾದ ಕೊಕ್‌ಬರೋಕ್ ನಲ್ಲಿ ಹಲವಾರು ಹಾಡುಗಳನ್ನು ಸಂಯೋಜಿಸಲಾಯಿತು. ಹಾಡು ಮತ್ತು ನೃತ್ಯಗಳೊಂದಿಗೆ, ಆದಿವಾದಿ ಯುವಜನರು 'ಸಶಸ್ತ್ರ ಮತ್ತು ಸಾಂಸ್ಕೃತಿಕ ಹೋರಾಟ ಒಟ್ಟೊಟ್ಟಿಗೇ ನಡೆಯಲಿ'("ಬಂದೂಕ್ ಓ ಸಂಸ್ಕೃತಿ ಏಕ್ ಸಾಥೆ ಚಲವೊ") ಎಂಬ ಘೋಷಣೆಯೊಂದಿಗೆ ತಮ್ಮ ಸಂಸ್ಕೃತಿಯನ್ನು ಬೆಳೆಸಿದರು.

1950ರ ಮಧ್ಯಭಾಗದಲ್ಲಿ, ಜಿಎಂಪಿಯು ಇಡೀ ನಾಯಕತ್ವ ವಿಧ್ಯುಕ್ತವಾಗಿ ಕಮ್ಯುನಿಸ್ಟ್ ಪಕ್ಷ ಸೇರಲು ತೀರ್ಮಾನಿಸಿತು. ಆರಂಭದಲ್ಲಿ ಜನರಲ್ಲಿ ಗೊಂದಲಗಳಿದ್ದಾಗ್ಯೂ ತಮ್ಮ ತೀರ್ಮಾನಕ್ಕೆ ಕಾರಣಗಳೇನು ಎನ್ನುವುದನ್ನು ಜಿಎಂಪಿ ಮುಖಂಡರು ಯಶಸ್ವಿಯಾಗಿ ವಿವರಿಸಿದರು ಮತ್ತು ಜನರನ್ನು ಒಪ್ಪಿಸಿದರು. ಅಲ್ಲಿಂದ ಮುಂದೆ, ತ್ರಿಪುರಾದ ಜನ 'ಕೆಂಬಾವುಟ'ವನ್ನು ಹಾರಿಸಲು ತಮ್ಮದಾಗಿಸಿ ಕೊಳ್ಳಲು ಆರಂಭಿಸಿದರು.

ಸಶಸ್ತ್ರ ಪ್ರತಿರೋಧ ಚಳುವಳಿಯ ಇತಿಮಿತಿಗಳನ್ನು ಅರ್ಥ ಮಾಡಿಕೊಂಡ ಪಕ್ಷವು, ಆದಿವಾಸಿಗಳಲ್ಲಿ ನಿರಾಶಾ ಭಾವನೆ ಬೆಳೆಯುತ್ತಿರುವುದನ್ನು ಮತ್ತು ಕೆಚ್ಚು ಕಡಿಮೆಯಾಗುತ್ತಿರುವುದನ್ನು ಗುರುತಿಸಿ, 1951ರಲ್ಲಿ ಸಶಸ್ತ್ರ ಪ್ರತಿರೋಧವನ್ನು ಹಿಂದಕ್ಕೆ ಪಡೆಯಿತು. ಎಲ್ಲಾ ರಾಜಕೀಯ ಖೈದಿಗಳ ಬಿಡುಗಡೆ ಮಾಡಿಸಲು, ಬಂಧನ ವಾರಂಟುಗಳ ವಾಪಸಾತಿ ಮಾಡಿಸಲು ಮತ್ತು ದಾಳಿ ದಬ್ಬಾಳಿಕೆಗಳ ಕ್ರಮಗಳಿಗೆ ಅಂತ್ಯ ಹಾಡಲು ಪಕ್ಷಕ್ಕೆ ಸಾಧ್ಯವಾಯಿತು.

ಈ ಹಿನ್ನೆಲೆಯಲ್ಲಿ, 1952ರಲ್ಲಿನ ಚುನಾವಣೆಯಲ್ಲಿ ಪಕ್ಷ ಸ್ಪರ್ಧಿಸಿತು ಮತ್ತು ಎರಡೂ ಲೋಕಸಭಾ ಸ್ಥಾನಗಳಲ್ಲಿ ಮತ್ತು 30 ಎಲೆಕ್ಟೊರಲ್ ಕಾಲೇಜ್(ಚುನಾಯಿತ ಮಂಡಲಿ) ಸ್ಥಾನಗಳಲ್ಲಿ 21 ರಲ್ಲಿ ಪಕ್ಷ ಗೆಲ್ಲಲು ಸಾಧ್ಯವಾಯಿತು. ಪಕ್ಷವು ಹೊಂದಿದ್ದ ಜನ ಬೆಂಬಲವನ್ನು ಇದು ಬಿಂಬಿಸಿತು. ●



ನ್ಯೂ ಡೀಲ್ ಜಾರಿ ಇಂದು ಸುಲಭವಲ್ಲ

ಪುಟ 13 ರಿಂದ

ನಂತಹ ಆರ್ಥವ್ಯವಸ್ಥೆಗೆ ಈ ರೀತಿ ಮಾಡಲು ಸಾಧ್ಯವಿಲ್ಲ. ಒಂದು ಅರ್ಥವ್ಯವಸ್ಥೆಯು ತನ್ನ ಬಿಕ್ಕಟ್ಟಿನಿಂದ ಹೊರಬರಲು ಸೈದ್ಧಾಂತಿಕವಾಗಿ ಏನು ಅವಶ್ಯಕ ಎಂಬುದನ್ನು ಸೂಚಿಸಿದರೆ ಸಾಕು, ಆ ಅಂಶವೇ ಅದು ಬಿಕ್ಕಟ್ಟಿನಂದ ಹೊರಬರಲು ವಾಸ್ತವಿಕವಾಗಿ ಕ್ರಮಗಳನ್ನು ಕೈಗೊಳ್ಳುವುದಕ್ಕೂ ಕಾರಣವಾಗುತ್ತದೆ ಜಾನ್ ಮೇನಾರ್ಡ್ ಕೀನ್ಸ್ ನಂಬಿದ್ದರು. ಆದ್ದರಿಂದ, ಈ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳದೆ ನ್ಯೂಡೀಲ್ ಜಾರಿಗೊಳಿಸುವ ಯಾವುದೇ ಮಾತು ಕೇವಲ ಒಣ ಹರಟೆಯಾಗುತ್ತದೆ.

ಪ್ರಸಕ್ತ ಆರ್ಥಿಕ ಪರಿಸ್ಥಿತಿಯು ನವ ಉದಾರವಾದದ ಅಂತ್ಯದ ಸೂಚನೆ ಎಂಬುದನ್ನು ಬೋರಿಸ್ ಜಾನ್ಸನ್ ಗುರುತಿಸುವುದು ಬಹಳ ಮುಖ್ಯವಾದದ್ದು. ಆದರೆ, ಇಂತಹ ಒಂದು ಪರಿಸ್ಥಿತಿಯಿಂದ ಹೊರಬರಲು ಬ್ರಿಟನ್‌ನಲ್ಲಿ ನ್ಯೂಡೀಲ್ ನಂತಹ ಯೋಜನೆಯೊಂದನ್ನು ಜಾರಿಗೆ ತರಬಹುದು ಎಂಬ ಅವರ ನಂಬಿಕೆಯು ಹುರುಳಿಲ್ಲದ್ದು. ನ್ಯೂಡೀಲ್ ನಂತಹ ಯೋಜನೆಯನ್ನು ವಿರೋಧಿಸುವ ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಮಣಿಸಲು ಒಂದು ವರ್ಗ ಹೋರಾಟವನ್ನೇ ಮಾಡಬೇಕಾಗುತ್ತದೆ. ಬೋರಿಸ್ ಜಾನ್ಸನ್ ನೇತೃತ್ವದ ಒಂದು ಕನ್ಸರ್ವೇಟಿವ್ (ಸಂಪ್ರದಾಯ ಶರಣ) ಸರ್ಕಾರವು ಹಣಕಾಸು ಬಂಡವಾಳದ ಯಜಮಾನಿಕೆಯ ವಿರುದ್ಧವಾಗಿ ದುಡಿಯುವ ವರ್ಗವನ್ನು ಸಂಘಟಿಸಲು ಅಸಮರ್ಥವಾಗಿದೆ. "ಮಧ್ಯಮಪಂಥಿ" ನಾಯಕತ್ವದ ಲೇಬರ್ ಪಕ್ಷವೂ ಸಹ ವರ್ಗ ಹೋರಾಟವನ್ನು ಸಂಘಟಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಒಂದು ಎಡ ಚಳುವಳಿ ಮಾತ್ರವೇ ಈ ಬೃಹತ್ಕಾರ್ಯವನ್ನು ಕೈಗೊಳ್ಳಬಲ್ಲದು. ಆದರೆ, ಎಡ ಪಂಥವು ಈ ಕಾರ್ಯದಲ್ಲಿ ತೊಡಗಿದಾಗ, ತೀವ್ರಗೊಂಡ ವರ್ಗ ಹೋರಾಟದ ಪರಿಣಾಮವಾಗಿ ಬಂಡವಾಳಶಾಹಿ ವ್ಯವಸ್ಥೆಯು ಹಾಗೆಯೇ ಉಳಿಯುತ್ತದೆ ಎಂದು ಖಾತರಿಪಡಿಸಲಾಗದು. ಇಂತಹ ಒಂದು ಸಂಘರ್ಷವನ್ನು ಮುನ್ನಡೆಸಬಲ್ಲ ಶಕ್ತಿಯು ಈ ಕಾರ್ಯವನ್ನು ಕೈಗೊಳ್ಳುವ ಯಾವುದೇ ದೇಶದ ಅಥವಾ ದೇಶಗಳ ಬಂಡವಾಳಶಾಹಿಯನ್ನು ಅದರ ಗಡಿಯೊಳಗಿಂದ ಹೊರಗೆಳೆದು ಸಮಾಜವಾದದತ್ತ ಕೊಂಡೊಯ್ಯತ್ತದೆ.

ಈ ಸಂದರ್ಭದಲ್ಲಿ, 20ನೇ ಶತಮಾನದ ಆರಂಭದಲ್ಲಿದ್ದ ಪರಿಸ್ಥಿತಿಯ ಬಗ್ಗೆ ನಡೆದ ಒಂದು ಚರ್ಚೆಯನ್ನು ನೆನಪಿಸಿಕೊಳ್ಳಬಹುದು. ಲೂಟಿಕೋರ ಏಕಸ್ವಾಮ್ಯ ಬಂಡವಾಳಶಾಹಿಗಿಂತ, ಮುಕ್ತ ಪೈಪೋಟಿಯ ಬಂಡವಾಳಶಾಹಿಗೆ ಮರಳುವುದೇ ಲೇಸು ಎಂದು ಅನೇಕರು ಆ ಸಮಯದಲ್ಲಿ ವಾದಿಸಿದ್ದರು. ಈ ಅಭಿಪ್ರಾಯದ ವಿರುದ್ಧವಾಗಿ, ಈ ಮುಕ್ತ ಪೈಪೋಟಿಯ ಬಂಡವಾಳಶಾಹಿಯೇ ಏಕಸ್ವಾಮ್ಯಕ್ಕೆ ದಾರಿ ಮಾಡಿಕೊಟ್ಟಿರುವಾಗ, ಪುನಃ ಮುಕ್ತ ಪೈಪೋಟಿಯ ಬಂಡವಾಳಶಾಹಿಗೆ ಮರಳುವುದು ಗಡಿಯಾರವನ್ನು ಹಿಂದಕ್ಕೆ ತಿರುಗಿಸುವಂತಹ ಒಂದು ಸಂಪೂರ್ಣ ಅವಾಸ್ತವಿಕ ಕ್ರಮವಾಗುತ್ತದೆ ಎಂದು ಲೆನಿನ್ ವಾದಿಸಿದ್ದರು. ಆದ್ದರಿಂದ, ಏಕಸ್ವಾಮ್ಯ ಬಂಡವಾಳಶಾಹಿಯಿಂದ ಮುಂದೆ ಹೋಗುವ ಬಗ್ಗೆಯೇ ಯೋಚಿಸಬೇಕಾಗುತ್ತದೆ. ಮುಂದಿನ ಹೆಜ್ಜೆಯನ್ನು ಸಮಾಜವಾದದತ್ತಲೇ ಇಡಬೇಕಾಗುತ್ತದೆ.

ಪ್ರಸ್ತುತ ಸನ್ನಿವೇಶದ ಮೇಲಿನ ಚರ್ಚೆಯೂ ಸ್ವಲ್ಪ ಮಟ್ಟಿಗೆ ಅದೇ ರೀತಿಯಲ್ಲಿದೆ. ನವ ಉದಾರವಾದಕ್ಕೆ ಮುಂದಿನ ದಾರಿ ಕಾಣದಾಗಿರುವಾಗ, ಮುಂಗಾಣ್ಕೆಯಿರುವ ಬೂರ್ಜ್ವಾ ಬರಹಗಾರರು ಮತ್ತು ಅವರನ್ನು ಹಿಂಬಾಲಿಸುವ ಬೋರಿಸ್ ಜಾನ್ಸನ್ ಇವರುಗಳು ಯುದ್ಧೋತ್ತರ ಕಾಲದ ನಿಯಂತ್ರಣ ನೀತಿಯ ಬಂಡವಾಳಶಾಹಿಗೆ ಮರಳಬೇಕೆಂಬ ತಗಾದೆಯಲ್ಲಿದ್ದಾರೆ. ನ್ಯೂಡೀಲ್ ಎರಡನೆಯ ಮಹಾಯುದ್ಧಕ್ಕೆ ಮುನ್ನವೇ ಬಂದಿದ್ದರೂ ಸಹ, ಅದು ಈ ದಿಕ್ಕಿನ ಒಂದು ದಾರಿಗುರುತು(ಮಾರ್ಕರ್) ಆಗಿತ್ತು. ಆದರೆ ನವ-ಉದಾರವಾದವು ಯುದ್ಧಾನಂತರದ ನಿಯಂತ್ರಣ ನೀತಿಯ ಬಂಡವಾಳಶಾಹಿಯಿಂದಲೇ ಉದಯವಾದ ಕಾರಣದಿಂದಾಗಿ, ಬೋರಿಸ್ ಜಾನ್ಸನ್ ಮತ್ತಿತರರ ತಗಾದೆಯು ಗಡಿಯಾರವನ್ನು ಹಿಂದಕ್ಕೆ ತಿರುಗಿಸುವ ಕ್ರಮವೇ ಆಗುತ್ತದೆ. ನಿಯಂತ್ರಣ ನೀತಿಯ ಬಂಡವಾಳಶಾಹಿಯ ವೈರುಧ್ಯಗಳೇ ನವ ಉದಾರವಾದದ ಉದಯಕ್ಕೆ ಕಾರಣ. ಆ ನವ ಉದಾರವಾದವೇ ನಮ್ಮನ್ನು ಪ್ರಸಕ್ತ ಪರಿಸ್ಥಿತಿಗೆ ತಂದು ನಿಲ್ಲಿಸಿದೆ. ಗಡಿಯಾರವನ್ನು ಹಿಂದಕ್ಕೆ ತಿರುಗಿಸುವ ದಾರಿಯನ್ನು ಇತಿಹಾಸವು ಯಾವತ್ತೂ ತೋರಿಸಿಲ್ಲ. ಇಲ್ಲಿಂದ ಮುಂದಕ್ಕೆ ಹೋಗುವ ದಾರಿಯು ಬಂಡವಾಳಶಾಹಿಯನ್ನೇ ಮೀರಿ ಸಾಗುವ ಸಾಧ್ಯತೆಯನ್ನು ತೆರೆದಿಡುತ್ತದೆ. ●

ಭಾರತೀಯ ರೈಲ್ವೆಯ ಖಾಸಗಿಕರಣ ರಾಜಕೀಯ..... ಪುಟ 8 ರಿಂದ

ರೀತಿಯ ಮೀಸಲಾತಿಗಳು ರದ್ದಾಗಲಿವೆ.

3. 109 ಪ್ರಮುಖವಾದ ರೈಲ್ವೆ ನಿಲ್ದಾಣಗಳನ್ನು ಖಾಸಗಿಯವರಿಗೆ ವಹಿಸುವುದರಿಂದ ಪ್ರಯಾಣಿಕರಿಗೆ ಸೇವಾ ಸೌಲಭ್ಯ ಒದಗಿಸುವುದಕ್ಕಿಂತ ನಿಲ್ದಾಣದ ಸುತ್ತಮುತ್ತಲಿನ ಅಪಾರ ಪ್ರಮಾಣದ ಭೂಮಿಯನ್ನು ರಿಯಲ್ ಎಸ್ಟೇಟ್ ಉದ್ಯಮಕ್ಕೆ ಮತ್ತು ಕಮರ್ಷಿಯಲ್ ಕಾಂಪ್ಲೇಕ್ಸ್ ಮೊದಲಾದ ವಾಣಿಜ್ಯೀಕರಣಕ್ಕೆ ಬಳಸಲು ಅವರಿಗೆ ಅವಕಾಶ ನೀಡಿದಂತಾಗುತ್ತದೆ.

4. ರೈಲ್ವೆಯೆಂಬುದು ಭಾರತೀಯ ಬಡವರು ಮತ್ತು ಜನಸಾಮಾನ್ಯರು ಮತ್ತು ವಿಶೇಷವಾಗಿ ಶ್ರಮಜೀವಿಗಳ ನಿತ್ಯ ಬದುಕಿನ ಬಂಡಿಯಾಗಿದೆ. ಈಗ 109 ನಿಲ್ದಾಣಗಳ ಮೂಲಕ 151 ಖಾಸಗಿ ರೈಲುಗಳ ಓಡಾಟಕ್ಕೆ ಅವಕಾಶ ನೀಡುವುದರಿಂದ ಇದುವರೆಗೂ ವಿಕಲಚೇತನರು ಸೇರಿ ಇತರೆ ಎಲ್ಲಾ ಶ್ರಮಜೀವಿಗಳಿಗೂ ಮತ್ತು ಮಧ್ಯಮವರ್ಗದವರಿಗೂ ದೊರಕುತ್ತಿದ್ದ ಎಲ್ಲಾ ರಿಯಾಯಿತಿಗಳು ನಿಲ್ಲುವ ಸಾಧ್ಯತೆಗಳಿವೆ. ಅಲ್ಲದೆ ಸರಕು ಸಾಮಾಗ್ರಿಗಳ ಸಾಗಾಣಿಕೆ ವೆಚ್ಚಗಳು ಏರಿಕೆಯಾಗಲಿವೆ ಇದರಿಂದ ನಮ್ಮ ದೇಶದ ಕೃಷಿ ಮತ್ತು ಕೈಗಾರಿಕಾ ವಲಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

5. ರೈಲ್ವೆ ವ್ಯವಸ್ತೆಯನ್ನು ಜಗತ್ತಿನ ಎಲ್ಲೆಡೆಯು ಲಾಭದಾಯಕ ಎಂದು ಪರಿಗಣಿಸಿಲ್ಲ ಅದೊಂದು ಸೇವಾ ವಲಯ. ಈಗಾಗಲೇ ಯುನೈಟೆಡ್ ಕಿಂಗ್‌ಡಮ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಮತ್ತು ಅರ್ಜೆಂಟೈನಾ ದೇಶಗಳು ಇದೇ ರೀತಿ ಖಾಸಗಿ ರೈಲುಗಳನ್ನು ಆರಂಭಿಸಿದ್ದವು ಆದರೆ ಖಾಸಗಿಯವರಿಗೆ ಲಾಭವೇ ಪ್ರಧಾನವಾದುದ್ದರಿಂದ ಅಲ್ಲೆಲ್ಲಾ ಪ್ರಯಾಣಿಕರ ಸುರಕ್ಷತೆ ಬಗ್ಗೆ ಯಾವುದೇ ಕ್ರಮವಹಿಸಲಿಲ್ಲ ಇದರಿಂದಾಗಿ ವಿಪರೀಪ ರೈಲು ಅಪಘಾತಗಳು ಉಂಟಾಗಿ ಅಪಾರ ಸಾವು ನೋವುಗಳು ಉಂಟಾದವು. ಅರ್ಜಂಟೈನಾದಲ್ಲಿ ರೈಲ್ವೆ ಖಾಸಗೀಕರಣದಿಂದಾಗಿ ಸುಮಾರು 70 ಸಾವಿರ ನೌಕರರು ಕೆಲಸ ಕಳೆದುಕೊಂಡರು ಬ್ರಿಟಿನ್ ನಲ್ಲಿ ರೈಲ್ವೆಯನ್ನು ಪುನಃ ರಾಷ್ಟ್ರೀಕರಣ ಮಾಡಬೇಕೆಂಬ ಬೇಡಿಕೆ ಮುನ್ನಲೆಗೆ ಬಂತು. ಹೀಗಾಗಿ ಮೇಲ್ಕಂಡ ಎಲ್ಲಾ ದೇಶಗಳಲ್ಲೂ ಖಾಸಗಿಯವರಿಂದ ರೈಲುಗಳನ್ನು ನಿರ್ವಹಣೆ ಮಾಡುವುದು ಕಷ್ಟವಾಯಿತು, ಖಾಸಗಿಕರಣದಿಂದ ಅಲ್ಲಿನ ದೇಶಗಳ ಆರ್ಥಿಕತೆ ಮತ್ತು ಜನಸಾಮಾನ್ಯರಿಗೆ ಯಾವುದೇ ಪ್ರಯೋಜನವಾಗಲಿಲ್ಲ ಇದರಿಂದಾಗಿ ಮತ್ತೆ ಆ ಎಲ್ಲಾ ದೇಶಗಳು ರೈಲ್ವೆಯನ್ನು ಸರಕಾರದ ಸುಪರ್ದಿಗೆ ತೆಗೆದುಕೊಂಡು ರಾಷ್ಟ್ರೀಕರಣಗೊಳಿಸಿದವು.

ಖಾಸಗೀಕರಣಕ್ಕೆ ಮುಂದಾಗಿರುವ ಕೇಂದ್ರ ಸರಕಾರದ ವಾದ :

ಭಾರತೀಯ ರೈಲ್ವೆಯನ್ನು ಖಾಸಗಿಕರಿಸಿಬೇಕು ಎನ್ನುವ ವಾದಗಳನ್ನು 1991 ರಿಂದ ಆರಂಭಗೊಂಡ ನವ ಉದಾರೀಕರಣ ನೀತಿಗಳ ಭಾಗವಾಗಿ ಹಿಂದಿನಿಂದಲೂ ಹಲವು ಸರಕಾರಗಳು ಪ್ರಯತ್ನ ನಡೆಸಿದ್ದವು. ಕೇಂದ್ರ ಸರಕಾರ ರೈಲ್ವೆ ಸುಧಾರಣೆಗಾಗಿ ನೇಮಿಸಿದ್ದ ವಿವೇಕ್ ದೇವರಾಯ್ ಕಮಿಟಿಯು ರೈಲ್ವೆಯನ್ನು ಇಡೀಯಾಗಿ ಖಾಸಗಿಯವರಿಗೆ ಮಾರಾಟ ಮಾಡಲು ಶಿಫಾರಸ್ಸು ಮಾಡಿತ್ತು. ಆದರೆ ಭಾರತೀಯ ರೈಲ್ವೆಯು ಜಗತ್ತಿನಲ್ಲೇ ಅತ್ಯಂತ ವಿಶಾಲ ನೆಟ್ ವರ್ಕ ಹೊಂದಿರುವ ಅಪಾರ ಪ್ರಮಾಣದ ಆಸ್ತಿ ಮತ್ತು ಸಂಪತ್ತು ಹೊಂದಿರುವ ಸಾರ್ವಜನಿಕ ಉಧ್ಯಮವಾಗಿದೆ. ಹೀಗಾಗಿ ಇದನ್ನು ಯಾವುದೋ ಒಬ್ಬ ವ್ಯಕ್ತಿ ಮತ್ತು ಕಂಪನಿಯಿಂದ ಕೊಂಡು ಕೊಳ್ಳುವ ಸಾಮಾರ್ಥ್ಯ ಹೊಂದಿಲ್ಲ ಎನ್ನುವುದನ್ನು ಮನಗಂಡ ಸರಕಾರ ಇದೀಗ ಉತ್ಪಾದನೆ, ನಿರ್ವಹಣೆ, ಸಂಚಾರ ಮತ್ತು ಸಿಗ್ನಲ್ ವ್ಯವಸ್ಥೆ ಮತ್ತು ಸರಕು ಸಾಗಣೆ ಹೀಗೆ ವಿವಿಧ ಭಾಗಗಳಾಗಿ ವಿಂಗಡಿಸಿ ಖಾಸಗಿಯವರಿಗೆ ಮಾರಾಟ ಮಾಡುವ ಕುತಂತ್ರಗಳನ್ನು ರೂಪಿಸಿ ದೇಶಿ ಹಾಗೂ ವಿದೇಶಿ ಹೊಡಿಕೆದಾರರನ್ನು ಆಹ್ವಾನಿಸಿದೆ ಈ ಖಾಸಗಿಕರಣಕ್ಕೆ ಕೇಂದ್ರ ಸರಕಾರ ಹಲವು ಈ ಕೆಳಕಂಡ ಕಾರಣಗಳನ್ನು ಮುಂದು ಮಾಡಿದೆ.

ಸಾಮಾರ್ಥ್ಯದ ಕೊರತೆ:

ಹೌದು ಇವತ್ತಿನ ನಮ್ಮ ರೈಲ್ವೆಗಳು ಸರಿಯಾದ ಸಮಯಕ್ಕೆ ಸಂಚರಿಸುತ್ತಿಲ್ಲ. ಸ್ವಚ್ಚತೆ ಕಾಪಾಡುತ್ತಿಲ್ಲ. ಸಿಗ್ನಲಿಂಗ್ ವ್ಯವಸ್ಥೆ ಸರಿಯಿಲ್ಲ ಹೀಗಾಗಿ ಇದನ್ನು ಖಾಸಗಿಯವರಿಗೆ ವಹಿಸುವುದು ಸೂಕ್ತ ಎನ್ನುವುದು ಅದರ ಸಮರ್ಥನೆ ನಿಜ ನಾವು ಈ ವಾದವನ್ನು ನಾವು ಅಲ್ಲಗಳೆಯುತ್ತಿಲ್ಲ. ಆದರೆ ಇದಕ್ಕೆ ಕಾರಣ ಯಾರು ಕೇಂದ್ರ ಸರಕಾರವೇ ಅಲ್ಲವೇ? ಯಾಕೆಂದರೆ ಪ್ರತಿ ವರ್ಷ 4500 ಕೀಮೀ ರೈಲ್ವೆ ಹಳಿಗಳನ್ನು ನವೀಕರಣಮಾಡಬೇಕು, ರೈಲ್ವೆ ಸಿಗ್ನಲ್ ವ್ಯವಸ್ಥೆಯನ್ನು ಆಧುನೀಕರಣಗೊಳಿಸಬೇಕು ಆದರೆ ಇದಕ್ಕೆ ಬೇಕಾದ ಯಾವ ಹಣಕಾಸಿನ ನೆರವನ್ನು ಕೇಂದ್ರ ಸರಕಾರ ನೀಡುತ್ತಿಲ್ಲ. ಮಾತ್ರವಲ್ಲ ರೈಲ್ವೆಯಲ್ಲಿ ಖಾಲಿ ಇರುವ ಲಕ್ಷಾಂತರ ಹುದ್ದೆಗಳಿಗೆ ನೇಮಕಾತಿಗಳಿಗೆ ನಡೆಯುತ್ತಿಲ್ಲ. ಇದರ ಪರಿಣಾಮವಾಗಿ ಲೊಕೋ ಪೈಲೆಟ್‌ಗಳು, ಸ್ಟೇಷನ್ ಮಾಸ್ಟರ್‌ಗಳು ಮತ್ತು ಟಿಕೇಟ್ ಪರಿವೀಕ್ಷಕರು, ಗಾರ್ಡಗಳು 18–20 ಗಂಟೆ ಅವಧಿ ಮೀರಿ ಕೆಲಸ ಮಾಡುವಂತಹ ಪರಿಸ್ಥಿತಿ ಇದೆ. ಇದರಿಂದಾಗಿ ಅವರ ಆರೋಗ್ಯಗಳು ಹದಗೆಟ್ಟು ಹತ್ತಾರು ನೌಕರರು ಅಧಿಕಾರಿಗಳು ಸಾವಿಗೀಡಾಗುತ್ತಿದ್ದಾರೆ ಮಾತ್ರವಲ್ಲ ಹಲವು ನೌಕರರು ಈ ಒತ್ತಡ ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈಲ್ವೆ ಖಾಸಗೀಕರಣಗೊಂಡರೆ ಈ ಎಲ್ಲಾ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಳ್ಳುತ್ತವೆಯೇ ಹೊರತು ಪರಿಹಾರವಾಗಲ್ಲ. ಹೀಗಾಗಿ ರೈಲ್ವೆ ಇಲಾಖೆಯು ಈಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಖಾಸಗಿಕರಣ ಎನ್ನುವುದು ಮದ್ದಲ್ಲ ಎಂಬುದು ನಮ್ಮ ಸ್ಪಷ್ಟವಾದ ವಾದ. ಬದಲಾಗಿ ರೈಲ್ವೆ ಇಲಾಖೆಯನ್ನು ಲಾಭದ ದೃಷ್ಟಿಕೋನದಿಂದ ನೊಡದೇ ಅದೊಂದು ಸೇವಾ ವಲಯವೆಂದು ನೋಡಬೇಕು ಅದನ್ನು ಮತ್ತಷ್ಟು ಬಲಪಡಿಸಲು ಅಗತ್ಯವಿರುವ ಆರ್ಥಿಕ ನೆರವನ್ನು ಕೇಂದ್ರ ಸರಕಾರ ನೀಡಬೇಕು ಅಲ್ಲಿ ಖಾಲಿ ಇರುವ ಲಕ್ಷಾಂತರ ಹುದ್ದೆಗಳನ್ನು ಭರ್ತಿ ಮಾಡಿ ಅದನ್ನು ಮತ್ತಷ್ಟು ಪ್ರಯಾಣಿಕ ಸ್ನೇಹಿಯಾಗಿ ಪರಿವರ್ತಿಸುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

ಈ ಹಿನ್ನಲೆಯಲ್ಲಿ ನಮ್ಮ ದೇಶದ ಸ್ವಾತಂತ್ರ್ಯ ಚಳವಳಿ ಕೊಂಡಿಯಾಗಿ ಆರಂಭಗೊಂಡು ಸ್ವಾತಂತ್ರ್ಯ ಚಳುವಳಿಗೂ ತನ್ನದೇ ಕೊಡುಗೆ ನೀಡಿದ ಇತಿಹಾಸ ಭಾರತೀಯ ರೈಲ್ವೆಗೆ ಇದೆ. ಈಗಲೂ ದೇಶದ ಉದ್ದಗಲಕ್ಕೂ ವಿಸ್ತಾರ ಜಾಲ ಹೊಂದಿರುವ ಮತು ಅಪಾರ ಪ್ರಮಾಣದ ಸಂಪನ್ಮೂಲ ಹೊಂದಿರುವ ಮತ್ತು ಜನಸಾಮಾನ್ಯರೂ ಮತ್ತು ಮಧ್ಯಮವರ್ಗದ ಪ್ರಯಾಣಿಕರ ಅಚ್ಚುಮೆಚ್ಚಿನ ಸೇವಾ ವ್ಯವಸ್ಥೆಯಾಗಿ ಕೆಲಸ ಮಾಡುತ್ತಿರುವ ಮತ್ತು ನಮ್ಮ ದೇಶದ ಆರ್ಥಿಕತೆಯ ಜೀವನಾಡಿಯೂ ಆಗಿರುವ ರೈಲ್ವೆಯನ್ನು ಸಾರ್ವಜನಿಕ ಉದ್ಯಮವನ್ನಾಗಿ ಉಳಿಸುವ ಕರ್ತವ್ಯ ಮತ್ತು ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ●

ವಿದ್ಯುತ್ ಕಾಯ್ದೆ ತಿದ್ದುಪಡಿ 2020 ಏಕೆ ಬೇಡ?....

ಪುಟ 10 ರಿಂದ

Enforcement Authority: ECEA) ರಚನೆಯಾಗಲಿದೆ. ಎಲ್ಲಾ ವಿದ್ಯುತ್ ಉತ್ಪಾದನೆ ಮತ್ತು ವಿತರಣಾ ಕಂಪನಿಗಳ ನಡುವಿನ ವ್ಯಾಜ್ಯಗಳನ್ನು ಈ ಪ್ರಾಧಿಕಾರ ಬಗೆಹರಿಸಲಿದೆ. ಅಂದರೆ ರಾಜ್ಯಕ್ಕೆ ಸ್ಥಳೀಯವಾದ ವ್ಯಾಜ್ಯಗಳು ಸ್ಥಳೀಯವಾಗಿ ಬಗೆಹರಿಯುವ ಬದಲು ಎಲ್ಲಾದಕ್ಕೂ ECEA ಗೆ ಹೋಗಬೇಕಾಗುತ್ತದೆ.

ಈ ಬದಲಾವಣೆ ಏಕೆ?

ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಘಟಕಗಳು ಸದಾ ಚಾಲ್ತಿಯಲ್ಲಿರಬೇಕು. ಇವುಗಳಲ್ಲಿ ಹೊಸ ಖಾಸಗಿ ಕಂಪನಿಗಳು ಭಾರೀ ಪ್ರಮಾಣದಲ್ಲಿ ಬಂಡವಾಳ ಹೂಡಿವೆ. ಅವುಗಳ ಉತ್ಪಾದನಾ ವೆಚ್ಚ ಸಾಂಪ್ರದಾಯಿಕ ಉತ್ಪಾದನಾ ವಿಧಾನ (ಕಲ್ಲಿದ್ದಲು, ಜಲ ಇತ್ಯಾದಿ) ಗಳಿಗಿಂತ ಬಹಳ ಹೆಚ್ಚು. ಆದ್ದರಿಂದ ಅವುಗಳ ಜೊತೆ ಪೈಪೋಟಿ ನಡೆಸಲಾರವು. ಡಿಸ್ಕಾಂಗಳು ಅವುಗಳ ವೆಚ್ಚದ ದರದಲ್ಲಿ ವಿದ್ಯುತ್ ಖರೀದಿಸದಿದ್ದರೆ ಅವುಗಳನ್ನು ನಡೆಸುವುದು ಸಾಧ್ಯವಿಲ್ಲ. ಅದಕ್ಕಾಗಿ ವಿದ್ಯುತ್ ದರ ಏರಿಸಲು ಈ ತಿದ್ದುಪಡಿ ತರಲಾಗುತ್ತಿದೆ.

ತಮಿಳುನಾಡಿನ ರಾಮನಾಥಪುರಂ ನಲ್ಲಿರುವ ಅದಾನಿ ಕಂಪನಿ 648 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಹೊಂದಿದೆ. ಈ ಕಂಪನಿಯ 313 ಮೆಗಾವಾಟ್ ವಿದ್ಯುತ್ತನ್ನು ಪ್ರತಿ ಯೂನಿಟ್ ಗೆ 7.1 ರೂ ಮತ್ತು ಉಳಿದ 335 ಮೆಗಾವಾಟ್ ವಿದ್ಯುತ್ತನ್ನು ಪ್ರತಿ ಯೂನಿಟ್‌ಗೆ 5.10 ರೂ ಯಂತೆ ಖರೀದಿ ಮಾಡಲಾಗುತ್ತದೆ. ಆದರೆ ವಿದ್ಯುತ್‌ನ ಸದ್ಯದ ಮಾರುಕಟ್ಟೆ ದರ ಪ್ರತಿ ಯೂನಿಟ್‌ಗೆ 3 ರೂ ಮಾತ್ರವಿದೆ. ಸದಾ ಚಾಲ್ತಿಯಲ್ಲಿರಬೇಕು ಎಂಬ ಒಪ್ಪಂದದ ನಿಯಮವನ್ನು ಮುಂದಿಟ್ಟುಕೊಂಡು ತಮಿಳುನಾಡು ವಿದ್ಯುತ್ ಕಂಪನಿಗಳಿಗೆ ಹೆಚ್ಚಿನ ದರದಲ್ಲೇ ಖರೀದಿಸುವಂತೆ ಅದಾನಿ ಕಂಪನಿ ಒತ್ತಾಯಿಸುತ್ತಿದೆ.

ಈ ಹೊಸ ತಿದ್ದುಪಡಿಯಾಗಿ ಇಂತಹ ವ್ಯಾಜ್ಯಗಳು ECEA ಗೆ ಹೋದರೆ ಮತ್ತು ಅದು ಹೆಚ್ಚಿನ ಬೆಲೆಯಲ್ಲಿಯೇ ಖರೀದಿಸಬೇಕು ಎಂದು ತೀರ್ಪು ಇತ್ತರೆ ರಾಜ್ಯ ವಿತರಣಾ ಕಂಪನಿಗಳು ಅದೇ ದರದಲ್ಲಿ ಖರೀದಿಸಬೇಕು. ಅದರ ಭಾರ ಇಲ್ಲವೆ ಗ್ರಾಹಕರ ಮೇಲೆ ಹೇರಬೇಕು ಅಥವಾ ವಿತರಣಾ ಕಂಪನಿ ದಿವಾಳಿಯಾಗಬೇಕು. ಅಂತಿಮವಾಗಿ ವಿದ್ಯುತ್ ದರ ಏರಿಕೆ ಮಾಡಿ ಈ ಭಾರವನ್ನು ಗ್ರಾಹಕರ ಮೇಲೆ ಹೇರುವ ಸಾಧ್ಯತೆಯೇ ಹೆಚ್ಚು.

ರಾಷ್ಟ್ರೀಯ ನವೀಕರಿಸಬಹುದಾದ ಇಂಧನ ನೀತಿ:

ರಾಷ್ಟ್ರೀಯ ನವೀಕರಿಸಬಹುದಾದ ಇಂಧನ ನೀತಿಯಲ್ಲಿ 2022ರ ವೇಳೆಗೆ ನವೀಕರಿಸಬಹುದಾದ ಇಂಧನ ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಿ ಸಾಧಿಸಬೇಕಾದ ಗುರಿ 175 ಗಿಗಾವಾಟ್ ಎಂದು ಈಗಾಗಲೇ ನಿಗದಿಪಡಿಸಿದೆ. ಈ ಗುರಿಯನ್ನು 2030 ರ ವೇಳೆಗೆ 450 ಗಿಗಾವಾಟ್ ಎಂದು ಸಹ ನಿಗದಿ ಪಡಿಸಲಾಗಿದೆ. ಈ ಗುರಿಯನ್ನು ಮುಟ್ಟಬೇಕಾದರೆ ಖಾಸಗಿ ಬಂಡವಾಳ ಆಕರ್ಷಿಸಬೇಕು. ಅದಕ್ಕೆ ಅವರಿಗೆ ಬೇಕಾದ ದರ, ಮಾರುಕಟ್ಟೆ ಪಾಲು ಖಚಿತಪಡಿಸಬೇಕು. ಅಲ್ಲದೆ ಹವಾಮಾನ ಬದಲಾವಣೆ ತಡೆಯಲು ಪ್ಯಾರೀಸ್ ಒಪ್ಪಂದದ ಪ್ರಕಾರ ಕಲ್ಲಿದ್ದಲು, ಗ್ಯಾಸ್, ಅಣು ಮುಂತಾದ ಇಂಧನ–ಆಧಾರಿತ ವಿದ್ಯುತ್ ಉತ್ಪಾದನೆಯ ಪಾಲು ಕಡಿಮೆ ಮಾಡಬೇಕು ಎಂಬುದು ಸರಕಾರದ ಅಭಿಪ್ರಾಯ ಅದನ್ನು ಈ ತಿದ್ದುಪಡಿಗಳ ಮೂಲಕ ಸಾಧಿಸಲು ಪ್ರಯತ್ನಿಸಲಾಗುತ್ತಿದೆ.

ಭಾರತ ಸರ್ಕಾರದ ಈ ನೀತಿ ಜಾರಿ ಮಾಡಬೇಕಾದರೆ ರಾಜ್ಯಗಳಲ್ಲಿ ಈಗಾಗಲೇ ಇರುವ ಉಷ್ಣ ಉತ್ಪಾದನಾ ಕೇಂದ್ರಗಳನ್ನು ಬೃಹತ್ ಪ್ರಮಾಣದಲ್ಲಿ ಹಿಂತೆಗೆದು ಕೊಳ್ಳಬೇಕು. ಸ್ಥಗಿತಗೊಳಿಸಬೇಕು ಅಥವಾ ಕೆಡವಬೇಕಾಗುತ್ತದೆ. ಈ ಗುರಿಯನ್ನು ಮುಟ್ಟಲು ನವೀಕರಿಸಬಹುದಾದ ವಿದ್ಯುತ್ತನ್ನು ಖರೀದಿಸಲು ರಾಜ್ಯಗಳಿಗೆ ಒತ್ತಾಯ ಹೇರಲಾಗುತ್ತಿದೆ. ಇದರಿಂದ ಪ್ರಸ್ತುತ ಇಂಧನ–



ಆಧಾರಿತ ಥರ್ಮಲ್ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸಾಮರ್ಥ್ಯ ಬಳಕೆಯ ಪ್ರಮಾಣ (Prime Load Factor) 50% ಮಾತ್ರ ಇದ್ದದ್ದು ಮತ್ತಷ್ಟು ಕಡಿಮೆಯಾಗುತ್ತದೆ. ನವೀಕರಿಸಬಹುದಾದ ಇಂಧನ ಖರೀದಿಯ ಕಟ್ಟುಪಾಡುಗಳು ರಾಜ್ಯ ಸರಕಾರಗಳು ಮತ್ತು ವಿದ್ಯುತ್ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಆದ್ದರಿಂದ ಅವನ್ನು ಅವು ಜಾರಿ ಮಾಡದೆ ಹೋಗಬಹುದು ಎಂಬ ಆತಂಕದಿಂದ ಈ ತಿದ್ದುಪಡಿಗಳ ಮೂಲಕ, ರಾಜ್ಯ ಸರಕಾರಗಳ ಅಧಿಕಾರ ಕಿತ್ತುಕೊಂಡು ಕೇಂದ್ರಕ್ಕೆ ವರ್ಗಾಯಿಸಲಾಗುತ್ತಿದೆ.

RPO ನಿಗದಿಯ ಅಧಿಕಾರ

ವಿದ್ಯುತ್ ಕಾಯ್ದೆ 2003ರ ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ನವೀಕರಿಸಬಹುದಾದ ಮೂಲಗಳ ವಿದ್ಯುತ್ ಖರೀದಿಗೆ ಬಾಧ್ಯತೆಯನ್ನು (Renewable Purchase Obligation-RPO) ನಿಗದಿ ಪಡಿಸುವ ಅಧಿಕಾರ ಈಗ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ (SERC) ದ್ದು. ತಿದ್ದುಪಡಿಗಳ ಪ್ರಕಾರ ಈ ಅಧಿಕಾರವನ್ನು ಸಹ ಮತ್ತೆ ಕೇಂದ್ರಕ್ಕೆ ವರ್ಗಾಯಿಸಲಾಗಿದೆ. ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆ ಕಾರ್ಯಸಾಧ್ಯತೆ ಎಲ್ಲ ರಾಜ್ಯಗಳಲ್ಲಿ ಒಂದೇ ರೀತಿಯಾಗಿ ಇರುವುದಿಲ್ಲ. ಸೌರ ಮತ್ತು ಪವನ ಮೂಲದ ವಿದ್ಯುತ್ ಶಕ್ತಿಗೆ ಪ್ರಸರಣ ಮತ್ತು ನಷ್ಟಗಳ ವೆಚ್ಚ ಭರಿಸದಿರುವ ನೀತಿಯಿಂದ ಇಂತಹ ಕಾರ್ಯಸಾಧ್ಯತೆ ಕಡಿಮೆ ಇರುವ ರಾಜ್ಯಗಳಲ್ಲಿ ಕಡಿಮೆ ಹೂಡಿಕೆಯಾಗುತ್ತದೆ ಮತ್ತು ಅವು ಆರ್ಥಿಕವಾಗಿಯೂ ಬಳಲುತ್ತವೆ. ಮಾರುಕಟ್ಟೆ ವಿಕೃತವಾಗುತ್ತದೆ. ಇದೊಂದು ತಾರತಮ್ಯ ರಹಿತ ಮುಕ್ತ ಪ್ರವೇಶದ ನೀತಿಗೆ ವಿರುದ್ಧವಾಗಿರುತ್ತದೆ.

ವೆಚ್ಚ ಪ್ರತಿಬಿಂಬಿತ ದರ ಸೂಚಿ, ಸಬ್ಸಿಡಿ, ಕ್ರಾಸ್ ಸಬ್ಸಿಡಿ

2003ರ ಕಾಯಿದೆಯಲ್ಲಿ ದರ ಪಟ್ಟಿ ನಿರ್ಣಯವು ನಿಯಂತ್ರಕ ಆಯೋಗಗಳ ವ್ಯಾಪ್ತಿಯಾಗಿರುವುದರಿಂದ ಸರ್ಕಾರವು ದರ ಪಟ್ಟಿ ನಿರ್ಣಯದಿಂದ ದೂರವಿರಬೇಕು ಎಂಬ ಮೂಲಭೂತ ತತ್ವವನ್ನಾ ಧರಿಸಿದೆ. ಆದರೆ ಒಂದು ತಿದ್ದುಪಡಿಯ ಪ್ರಕಾರ ದರ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಇರಬೇಕು. ಇದನ್ನು ಜಾರಿ ಮಾಡಿದರೆ ಈಗ ಇರುವ ಸಬ್ಸಿಡಿ, ಕ್ರಾಸ್ ಸಬ್ಸಿಡಿ ಗಳನ್ನು ಒಂದು ಫಾರ್ಮುಲಾ ಅನ್ವಯ ತೆಗೆದುಹಾಕಬೇಕು ಎಂದು ಹೇಳಲಾಗಿದೆ. ಇದನ್ನು ಜಾರಿ ಮಾಡಬೇಕಾದರೆ ಎಸ್ಕಾಂ ಗಳು ಸಬ್ಸಿಡಿ ಯನ್ನು ತೆಗೆದು ಹಾಕದೆ ಬೇರೆ ದಾರಿಯಿಲ್ಲ. ಬಳಕೆದಾರರಿಗೆ ಸಬ್ಸಿಡಿ ಉಳಿಸಬೇಕಾದರೆ ರಾಜ್ಯ ಸರಕಾರ ಅದನ್ನು ಭರಿಸಬೇಕು.

ವಿದ್ಯುತ್ ಎಂಬುದು ಸಾಮಾಜಿಕ ಮತ್ತು ಆರ್ಥಿಕ ಮಹತ್ವದ ಒಂದು ಸೇವೆಯಾದ್ದರಿಂದ ಗೃಹ ಬಳಕೆಗೆ ಮತ್ತು ಕೃಷಿಗೆ ಉಚಿತವಾಗಿ ಅಥವಾ ಅತ್ಯಂತ ಕಡಿಮೆ ದರದಲ್ಲಿ ಕೊಡಬೇಕಾಗುತ್ತದೆ. ಈ ವೆಚ್ಚವನ್ನು ಭರಿಸಲು ಎಸ್ಕಾಂಗಳು ಸಾರಿಗೆ ಶುಲ್ಕ ಮತ್ತಿತರ ಶುಲ್ಕಗಳನ್ನು ಹಾಕಿ ಅದರ ಮುಖಾಂತರ ಬರುವ ಹಣದಿಂದ ಗೃಹಬಳಕೆ ಮತ್ತು ಕೃಷಿಗೆ ಒದಗಿಸುತ್ತವೆ. ಆದರೆ ಈಗ ದೊಡ್ಡ ದೊಡ್ಡ ಖರೀದಿದಾರರು ನೇರವಾಗಿ ಒಂದು ಸಣ್ಣ ಸಣ್ಣ ಸಾರಿಗೆ ಶುಲ್ಕವನ್ನು ಮಾತ್ರ ಕಟ್ಟಿ ಕೊಳ್ಳುತ್ತಾರೆ. ಕ್ರಾಸ್ ಸಬ್ಸಿಡಿಯನ್ನು ತೆಗೆದು ಹಾಕಲಾಗುತ್ತದೆ. ಇದರ ಪರಿಣಾಮ ಮತ್ತೆ ಎಸ್ಕಾಂಗಳು ಮತ್ತು ಜನತೆ ಎದುರಿಸಬೇಕಾಗುತ್ತದೆ.

ಸಬ್ಸಿಡಿ: ವಿದ್ಯುತ್ ಕಾಯ್ದೆ 2003 ಸೆಕ್ಷನ್ 65 ಕ್ಕೆ ಪ್ರಸ್ತಾವಿಸಿರುವ ತಿದ್ದುಪಡಿ ರೈತರಿಗೆ ಅತ್ಯಂತ ಹಾನಿಕಾರಕ ಮತ್ತು ಅಪಾಯಕಾರಿಯಾಗಿದೆ. ಈ ತಿದ್ದುಪಡಿಯಿಂದ ಡಿಸ್ಕಾಂ ರೈತನಿಂದ ಪೂರ್ಣ ವಿದ್ಯುತ್ ವೆಚ್ಚ ಪಡೆಯುತ್ತದೆ. ಸರ್ಕಾರವು ವಿದ್ಯುತ್ತನ್ನು ಸಬ್ಸಿಡಿ ಮಾಡಲು ಬಯಸಿದರೆ ಸರ್ಕಾರವು ರೈತರಿಗೆ ನೇರ ಫಲಾನುಭವ ವರ್ಗಾವಣೆಯನ್ನು (Direct Benefit Transfer) DBT ಮಾಡಬೇಕಾಗುತ್ತದೆ.

ಈ DBT ಯೋಜನೆ ಸಂಪೂರ್ಣ ಅಪ್ರಾಯೋಗಿಕ. ಏಕೆಂದರೆ ಹೆಚ್ಚಿನ ರಾಜ್ಯ ಸರ್ಕಾರಗಳು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿವೆ. ವಿದ್ಯುತ್ ಕಾಯ್ದೆ 2003 ರ ಅಸ್ತಿತ್ವದಲ್ಲಿರುವ ಸೆಕ್ಷನ್ 65 ರ ಅಡಿಯಲ್ಲಿ ರಾಜ್ಯ ಡಿಸ್ಕಾಂ ಗಳಿಗೆ ಅಗತ್ಯವಾದ ಸಬ್ಸಿಡಿಯನ್ನು ಪಾವತಿಸುತ್ತಿಲ್ಲ.

ಮೊದಲು ರೈತರು ಬಿಲ್ಲನ್ನು ಕಟ್ಟಿ ಹಲವು ತಿಂಗಳುಗಳ ನಂತರ ಸರ್ಕಾರ ಪಾವತಿಮಾಡುತ್ತದೆ. ಅದು ವಿಳಂಬವಾಗಬಹುದು. ಈಗ ರಾಜ್ಯದಲ್ಲಿ ಕೃಷಿಗೆ 37% ವಿದ್ಯುತ್ ಬಳಕೆಯಾಗುತ್ತದೆ.. ದೇಶದಲ್ಲಿ (ರಾಜ್ಯದಲ್ಲಿ 10 ಹೆಚ್.ಪಿ ಪಂಪ್ ಸೆಟ್ ಇರುವ 30 ಲಕ್ಷ ರೈತರಿಗೆ) ಉಚಿತ ವಿದ್ಯುತ್ ಕೃಷಿಗೆ ಕೊಡಲಾಗುತ್ತಿದೆ.

ದಂಡ

ರಾಜ್ಯ ಸರ್ಕಾರಗಳು ನವೀಕರಿಸಬಹುದಾದ ಇಂಧನದ ಹೆಚ್ಚಿನ ಗುರಿಗಳನ್ನು ತೆಗೆದುಕೊಳ್ಳುವಂತೆ ಮಾಡುವ ಏಕ ಪಕ್ಷೀಯ ಪ್ರಯತ್ನವನ್ನು ಈ ತಿದ್ದಪಡಿಗಳಲ್ಲಿ ಮಾಡಲಾಗಿದೆ. 2030 ರ ವೇಳೆಗೆ ಕೇಂದ್ರ ಸರ್ಕಾರವು 450 ಗಿಗಾವಾಟ್ ಸಾಧಿಸುವ ಹೆಚ್ಚಿನ ಗುರಿಯನ್ನು ನಿಗದಿ ಪಡಿಸಿದಾಗ ಕೇಂದ್ರ ಸರ್ಕಾರವು ರಾಜ್ಯ ಡಿಸ್ಕಾಂಗಳೊಂದಿಗೆ ಚರ್ಚಿಸಲಿಲ್ಲ. ಸಮಾಲೋಚನೆ ಮತ್ತು ಸಮ್ಮತಿಯನ್ನು ಪಡೆಯಲಿಲ್ಲ. ಆದರೂ ನವೀಕರಿಸಬಹುದಾದ ಖರೀದಿ ಕಟ್ಟು ಪಾಡುಗಳನ್ನು ಪೂರೈಸದ ಡಿಸ್ಕಾಂ ಗಳಿಗೆ ಶಿಕ್ಷೆ ವಿಧಿಸಲು ಕೇಂದ್ರ ಸರ್ಕಾರ ಕಠಿಣ ದಂಡವನ್ನು ಈ ತಿದ್ದುಪಡಿಗಳಲ್ಲಿ ವಿಧಿಸಿದೆ

ವಿತರಣ ಲೈಸೆನ್ಸ್, ಸಬ್‌ಲೈಸೆನ್ಸ್ ಮತ್ತು ಫ್ರಾಂಚೈಸಿ

ಈ ತಿದ್ದುಪಡಿಗಳ ಮೂಲಕ ಜಾರಿ ಮಾಡುವ ವಿತರಣಾ ವ್ಯವಸ್ಥೆಯು ಲೈಸೆನ್ಸಿ, ಸಬ್‌ಲೈಸೆನ್ಸಿ, ಫ್ರಾಂಚೈಸಿ ವಿಧಾನದ ಮೂಲಕ ಖಾಸಗಿ ವಲಯಕ್ಕೆ ಹಿಂಬಾಗಿಲಿನಿಂದ ಪ್ರವೇಶಕ್ಕೆ ಅನುವು ಮಾಡುತ್ತದೆ. ವಿತರಕ, ವಿತರಕ ಸಬ್ ಲೈಸೆನ್ಸ್, ಫ್ರಾಂಚೈಸಿ ಯ ಮೂರು ಹಂತಗಳ ವಿತರಣಾ ವ್ಯವಸ್ಥೆಯನ್ನು ಪ್ರಸ್ತಾವಿಸಲಾಗಿದೆ. ಖಾಸಗಿ ವಲಯದ ಸಬ್‌ಲೈಸೆನ್ಸ್ ದಾರರು ಲಾಭದಾಯಕ ಕ್ಷೇತ್ರ (ಕೈಗಾರಿಕಾ ಬಳಕೆದಾರರು) ಅಥವಾ (ಅನುಕೂಲಸ್ಥರು ಇರುವ) ಪ್ರದೇಶ ಗಳನ್ನು ಮಾತ್ರ ವಶಕ್ಕೆ ತೆಗೆದುಕೊಳ್ಳುವ ಅವಕಾಶವಿದೆ. ಇದರ ಮೂಲಕ ಡಿಸ್ಕಾಂಗಳ ಆದಾಯ ಇನ್ನಷ್ಟು ಕಡಿಮೆಯಾಗುತ್ತದೆ. ಲಾಭದಾಯಕವಲ್ಲದ ಕೃಷಿ ಮತ್ತು ಗೃಹ ಬಳಕೆಗೆ ಪೂರೈಕೆ ಮಾಡುವುದು ಇನ್ನೂ ಹೆಚ್ಚು ಕಷ್ಟವಾಗುತ್ತದೆ. ಸಬ್‌ಲೈಸೆನ್ಸ್ ದಾರರು ಇರುವಲ್ಲಿ ಸಹ ಬಳಕೆದಾರರ ಸಮರ್ಪಕ ಸೇವೆಗೆ ಯಾರು ಜವಾಬ್ದಾರರು ಎಂಬುದು ಸ್ಪಷ್ಟವಿಲ್ಲ.

ಕೊನೆಯ ಹಂತದಲ್ಲಿರುವ ಫ್ರಾಂಚೈಸಿಗಳಿಗೆ ಯಾವುದೇ ಲೈಸೆನ್ಸ್ ಅಗತ್ಯವಿಲ್ಲ. ವಿತರಣಾ ವ್ಯವಸ್ಥೆಯಲ್ಲಿ ಉದ್ಯೋಗಗಳನ್ನು ಕೈಗೊಳ್ಳಲು ಅಗತ್ಯವಾದ ವೃತ್ತಿಪರ ಪರವಾನಗಿ ಇರುವ ಮಾನವಶಕ್ತಿಯನ್ನು ತೊಡಗಿಸಿಕೊಳ್ಳಲು ಯಾವುದೇ ಕಾನೂನು ಬದ್ಧ ಬಾಧ್ಯತೆ ಇರುವುದಿಲ್ಲ. ಅಗ್ಗದ ದುಡಿಮೆ, ಮಾನವ ಶಕ್ತಿಯ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶವಷ್ಟೇ ಇಲ್ಲಿ ಕಾಣುತ್ತದೆ. ಅಸಮರ್ಪಕ ಕೆಲಸದ ಹೊಣೆಯನ್ನು ಹೊರಲು ಕಾರ್ಮಿಕರನ್ನು ಬಲಿಪಶುಗಳಾನ್ನಾಗಿ ಮಾಡಲಾಗುತ್ತದೆ.

ಖಾಸಗಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಕೇಂದ್ರ ಸರಕಾರ ವಿದ್ಯುತ್ ಆಯಿದೆ 2003ಕ್ಕೆ, ಇಷ್ಟು ತರಾತುರಿಯಲ್ಲಿ ವಿದ್ಯುತ್ ಕ್ಷೇತ್ರವನ್ನು ಇನ್ನಷ್ಟು ತೀವ್ರ ಬಿಕ್ಕಟ್ಟಿಗೆ ನೂಕುವ, ಈ ತಿದ್ದುಪಡಿಗಳನ್ನು ತರುತ್ತಿದೆ. ಆದರೆ ಇಷ್ಟರ ವರೆಗೆ ಖಾಸಗಿ ರಂಗದ ವಿದ್ಯುತ್ ಉತ್ಪಾದಕರ ಸಾಧನೆಗಳೇನು? 1.37 ಲಕ್ಷ ಕೋಟಿ ರೂ. ಬ್ಯಾಂಕಿನ ಸಾಲಪಾವತಿ ಬಾಕಿ ಮಾತ್ರ ಅವರ ಸಾಧನೆ. ಈ ಸಾಲಬಾಕಿಯ ಹೊರೆಯನ್ನು ರಾಜ್ಯ ಸರಕಾರ, ಎಸ್ಕಾಂ ಗಳು ಮತ್ತು ಬಡ ಬಳಕೆದಾರರಿಗೆ ವರ್ಗಾಯಿಸುವುದೇ ಈ ತಿದ್ದುಪಡಿಗಳ ಹಿಂದಿರುವ ಪ್ರಮುಖ ಉದ್ದೇಶ. ನವೀಕರಣಗೊಳಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನಾ ಕ್ಷೇತ್ರದ ಬೆಳವಣಿಗೆಯಾಗಲಿ, ಹವಾಮಾನ ಬದಲಾವಣೆಗೆ ಅಗತ್ಯ ಕ್ರಮಗಳಾಗಲಿ ಅವುಗಳ ಉದ್ದೇಶ ಅಲ್ಲವೇ ಅಲ್ಲ. ಮೋದಿ ಸರಕಾರಕ್ಕೆ ಆತ್ಮೀಯರಾದ ಉದ್ಯಮಿ/ಕಾರ್ಪೋರೇಟುಗಳ ಸಾಲಬಾಕಿ ಅಳಿಸಿ ಅವರು ಲಾಭ ಮಾಡುವಂತೆ ಮಾಡುವುದಷ್ಟೇ ಈ ತಿದ್ದುಪಡಿಗಳ ಉದ್ದೇಶ. ಖಾಸಗಿ ರಂಗದ ಘಟಾನುಘಟಿ ವಿದ್ಯುತ್ ಉತ್ಪಾದಕರ ಪಟ್ಟಿ ಮತ್ತು ಅವರ ಸಾಲಬಾಕಿಯನ್ನು (ಕೋಟಿ ರೂ.ಗಳಲ್ಲಿ) ನೋಡಿ: ಅದಾನಿ–24,000 ಟಾಟಾ ಪವರ್–14.400, ಇಂಡಿಯನ್ ಬುಲ್ಸ್–21,200, ಲಾಂಕಾ–22,100, ಅನಿಲ ಅಂಬಾನಿ–32,600, ಇಸ್ಸಾರ್ 21,900 ಕೋಟಿ.

ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆ ಸೇರಿದಂತೆ ವಿದ್ಯುತ್ ಕ್ಷೇತ್ರದ ಸಮರ್ಪಕ ಸಮಗ್ರ ಸಮತೋಲಿತ ಬೆಳವಣಿಗೆಗೆ ಮಾರಕವಾದ, ಗ್ರಾಮೀಣ–ಕೃಷಿ ಕ್ಷೇತ್ರಗಳಿಗೆ ರೈತ–ಬಡವರಿಗೆ ಈಗ ಇರುವ ಸಬ್ಸಿಡಿ ಕಡಿತ ಮಾಡುವ ಮೂಲಕ ಅವರ ಜೀವನವನ್ನು ಇನ್ನಷ್ಟು ದುರ್ಭರಗೊಳಿಸುವ ಮತ್ತು ವಿದ್ಯುತ್ ಕ್ಷೇತ್ರವನ್ನು ಸಾಮಾಜಿಕ ಮತ್ತು ಆರ್ಥಿಕ ಮಹತ್ವದ ಒಂದು ಸೇವೆಯಾಗಿ ಅಭಿವೃದ್ಧಿ ಪಡಿಸುವ ಕಾಯಕಕ್ಕೆ ತೊಡಕಾಗುವ ಈ ತಿದ್ದುಪಡಿಗಳನ್ನು ವಿರೋಧಿಸ ಬೇಕಾಗಿದೆ. ಅದರ ಹಿಂದಿರುವ ಹುನ್ನಾರ ಗಳನ್ನು ಬಯಲು ಪಡಿಸಲಾಗಿದೆ. ●



JANASHAKTHI KANNADA VARA PATRIKE JULY 20-26, 2020 Price: Rs. 10/- Date of Publication: 17 JULY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕರ್ನಾಟಕ ಪ್ರಾಂತ್ಯ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ನಿತ್ಯಾನಂದ ಸ್ವಾಮಿ ಅವರು ಗಂಗಾವತಿ ತಾಲೂಕು ಹೊಸಕೇರಾ ಡಗ್ಗಿ ಮತ್ತು ಕೋಟೆಯ ಕ್ಯಾಂಪ್ ಗ್ರಾಮಗಳಲ್ಲಿ ನಡೆಯುತ್ತಿರುವ ಉದ್ಯೋಗ ಖಾತ್ರಿ ಕೆಲಸವನ್ನು ಪರಿಶೀಲಿಸಿ ಸಭೆ ನಡೆಸಿದರು ಹಾಗೂ ಜಿಲ್ಲಾ ಮುಖಂಡರು ಕಾಮ್ರೇಡ್ ಹುಸೇನಪ್ಪ ಘಟಕದ ಅಧ್ಯಕ್ಷ ಲಕ್ಷ್ಮಣ ಹಾಗೂ ಗಂಗಾವತಿ ತಾಲೂಕು ಸಮಿತಿ ಅಧ್ಯಕ್ಷ ಮರಿನಾಗಪ್ಪ ಈ ಸಭೆಯಲ್ಲಿ ಭಾಗವಹಿಸಿದ್ದರು.





ಕುಂದಾಪುರ: ರೈಲು ಖಾಸಗೀಕರಣ ವಿರುದ್ಧ ಪ್ರತಿಭಟನೆ
ಲಾಕ್ ಡೌನ್ ಅವಧಿಯಲ್ಲಿಯೇ ದೇಶದ ಸಂಪತ್ತು ಲೂಟಿ – ಕೆ. ಶಂಕರ್



ರೈಲು ಖಾಸಗೀಕರಣ ಕೇಂದ್ರ ಸರಕಾರದ ಭ್ರಷ್ಟಾಚಾರದ ಮತ್ತೊಂದು ಮುಖವಾಗಿದೆ. ರೈಲು ಜನರ ಜೀವನಾಡಿ ಅದು ಸೇವಾ ಕ್ಷೇತ್ರ ಎಂಬುವುದನ್ನು ಮರೆತು ಲಾಭದ ಕ್ಷೇತ್ರವಾಗಿ ಮಾಡಲು ಬಂಡವಾಳಗಾರರಿಗೆ ನೀಡಿ ಜನರ ಲೂಟಿಗೆ ಲಾಕ್ ಡೌನ್ ಅವಧಿಯಲ್ಲಿಯೇ ಅವಕಾಶ ಮಾಡಿಕೊಡುತ್ತಿದೆ ಖಾಸಗೀಕರಣದಿಂದ ನಿರುದ್ಯೋಗ ಮತ್ತಷ್ಟು ಉಲ್ಬಣಗೊಳ್ಳಲಿದೆ. ಆರ್ಥಿಕ ಸಂಕಷ್ಟ ಹೆಚ್ಚಾಗಲಿದ್ದು ಸರಕಾರಕ್ಕೆ ಬ್ರಹತ್ ಪ್ರಮಾಣದ ಆದಾಯಕ್ಕೆ ಕುತ್ತು ಬರಲಿದ್ದು ದೇಶದ ಅಭಿವೃದ್ಧಿಗೆ ಮಾರಕವಾಗಲಿದೆ ಎಂದು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕೆ. ಶಂಕರ್ ಅವರು ಹೇಳಿದರು.

ಅವರು ಕುಂದಾಪುರದ ರೈಲು ನಿಲ್ದಾಣದದಲ್ಲಿ ನಡೆದ ರೈಲು ಖಾಸಗೀಕರಣದ ವಿರುದ್ಧ ಪ್ರತಿಭಟನೆಯಲ್ಲಿ ಮಾತನಾಡಿದರು.

ಸಿಐಟಿಯು ತಾಲೂಕು ಸಂಚಾಲಕರಾದ ಎಚ್. ನರಸಿಂಹ ಮಾತನಾಡಿ ರೈಲ್ವೆಯ 4,61,487 ಹೆಕ್ಟೇರ್ ಭೂಮಿ, 15 ಸಾವಿರ ರೈಲುಗಳು, 192 ರೈಲು ಮಾರ್ಗಗಳು ದೇಶದ ಸಂಪತ್ತು ಬಹುರಾಷ್ಟ್ರೀಯ ಕಂಪೆನಿಗಳ ಪಾಲಾಗುತ್ತಿರುವುದು ದೇಶ ಆಳುತ್ತಿರುವವರು ನಕಲಿ ದೇಶಪ್ರೇಮಿಗಳು ಎಂದು ಮತ್ತೆ ಸಾಬೀತಾಗಿದೆ ಎಂದು ಹೇಳಿದರು.

ಸರಕಾರದ ಈ ನಿರ್ಧಾರದಿಂದ 19 ಲಕ್ಷ ಜನ ನೌಕರರು ಅವರ ಕುಟುಂಬಗಳು ಬೀದಿಗೆ ಬೀಳಲಿದೆ. ಸರಕಾರ ಖಾಸಗೀಕರಣ ಕೈ ಬಿಡಬೇಕು ಇಲ್ಲವಾದಲ್ಲಿ ನೌಕರರ ಸಂಘಟನೆ ಜೊತೆ ಸೇರಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಪ್ರತಿಭಟನೆಯಲ್ಲಿ ಸುರೇಶ್ ಕಲ್ಲಾಗರ, ಮಹಾಬಲ ವಡೇರ ಹೋಬಳಿ, ಬಲ್ಕೀಸ್ ಇದ್ದರು. ಸ್ಟೇಷನ್ ಮಾಸ್ಟರ್ ಪ್ರಶಾಂತ್ ಶೆಟ್ಟಿ ಅವರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ನೀಡಲಾಯಿತು.

ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

‘ಜನಶಕ್ತಿ ಮೀಡಿಯಾ’ ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 15 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ:

* ಲಾಕ್ಡೌನ್ ಏಕೆ ಅಪ್ರಯೋಜಕ? ಬೇರೇನು ಮಾಡಬೇಕು? (ಜು.17)
* ಕಾರ್ಕಳ ಬಿಜೆಪಿ ಶಾಸಕನ ಸಿಮೆಂಟ್ ಕಿಕ್ ಬ್ಯಾಕ್ (ಜು.16)
* ಎಲ್.ಜಿ.ಪಾಲಿಮರ್ಸ್ ಅನಿಲ ದುರಂತ–ಅಹ್ಮದ್ ಹಗೆರೆ (ಜು.15)
* ಕೊವಿಡ್–19: ಮಹಿಳಾ ಸಂಕಷ್ಟಗಳು, ಪರಿಹಾರಗಳು –ಅಂಜಲಿ ರಾಮಣ್ಣ (ಜು.14)
* ಮೋದಿಯಕೊವಿಡ್‌ಗೋಜಲು– ಡಾ.ಕೆ. ಪ್ರಕಾಶ್ (ಜು.13)
* ವಾರದಕವಿತೆ : ‘ಹೆಣ್ಣಾಟ’ – ಬೆಳಗೆರೆ ಜಾನಕಮ್ಮ (ಜು.12)
* 16 ತಿಂಗಳಿಂದ ಸ್ಟೈಪೆಂಟ್‌ಇಲ್ಲದ ವೈದ್ಯಕೀಯ ವಿದ್ಯಾರ್ಥಿಗಳು (ಜು.11)



ಯೂಟ್ಯೂಬ್ ನಲ್ಲಿ **‘Janashakthi Media’** ಎಂದು ಸರ್ಚ್ ಕೊಡಿ. ನಂತರ ಅಲ್ಲಿ ಕಾಣುವ **‘Subscribe’**ನ್ನು ಕ್ಲಿಕ್ ಮಾಡಿ. ನಂತರದಲ್ಲಿ ಕಾಣುವ **‘ಬೆಲ್ ಐ ಕಾನ್ ಬಟನ್’** ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ. ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

ಕವನ

ಹೆಣ್ಣಾಟ

ಹೆಣ್ಣು ಗಂಡೆಂಬೆರಡು
ಗೊಂಬೆಗಳ ಆಟದೊಳು
ಎನ್ನೊಡಲು ಕುದಿಯುತಿದೆ
ಹೆಣ್ಣಾಟವ ಕಂಡು

ಹೆಣ್ಣಾದ ಕೆಲದಿನಕೆ
ಹಣ್ಣಾಗಿ ಪರಿಣಮಿಸಿ
ಕಣ್ಣುತೆರೆಯದೇ ಬಂದು
ಗೂಡ ಸೇರುವುದು

ಗೂಡಿನೊಳಗೇನಿಹುದು
ಕಾಡ ಹಾಗಲಕಾಯಿ
ತಿರುಳಿಲ್ಲ ಸಿಹಿಯಿಲ್ಲ
ಸವಿಗಂಧವಿಲ್ಲ

ಕೋಗಿಲೆಯ ಕೂಗಿಲ್ಲ
ಪರವಳದ ಹುರುಪಿಲ್ಲ
ಆನಂದ ಸುಳಿವಿಲ್ಲ
ಸುಖ ಲೇಶವಿಲ್ಲ

ವಾಸನಾ ಬಲದಿಂದ
ಬೆಳೆದ ಪಾಶವ ನಂಬಿ
ಒಳಗೆ ನುಗ್ಗುವುದೊಮ್ಮೆ
ಎಳೆಗರುವಿನಂತೆ

ಕುಣಿಸಿದರೆ ಕುಣಿಯುವುದು
ನಲಿಸಿದರೆ ನಲಿಯುವುದು
ಮಣಿಯುವುದು ಜಗಕೆಲ್ಲ
ದಾಸಿ ತಾನಾಗಿ

ಕುದಿಯುವುದು ಒಳಗೊಳಗೆ
ಸ್ವಾತಂತ್ರ್ಯವಿಲ್ಲೆನುತ
ದುಡಿಯುವುದು ಹಗಲಿರುಳು
ಉಸಿರಿರುವ ತನಕ

ಅರಿತು ಅರಿವಿಲ್ಲದೆಯೆ
ಅನುಭವವನುಸಿರದೆಯೆ
ದೇವನನು ನೆರೆನಂಬಿ
ಮುಗಿಸುವುದು ಇರವ

ಮನಸ್ಸಿದ್ದು ಮತಿಯಿಲ್ಲ
ಕಣ್ಣಿದ್ದು ಕುರುಡೆಲ್ಲ
ಹೆಣ್ಣಾಟ ಜನಕಜೆಗೆ
ಏನು ಚೆನ್ನಿಲ್ಲ.....

– ಬೆಳಗೆರೆ ಜಾನಕಮ್ಮ

ಬೆಳಗೆರೆ ಜಾನಕಮ್ಮ ಅವರು ನವ್ಯೋದಯ ಕಾಲಘಟ್ಟದ ಪ್ರಮುಖ ಲೇಖಕಿ. ಚಿತ್ರದುರ್ಗ ಜಿಲ್ಲೆಯ ಬೆಳಗೆರೆಯಲ್ಲಿ 1912ರಲ್ಲಿ ಜನಿಸಿದ ಇವರು 2ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರೂ ತಮ್ಮ ಆಸಕ್ತಿಯನ್ನು ಬಿಟ್ಟುಕೊಡಲಿಲ್ಲ. 10ನೇ ವಯಸ್ಸಿನಲ್ಲಿ ವಿವಾಹ ಬಂಧನಕ್ಕೊಳಗಾಗಿ ಅನೇಕ ಸಾಂಸಾರಿಕ ತೊಂದರೆಗಳ ಮಧ್ಯೆಯೂ ಸೃಜನಶೀಲತೆಯನ್ನು ಜೀವಂತವಾಗಿರಿಸಿಕೊಳ್ಳುತ್ತಾರೆ. ಕುಟುಂಬದೊಳಗಿನ ಹೆಣ್ಣಿನ ಸ್ಥಿತಿ, ಅದರೊಳಗಿಂದಲೇ ವಿಸ್ತರಿಸಿಕೊಳ್ಳುವ ಸಾಮಾಜಿಕ ಕಳಕಳಿ ಇವೆಲ್ಲವ್ರೂ ಅವರ ಕವಿತೆಗಳಲ್ಲಿ ಮೂಡಿವೆ. ತಮ್ಮ 36ನೇ ವಯಸ್ಸಿನಲ್ಲಿ 3ನೇ ಹೆರಿಗೆಯ ಸಂದರ್ಭದಲ್ಲಿ ಜಾನಕಮ್ಮ ತೀರಿಹೋಗುತ್ತಾರೆ. ಇಲ್ಲಿನ ಹೆಣ್ಣಾಟ ಕವಿತೆ ಕುಟುಂಬದೊಳಗೆ ಹೆಣ್ಣಿನ ತೊಳಲಾಟವನ್ನು ತಿಳಿಸುತ್ತದೆ. ಸ್ವತಃ ಜಾನಕಮ್ಮನವರ ಬದುಕೇ ತೊಳಲಾಟದ ಹಾದಿಯಾಗಿದ್ದು ಅವರು ಎತ್ತುವ ಪ್ರಶ್ನೆ ನಮ್ಮನ್ನು ತೀವ್ರವಾಗಿ ಕಾಡುತ್ತದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**